ISTERED NO. M. 1393. . ಎಳ ಪುಟಗಳು. -ಬಿಡಿ ಸಂಚಿಕೆ ಒಂದಾಣಿ



ೀಮದ್ಭೂಮಿತಲೇಷು ಭಾರತಮಹೀಭಾಗಃ ಪ್ರಶಾಸನ್ಮಹೀ
ಾಲೇಷ್ವಾಂಗಲನಾಯಕೋ ನರಕುಲವ್ರಾತೇಷು ಚಾರ್ಯಾನ್ವಯಃ ।
ಶಸ್ತ್ರಸ್ತ್ರದವಿಷು ಸಂವ್ಯವಹೃತಿಪ್ರಾಗಲ್ಭ್ಯಮಾತ್ತೋಽನ್ವಹಂ
ಜೀಯಾದ್ವಿಶ್ವಜನೀನವೃತ್ತಿಚತುರಶ್ರೀಕಂಠಕಂಠೀರವಃ ॥

ಪ್ರತಿ ಮಂಗಳವಾರ ಪ್ರಕಟವಾಗುವ ಶ್ರೇಷ್ಠವರ್ಗದ
ಕನ್ನಡ
ವಾರ್ತಾಪತ್ರಿಕೆ.

ನರರ ಕುಲಗಳೊಳಾರ್ಯವಂಶವು, । ಧರೆಯ ದೇಶಗಳೊಳಗೆ ಭಾರತ
ವರಸುತನಗಳೊಳಾಂಗ್ಲರೊಡೆತನ, ನುಡಿಗಳೊಳು ಮೆರೆವಾ ॥
ಶಿರುಳಗನ್ನಡವೊಂದಕೊಂದೊ । ಪ್ಪಿರುವ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ! ॥

ಸಂಪುಟ ೧೭ ಮಂಗಳೂರು ೧೯೩೬ನೇ ಇಸವಿ ಜನವರಿ ತಾರೀಕು ೨೧ನೇ ಮಂಗಳವಾರ ಸಂಚಿಕೆ ೪೦

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.

ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ.

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

(Regd.)

ಅಮೃತಾಂಜನ ಡಿಪೋ

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

TO INSURE
OR
TO REPRESENT

CONSULT

The Bombay Life Assurance Co., Ltd.

ESTD. 1908.

OFFERS

(1) Attractive schemes of Assurance to suit individual needs.
(2) Rebate for yearly payment of premiums.
(3) Additional Rebate for larger Assurances.
(4) Permanent Disability Benefits without extra.
(5) Increased rate of Bonuses.
(6) Accident Risk on a small extra payment.

ATTRACTIVE RATES OF COMMISSION & BONUSES TO AGENTS.

For particulars apply to any of our offices:—

KOCHIKAR BROTHERS,
BRANCH SECRETARIES.

Offices at

P. B. 337 Mount Rd. Madras.	Visveswarapuram Circle Bangalore City.	Huzur Rd. Calicut.	Car Street Mangalore.	Udipi S. India.	Charni Rd. Girgaum Bombay No. 4.

ಕರ್ನಾಟಕ ವಿಮಾ ಮಂಡಲದ ಕೀರ್ತಿಜ್ಯೋತಿ!

ಪ್ರಥಮ ವರ್ಷದಲ್ಲೇ ಆದರ್ಶ ಉದ್ಯಮ!! ನಿಖಿಲ ಕರ್ನಾಟಕಕ್ಕೇ ಪ್ರಥಮ ಸ್ಥಾನ!!!

ಕರ್ನಾಟಕದಲ್ಲಿ ಸ್ಥಾಪಿತವಾದ ವಿಮಾ ಕಂಪೆನಿಗಳಲ್ಲಿ ಪ್ರಥಮ ವರ್ಷದಲ್ಲೇ ಯಾವುದೂ ಈ ಕಂಪೆನಿಯಷ್ಟು ಕಾರ್ಯ ನಡೆಸಿಲ್ಲ.

ಕನ್ನಡಿಗರ ಒಲವಿನ ಬೆಳಕು ಯಾವುದು?

ಮೈಸೂರು ಜೀವವಿಮಾ ಕಂಪೆನಿ, ಬೆಂಗಳೂರು.

ಇದು ಕನ್ನಡನಾಡಿನ ಕೌತುಕ! ಕನ್ನಡಿಗರ ಸಾಹಸದ ಕನ್ನಡಿ!! ಕನ್ನಡಿಗರ ಭಾಗ್ಯದ ನಿಧಿ!!!

ಮುಂಬೆಳಗೇ ದಿನದ ಕುರುಹು!
ಇಂದಿನ ಪ್ರಗತಿಯೇ ಮುಂದಿನ ಭದ್ರತೆಯ ಹೆಗ್ಗುರುತು!!

1 ಲಕ್ಷ ರೂ.ಗಳ ಷೇರುಗಳು ಮುಗಿದು ಹೋದುವು. 6½ ಲಕ್ಷ ರೂ.ಗಳ ವಿಮಾ ದರಖಾಸ್ತುಗಳು ಬಂದಿವೆ.

ನಮ್ಮ ವೈದ್ಯಪರೀಕ್ಷೆಯಿಲ್ಲದ ಪದ್ಧತಿಗಳು ವಿಮಾಲೋಕಕ್ಕೇ ನೂತನ ಆದರ್ಶ!
ಸರ್ವರ ಅನುಕೂಲ, ಆವಶ್ಯಕತೆಗಳಿಗೆ ಸರಿಹೊಂದುವ ಮತ್ತು ನವೀನ ವೈದ್ಯಪರೀಕ್ಷೆಯಿರುವ ವೈದ್ಯಪರೀಕ್ಷೆಯಿಲ್ಲದಿರುವ ವಿಮಾಪದ್ಧತಿಗಳು.

ಸ್ತ್ರೀಯರೂ ವಿಮೆ ಮಾಡಬಹುದು!

ತಿಂಗಳಿಗೆ 200 ರೂಪಾಯಿಗಳನ್ನು ಸಂಪಾದಿಸಬೇಕೆಂಬ ಆಶೆ ನಿಮಗಿದೆಯೇ?

ಹಾಗಾದರೆ ನಮ್ಮ ಏಜಂಟರಾಗಿ! ವೇತನದ ಮೇಲೂ ಕೆಲಸ ಮಾಡಲು ಅವಕಾಶವಿದೆ.

ಹೆಚ್ಚು ಮಾಹಿತಿಗೆ:—

ಮೈಸೂರು ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಶ್ರೀ ನರಸಿಂಹರಾಜ ರೋಡು, ಬೆಂಗಳೂರು ಸಿಟಿ.

ಕಂಠೀರವ ಮತ್ತು ಕಂಪೆನಿ,
ಮ್ಯಾನೇಜಿಂಗ್ ಏಜಂಟ್ಸ್.

MESSRS. RAJULU & CO.,

DISTRICT DEALERS FOR ADDISON & CO. LTD., MADRAS,

MANGALORE.

For Morris, Plymouth, Airflow—Chrysler & De Soto Cars,
Dodge Trucks, Ariel & Triumph Motor Cycles.

"Announcing a remarkable Car, THE NEW MORRIS EIGHT"
Outstanding road performance with exceptional
economy in maintenance costs.

DODGE Trucks furnish more service. It will deliver more work with less loss of time and with greater profits.

MR. L. SEQUEIRA,
Sales Representative,
Messrs. Rajulu & Co.

THE CANARA BANKING CORPORATION UDIPI, LTD.

(Incorporated in British INDIA.)

ESTD:—1906.

Head Office:—UDIPI, S. K.

BRANCHES:-

1. Udipi, 2. Coondapoor, 3. Car Street—Mangalore, 4. Bunder—Mangalore, 5. Shimoga, 6. G. T.—Madras, 7. Mercara and 8. Virarajendrapet.

DEPOSITS.

1922	1926	1930	1934
Rs. 2,28,419/—	6,43,940/—	20,23,837/—	24,95,329.

30—11—1935.

RS. 27,40,312/—.

SAVINGS BANK ACCOUNTS.

INTEREST allowed at 3½% p. a.

FACILITIES:—

1. Withdrawal by **Cheques**. 2. Production of pass books unnecessary at the time of withdrawal 3. Accounts transferred FREE of charge from one office to another.

THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum.
Savings Bank Deposits at 4½% per annum.

FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.

Unique Banking facilities to Businessmen and interested Public.

Apply for particulars:—

K. R. GURU, *Managing Director.*

ಓರಿಯಂಟಲ್
ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿ

ಸ್ಥಾಪಿತವಾದುದು: 1874. ಮುಖ್ಯ ಕಾರ್ಯಾಲಯ—ಮುಂ

1934ನೇ ವರ್ಷದ ವರದಿಯ ಸಾರಾಂಶ.

ಕೊಡಲ್ಪಟ್ಟ ಹೊಸ ಪಾಲಿಸಿಗಳು .	ರೂ.	7,62,4
ವಾರ್ಷಿಕ ಆದಾಯ . .	,,	3,14,01
ಚಾಲ್ತಿಯಲ್ಲಿರುವ ಪಾಲಿಸಿಗಳು .	,,	54,20,3
ತೆತ್ತ ಜುಮ್ಮಾ ವಿಮಾ ಹಣ	,,	16,29,88,814
ಅಧಿಕವಾಗಿರುವ ನಿಧಿಗಳು	,,	15,53,88,84

ಈ ಅಂಕೆಗಳು

ಓರಿಯಂಟಲ್

ಕಂಪೆನಿಯ ಭದ್ರತೆಯ ಮತ್ತು ಜನಪ್ರಿಯತೆಯ ಪರಿಮಾಣತೆಯನ್ನು ತೋರಿಸುತ್ತವೆ.

ತಡವಾಡ ಬೇಡಿರಿ

ನಿಮ್ಮ ಜೀವನಿಮೆಯನ್ನು, ಜನಪ್ರಿಯವೂ, ವೃದ್ಧಿಂಗತವೂ ಆದ ಹಿಂದೀ ವಿಮಾ ಸಂಸ್ಥೆಯಲ್ಲಿ ಉತ್ತರಾಯಿಸಲು.

ಮಾಹಿತಿ ಬಗ್ಗೆ ಬರೆಯಿರಿ:—

ಜಿ ಮೆನೇಜರ್, **ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.**

ಅಥವಾ ಈ ಕೆಳಗೆ ಕಾಣಿಸಿದ ಕಂಪೆನಿಯ ಯಾವ ಆಫೀಸಿಗೂ ಬರೆಯಬಹುದು:—

ಆಗ್ರಾ	ಕೊಲೊಂಬೊ	ಲಾಹೋರ್	ರಾಯಪುರ
ಅಜ್ಮೀರ್	ಡಾಕ್ಕಾ	ಲಕ್ನೋ	ರಾಜಶಾಹಿ
ಅಹಮ್ಮದಾಬಾದ್	ದಿಲ್ಲಿ	ಮದ್ರಾಸ್	ರಾಂಚಿ
ಅಲ್ಲಹಾಬಾದ್	ಗೌಹತಿ	ಮಾಂಡಲೇ	ರಂಗೂನು
ಅಂಬಾಲ	ಗುಂಟೂರು	ಮಧುರಾ	ರಾವಲ್ಪಿಂಡಿ
ಬಾರೇಲಿ	ಜಲಗಾಂ	ಮಡಿಕೇರಿ	ಸಿಂಗಾಪೂರ್
ಬಳ್ಳಾರಿ	ಜಲಪೈಗುರಿ	ಮೊಂಬಾಸಾ	ಸಕ್ಕೂರ್
ಕಲ್ಕತ್ತಾ	ಜಬಲ್‌ಪೂರ್	ನಾಗ್ಪೂರ್	ತ್ರಿಚಿನಾಪಳ್ಳಿ
ಕಲ್ಲಿಕೋಟೆ	ಕರಾಚಿ	ಪಾಟ್ನಾ	ತ್ರಿವೆಂದ್ರಮ್
ಕೊಯಂಬತ್ತೂರು	ಕೌಲಾಲಂಪೂರ್	ಪೂನಾ	ವಿಶಾಖಪಟ್ಟ

ಓರಿಯಂಟಲ್ ಬಿಲ್ಡಿಂಗ್ಸ್, ಎಂ. ವಿ. ಮುತ್ತುಕೃಷ್ಣ ನ್ಯಾಡು
ಸೌತ್ ಪೆರೇಡ್, ಬೆಂಗಳೂರು. ಬ್ರಾಂಚ್ ಸೆಕ್ರೆಟರಿ.

ಡಿ. ವಾಸ್ ಎಂಡ್ ಸನ್ಸ್, ಏಜಂಟ್ಸ್,
ಮಂಗಳೂರು, ದ. ಕ

ತೊನ್ನಿಗೆ ಅದ್ಭುತ ಔಷಧಿ

(ರಿಜಿಸ್ಟರ್ಡ್)

ಗುಣ ದೊರಕದಿದ್ದರೆ ರೂ. 1000 ಬಹುಮಾನ!

18 ಪ್ರಕಾರಗಳ ಎಲ್ಲಾ **ಕುಷ್ಟ ರೋಗಗಳೂ, ಬಿಳಿ ತೊನ್ನು, ಚರ್ಮವ್ಯಾಧಿಗಳೂ** ಮತ್ತು **ನೇಹ ಸಂಬಂಧ ರೋಗಗಳೂ,** ಬುಡ ಸಮೇತ ಕಿತ್ತುಹೋಗಿ, ಖಂಡಿತವಾಗಿಯೂ ಗುಣಹೊಂದುವುವು. 25 ವರ್ಷಗಳ ಜಗತ್ಪ್ರಸಿದ್ಧಿಯಿದೆ. ಇಂಜೆಕ್ಷನ್ ಮತ್ತು ಇತರ ಯಾವ ರೀತಿಯಲ್ಲಿಯೂ ಗುಣಹೊಂದದ ರೋಗಿಗಳೂ ಇದರಿಂದ ಗುಣಪಡೆದಿರುವರು. ಗುಣಕ್ಕಾಗಿ ಭರವಸವಿದೆ. ಕುಷ್ಟ ರೋಗ ಮತ್ತು ಚರ್ಮವ್ಯಾಧಿಗಳಿಗಾಗಿ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ.

ಸೇಲಮಿನ ಡಾ। ವಿ. ಎನ್. ಸಾಶನ್‌ರವರು ಬರೆಯುತ್ತಾರೆ:— ನಾನು ನಿಮ್ಮ **ಅತ್ಯಾಶ್ಚರ್ಯ ಕುಷ್ಟರೋಗ ನಿರ್ಮೂಲಿನಿ** ಯನ್ನು ಇಬ್ಬರು ಕುಷ್ಟರೋಗಿಗಳಿಗೆ ಉಪಯೋಗಿಸಿದ್ದು, ಪರಿಣಾಮವು ಉತ್ಕೃಷ್ಟವಾಗಿತ್ತು. **ಲಕ್ಷ್ಮಿ ಮತ್ತು ಕಂಪೆನಿ**ಯವರ ಸಿದ್ಧೌಷಧದಿಂದ ಸಂಪೂರ್ಣ ಗುಣ ಹೊಂದಿದ ನಂತರ, ರೋಗಿಗಳ ರಕ್ತವನ್ನು ಪರೀಕ್ಷಿಸಿದಲ್ಲಿ, ಅದು ಕುಷ್ಟ ರೋಗದ ವೊಳಿಕೆಗಳಿಂದ ವಿರಹಿತವಾಗಿತ್ತು. ಈ ಔಷಧವು ಅತ್ಯುತ್ತಮವೆಂದೂ, ಟೀಕೆಯೇನೂ ಅಗತ್ಯವಾಗಿಲ್ಲವೆಂದೂ ನಾನು ಕಂಡಿರುತ್ತೇನೆ.

ಯಾವತ್ತೂ ಮಾಹಿತಿಗಾಗಿ ಮತ್ತು ಕೆಟಲಾಗಿಗೆ ಬರೆಯುವರೆ ವಿಳಾಸ:—

ಮೆಸರ್ಸ್ ಲಕ್ಷ್ಮಿ ಅಂಡ್ ಕೋ. (ರಿಜಿಸ್ಟರ್ಡ್),
ತೊನ್ನು ಚಿಕಿತ್ಸಾ ಪ್ರವೀಣರು,
ವಾಲ್ಟೇರ್, ಆರ್. ಎಸ್. ಪೋಸ್ಟ್.

ಗುಪ್ತಮಂತ್ರ

100 ರೂಪಾಯಿಗಳ ಬಹುಮಾನ.

ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಸಾಧಿಸದ ಕೆಲಸಗಳು ಈ 'ಮಂತ್ರ'ದ ಏಳು ಬಾಯಿ ಪುನರುಚ್ಚಾರಣೆಯಿಂದಲೇ ಸಾಧ್ಯವಾಗುವುವು. ಅದರ ಪರಿಣಾಮವು ನೆಟ್ಟಗಾಗುವಂತೆ ಮಾಡಲು ನೀವು ಸ್ವಲ್ಪವೂ ಕಷ್ಟಪಡಬೇಕಾಗಿಲ್ಲ. ಯಾವ ಸಿದ್ಧತೆಯೂ ಇಲ್ಲದೆ ಅದು ಒಳ್ಳೆಯ ಫಲ ಕೊಡುವುದು. ಅಕೆ ಎಷ್ಟೇ ಕಠಿನ ಮನಸ್ಸಿನವಳಾಗಿಯೂ, ಗರ್ವಿಷ್ಠೆಯಾಗಿಯೂ ಇರಲಿ! ಈ ಮಂತ್ರವನ್ನು ಒತ್ತಿದಾಗ ಅವಳಲ್ಲಿ ನಿಮ್ಮ ಮೇಲಿನ ಮಮತೆಯುಂಟಾಗಿ, ನಿಮ್ಮೊಡನೆಯೇ ಯಾವಾಗಲೂ ಇರಬೇಕೆನ್ನುವ ಹೆಂಬಲು ಹುಟ್ಟುವುದು. ಇದಕ್ಕೆ **'ವಶೀಕರಣ ಮಂತ್ರ'**ವೆನ್ನುವರು. ಅದು ನಿಮ್ಮನ್ನು ಅದೃಷ್ಟಶಾಲಿಯನ್ನಾಗಿ ಮಾಡುವುದು; ನಿಮಗೆ ಕೆಲಸವನ್ನೂ 'ಎಡ್ವಾನ್ಸ್'ನ್ನೂ ಕೊಡಿಸುವುದು; ವ್ಯಾಜ್ಯ ವ್ಯವಹಾರಗಳಲ್ಲಿ ನೀವು ಗೆಲ್ಲುವಂತಾಗುವುದು; ವ್ಯಾಪಾರದಲ್ಲಿ ನಿಮಗೆ ಲಾಭ ಬರುವುದು. ಇದು ಸುಳ್ಳೆಂದು ರುಜುವಾತಾದಲ್ಲಿ ನಿಮಗೆ ನಷ್ಟ ಬಹುಮಾನ—ರೂ. 100! ಪೋಸ್ಟೇಜ್ ಕೂಡ ಬೇಕಿಲ್ಲ. ರೂ. 2—7—0, ಪತ್ರವ್ಯವಹಾರ ಇಂಗ್ಲೀಷಿನಲ್ಲೇ.

Siddha Manthra Ashram,
No. 174, P. O. Katri Sarai, (GAYA.)

THE
Popular Insurance Co., Ltd.
Head Office:-MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ:—ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ.
ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/- ಬೋನಸ್ ಹಂಚಲಾಗುವುದು

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರ ಕುಶಲರೂ, ಯೋಗ್ಯರೂ ಆದ ಏಜಂಟರು ಸಂಬಳ ಮತ್ತು ಕಮಿಶನಿನ ಮೇಲೆ ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು **ಪುನರ್ವಸು** ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—6—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—12—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬಿಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವೃಥಾ (ಬೇನೆ)ಯನ್ನು ತೀಫ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ವಗೈರೆ ಬೇರೆ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

ಏಜಂಟರು—**ಓರಿಯಂಟ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, ಸಂಪಿಗೆ ರೋಡ್,**
ಮಲ್ಲೇಶ್ವರಮ್, ಪಿ. ಒ. ಬೆಂಗಳೂರು ಸಿಟಿ.

ಕೋಹಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. ಕೋಲನ್ ವಾಟರ್ (ರಿ. ನಂ. ೧೪೭೨) ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯಾಮೃತ.

೨. **ಮುಸ್ಕ್ ಲವೆಂಡರ್**—ಕರವಸ್ತ್ರದಲ್ಲಿ ಉಪಯೋಗಮಾಡತಕ್ಕ ಸುವಾಸನೆಯಾದ ಸೆಂಟು.

೩. **ಅನಂಸ್ ಸ್ನೋ**—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.

೪. **ಬ್ರಿಲಿಯಂಟಾಯಿನ್**—ಕೂದಲಿನ ಸೌಂದರ್ಯಕ್ಕೋಸ್ಕರ ಅರ್ಹವಾದ ಮತ್ತು ಸುವಾಸನೆಯುಳ್ಳ ಪರಿಮಳ.

೫. **ಬ್ರಾಹ್ಮೀ ತೈಲ**—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದುರಿ ಹೋಗುವವರ ಸಂಬಂಧದಲ್ಲಿ ಅದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳೆಸುತ್ತದೆ.

೬. **ದ್ರಾಕ್ಷಾಸವ**—ಮಂದಾಗ್ನಿ, ಅಜೀರ್ಣ, ಶ್ವಾಸ, ದಮ, ಇತ್ಯಾದಿಗಳಿಗೆ ಅತ್ಯುತ್ತಮ. ದೇಹಬಾಧೆಯನ್ನು ಕ್ರಮವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.

೭. **ಆರಾಮೇತಿಹಾಲ್**—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾದುವುಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.

೮. **ವೆಜಿಟೇಬಲ್ ಪೈನ್-ಹಂಟರ್**—ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳಿಗೋಸ್ಕರ ಕುಡಿಯತಕ್ಕ ಔಷಧ.

೯. **ರತ್ನಾಂಜನ ಪೇನ್ ಬಾವುಂ**—ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ

೧೦. **ಕ್ರೀಸೋರಿಂಗಾ**—ಕಪ್ಪು ಅಥವಾ ಕೆಂಪು ಹುಳಕಡ್ಡಿಯನ್ನು ನಿರ್ಮೂಲಮಾಡುತ್ತೆ.

೧೧. **ಓಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್**—ಕೇಶಗಳಿಗೋಸ್ಕರ ಗುಲಾಬಿಯ ಮಧುರವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

ಕೋಹಿನೂರ್ ವರ್ಕ್ಸ್,
60 ಅಬ್ದುಲ್‌ರಹಿಮಾನ್ ಸ್ಟ್ರೀಟ್,
ಬೊಂಬಾಯಿ, 3.

KOHINOOR WORKS,
60 Abdul Rehiman Street,
BOMBAY, No. 3.

NEDUNGADI BANK, LIMITED, CALICUT.
ನೆಡುಙ್ಙಾಡಿ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು:—ಕಲ್ಲಿಕೋಟೆ.

1899ರಲ್ಲಿ ಸ್ಥಾಪಿತವಾದದ್ದು. 1913ರಲ್ಲಿ ರಿಜಿಸ್ಟ್ರಿಯಾದದ್ದು.

ಅಧಿಕೃತವಾದ ಮೂಲಧನ	ರೂ. 42,17,980	ಕಂತು ಮೇರೆಗೆ ತೆತ್ತ ಪಾಲುಗಾರರು ಇನ್ನೂ ತೆರಲು ಬಾಕಿ ಇರುವ ಮೊತ್ತ ಮಿಕ್ಕಿದೆ	ರೂ. 9,00,000
ಆಫೀಸಿದ ಮತ್ತೂ ಚೆಂದಾ ಕೊಟ್ಟ ಮೂಲಧನ	ರೂ. 17,17,980		
ತೆತ್ತು ಬಂದ ಮೂಲಧನ ಮಿಕ್ಕಿದೆ	ರೂ. 7,50,000	ಕ್ಷೇಮನಿಧಿ ಮಿಕ್ಕಿದೆ	ರೂ. 5,00,000

ಶಾಖೆಗಳು:—ಆಲಪ್ಪಿ, ಬಡಗರ, ಕಲ್ಲಿಕೋಟೆ, ಕೊಚ್ಚಿನ್, ಕೊಯಮುತ್ತೂರು, ಎರ್ನಾಕುಳಂ, ಮದ್ರಾಸ್, ಮಂಗಳೂರು, ಮುಂಜೇರಿ, ಒಟ್ಟಪಾಲಂ, ಪಾಲ್ಘಾಟ್, ಟೆಲಿಚೆರಿ, ತಿರೂರು, ತ್ರಿಚೂರು ಮತ್ತೂ ತ್ರಿವೆಂಡ್ರಂ.

ಡೈರೆಕ್ಟರ್ ಸಭೆಯ ಚೆಯರ್‌ಮ್ಯಾನ್:
ರಾವ್ ಬಹದೂರ್ ಡಾಕ್ಟರ್ ಪಿ. ಕೆ. ವಾರಿಯರ್, ಮದ್ರಾಸಿನ ಸರ್ಜನ್ ಜನರಲರ ಮಾಜೀ ಪರ್ಸನಲ್ ಅಸಿಸ್ಟಾಂಟ್

ಎಲ್ಲ ಬಗೆಯ ಬೇಂಕಿಂಗ್ ವಹಿವಾಟವನ್ನೂ ನಡೆಸಲಾಗುವುದು.

ಚಾಲ್ತಿ ಲೆಕ್ಕದ ಶಿಲುಕಿನ ಮೇಲೆ ಬಡ್ಡಿ ಕೊಡಲಾಗುತ್ತದೆ.

ಸೇವಿಂಗ್ಸ್ ಬ್ಯಾಂಕ್ ಠೇವಣಾತಿಯ ಮೇಲೆ ಸೇಕಡಾ ವರ್ಷಕ್ಕೆ 4½.

ನಿರಖು ಠೇವಣಾತಿಯ ಮೇಲಿನ ಬಡ್ಡಿಯ ದರವನ್ನು ಬೆರೆದು ತಿಳಿದುಕೊಳ್ಳಿ. ಬಡ್ಡಿ ಪಾವತಿ 6 ತಿಂಗಳಿಗೊಮ್ಮೆ.

ಈ ವಾರದ ಕಥೆ—

ವರದಕ್ಷಿಣೆ.

(ಲೇಖಕ:—ಶ್ರೀ। ಐ. ಯಜ್ಞನಾರಾಯಣ ಉಡುಪ, ಮುಖ್ಯ ಉಪಾಧ್ಯಾಯ, ಕೊರಗಿ ಸ್ಕೂಲ್, ಕುಂದಾಪುರ.)

ಈ ಸಂಸಾರಸಾಗರದ ಹೆದ್ದೆರೆಗಳ ನಡುವೆ ಮುಳುಗಿ ಮಾಯವಾಗುವ ಬಂಡೆಗಲ್ಲಾಗುವ ಬದಲು ಚೆಪ್ಪು ಕಡ್ಡಿಯಾಗಿ ಹುಟ್ಟಿದೆನೇಕೆ? ಶ್ರೀಮಂತರ ಮನೆಯ ಸುಣ್ಣವಾಗದೆ ಬಡವರ ಮನೆಯ ರನ್ನವಾಗಿ ಜನಿಸಿದೆನೇಕೆ? ಮುಪ್ಪಿನ ತಂದೆಗೆ ಊರುಗೋಲಾಗದೆ ಅವರ ರಕ್ತವನ್ನು ಚಿಮ್ಮಿಸುವ ಮುಳ್ಳು ಕಂಟಿಯಾದೆನೇಕೆ? ಈ ಪ್ರಾಯ—ಈ ಸೌಂದರ್ಯ—ಈ ಹರೆಯದ ಬಾಯಾರಿಕೆ ಇವೆಲ್ಲವನ್ನೂ ವಿಧಾತನು ಈ ನೀರಸವಾದ ಮರುಭೂಮಿಯಲ್ಲಿ ಹುದುಗಿಸಿಟ್ಟನೇಕೆ? ಇಷ್ಟೆಲ್ಲ ಹರಿದ ಹನ್ನೊಂದು ಮಾತುಗಳೇಕೆ? ಹಿರಣ್ಯಗರ್ಭನು ಸೊಬಗಿನೊಂದಿಗೆ ಸಂಪತ್ತನ್ನು ಕೊಡಲಾರನಾದರೆ ಹಿರಣೆಯನ್ನೇಕೆ ಸೃಷ್ಟಿಸಿದನು? ಸೃಷ್ಟಿಸಿದ ಮೇಲಾದರೂ ಹಿರಣ್ಮಯ ಪುಷ್ಪಕ್ಕೊಂದು ಮಧುಕರನನ್ನು ದಾನ ಮಾಡಲೇಕೆ ಮರೆತನು?

ಹಿರಣಿಗೆ ಹದಿನಾರು ವರ್ಷ ತುಂಬಿತು. ಇವಳು ಜನ್ಮತಃ ಸುಂದರಿ. ತಾರುಣ್ಯದ ವಸಂತನ ಆಧಿಪತ್ಯದಿಂದಂತೂ ಅವಳ ಅಂಗಪ್ರತ್ಯಂಗಗಳೂ ಕುಸುಮಕೋಮಲವಾಗಿ ಬಳೆದು ಬೆಡಗಿನ ಮುದ್ದೆಯಾಗಿದ್ದುವು. ಅವಳ ಶಿಕ್ಷಣೆಯನ್ನು ಕಂತುವ ಸಂತರು ವಹಿಸಿದ್ದುದರಿಂದ ದಿನಕ್ಕೊಂದು ಬಗೆಯಿಂದ ಬಳೆಯುವ ಅವಳ ರಂಗಿನ ಒಯ್ಯಾರವು ಹಳ್ಳಿಗರ ಚರ್ಚೆಗೆ ವಿಷಯವಾಗಿತ್ತು. ಗ್ರಾಮಬಾಲೆಯರು ನಿಷ್ಕಾರಣವಾಗಿ ಹೆರವರ ಮೇಲೆ ಹೆಟ್ಟಣೆಯ ಹೊರೆಯನ್ನು ಹೊರಿಸುವವರು. ಹಿರಣೆಯಂತೂ ತಾರುಣ್ಯರಂಗಮಂಟಪದಲ್ಲಿ ಎರಡು ಹಜ್ಜೆಗಳನ್ನಿಟ್ಟವಳು. ಅಂದಮೇಲೆ ಕೇಳುವುದೇನು? ಪ್ರತಿಯೊಬ್ಬರೂ ಹಿರಣೆಯ ಮೇಲೆ ಒಂದೊಂದು ಕವನವನ್ನು ಕಟ್ಟಿ ಹಳ್ಳಿಯಲ್ಲೆಲ್ಲಾ ಹರಡುತ್ತಿದ್ದರು. 'ಹಿರಣೆಯು ಮಧುವನ್ನು ಕಂಡು ನಕ್ಕಳು.-ಹಿರಣೆಯು ಹೊಳೆಯಲ್ಲಿ ರಾಮುವಿನೊಡನೆ ಮಾತಾಡುತ್ತಿದ್ದಳು.—ನಮ್ಮ ತಿಪ್ಪನ ಮೇಲೆ ಹಿರಣೆಯು ಕಣ್ಣಿಟ್ಟಿರುವಳು.' ಮೊದಲಾದ ಮಾತುಗಳ ಸುರಿಮಳೆಯಿಂದ ನಾರಾಯಣ ರಾಯರ ಮನಸ್ಸನ್ನು ಚಿವುಟಿದಂತಾಗುತ್ತಿತ್ತು. ನೆರೆಯವರ ಅಪಹಾಸ್ಯ-ಬಂಧುಬಳಗದವರ ತಲೆಗೊಂದು ಮಾತು-ಮುದ್ದು ಹಿರಣ್ಮಯಿಯ ದೈನಂದಿನದ ಸಂತಾಪ-ಇವೆಲ್ಲ ನಾರಾಯಣ ರಾಯರ ಮನಸ್ಸನ್ನು ಕೊರೆಯುತ್ತಿದ್ದುವು. ಅವರಿಗೆ ಹೆಣ್ಣು ಹೆತ್ತುದೇ ತಪ್ಪೆಂದು ತೋರಿತು.

ಬಾಳೇಕುದುರು ಹಸುರು ಹಂದರದ ಹಳ್ಳಿ. ಈ ಹಳ್ಳಿಯಲ್ಲಿ ಪ್ರಕೃತಿದೇವಿಯು ಸೃಷ್ಟಿಯ ಸೊಬಗನ್ನು ತಂಗಾಳಿಯೊಡನೆ ಕಲಸಿ ಅಲ್ಲಲ್ಲಿ ರಾಶಿಹಾಕಿದ್ದಳು. ಈ ಗ್ರಾಮವೇ ನಾರಾಯಣ ರಾಯರ ಹುಟ್ಟೂರು. ಇವರು ಶ್ರೀಮಂತರಲ್ಲದಿದ್ದರೂ ಗೇಣುದ್ದದ ಹೊಟ್ಟೆಗಾಗಿ ಜನರಿಗೆ ತಲೆತಗ್ಗಿಸುವವರಲ್ಲ. ಇವರ ಹೆಂಡತಿ ಜಾನಕಮ್ಮನ ಕಾಲದಲ್ಲಿ ರಾಯರು ಸ್ವಲ್ಪ ಗಟ್ಟಿ ಅಸಾಮಿಯಾಗಿದ್ದರು. ಈಗ ಊಟಕ್ಕೇ ಹರಹರವಾಗಿತ್ತು. ಸೌಭಾಗ್ಯವತಿ ಜಾನಕಮ್ಮನು ಹಿರಣೆಯನ್ನು ಭೂಮಿಗೆ ಕೆಡೆದ ದಿನವೇ, ಮುದ್ದು ಮಗಳ ಭಾವೀ ಆಪತ್ತುಗಳನ್ನು ಕಾಣಲಾರೆನೆಂದೊ, ಅಥವಾ ಹಿರಣೆಯ ತಲೆಯ ಮೇಲೆ ಜೀವನದ ಮುಗ್ಗಟ್ಟುಗಳನ್ನು ಹೊರಿಸಿ ಕಳುಹಿಸಿದ ಬ್ರಹ್ಮನೊಡನೆ ಜಗಳಾಡಲೆಂದೊ-ತಿಳಿಯದು, ಇಹಲೋಕದಿಂದ ಪರಾರಿಯಾಗಿದ್ದಳು. ರಾಯರು, ಇನ್ನೊಂದು ಮದುವೆಯಾದಲ್ಲಿ ಹಿರಣಿಗೆ ತೊಂದರೆಯಾಗಬಹುದೆಂದು ಮದುವೆಯ ಬಾಯಾರಿಕೆಯನ್ನು ಸಹಿಸಿಕೊಂಡಿದ್ದರು. ಅವರಿಗೆ ಹಿರಣ್ಮಯಿಯನ್ನು ಯೋಗ್ಯ ಪಾತ್ರನ ಕೈಯಲ್ಲಿಟ್ಟು ಕಣ್ಣು ಮುಚ್ಚಬೇಕೆಂಬ ಬಯಕೆ ಇತ್ತು. ಆದರೆ ಅಕಾರದಿಂದ ಔಕಾರದ ವರೆಗೆ ಓದಲು ಬಂದ ಬಾಹುಕನಂತಿದ್ದ ತರುಣರೇ ನಾನೂರೈನೂರು ಕೇಳುತ್ತಿದ್ದುದರಿಂದ, ವರದಕ್ಷಿಣೆ ಕೊಡಲು ಕೈಯಲ್ಲಿ ಕಾಸಿಲ್ಲದೆ ಹಿರಣೆಯ ಭವಿಷ್ಯವನ್ನು ತಮ್ಮ ಬಡತನವೆಂಬ ಕನ್ನಡಿಯಲ್ಲಿ ನೋಡಿಕೊಂಡು ನಿಟ್ಟುಸಿರು ಬಿಡುತ್ತಿದ್ದರು.

ಬೈಗಿನ ಹೊತ್ತು. ಸೂರ್ಯನು ಸಂಧ್ಯಾ ಸ್ತ್ರೀಯ ವ್ಯಾಮೋಹಕ್ಕೆ ಬಲಿ ಬಿದ್ದು ಮಧ್ಯಾಹ್ನವೆಂಬ ತಾರುಣ್ಯದ ತೇಜಸ್ಸನ್ನೆಲ್ಲಾ ಕಳೆದುಕೊಂಡು ಸಪ್ಪಗಾದ ದುರ್ವಾರ್ತೆಯನ್ನು ಮಾರುತನು ಹೊತ್ತುಕೊಂಡು ಅಂಗಡಿ—ಹೊಂಗುಡಿ—ಚುಂಗಡಿ ಗುಡಿಸಲುಗಳನ್ನು ಬಿಡದೆ ಹೊಕ್ಕು 'ಸ್ತ್ರೀವ್ಯಾಮೋಹವು ಕೆಟ್ಟದು' ಎಂದುಪದೇಶಿಸುತ್ತ ಮೂಡಣದಿಸೆಯ ಕಡೆಗೆ ಸಾಗಿದ್ದನು. ಹಿರಣೆಯು ಸಂಜೆಯ ಅಡಿಗೆಯ ತಯಾರಿಯಲ್ಲಿದ್ದಳು. ರಾಯರು ಜಗಲಿಯ ಮೇಲೆ ಕೂತು ಜನಿವಾರ (ಜನ್ನದಾರ) ಮಾಡುತ್ತಿದ್ದರು. ಅಷ್ಟರಲ್ಲಿ ನೆರೆಮನೆಯ ಶ್ಯಾಮುವು ಬಂದು ಒಂದು ಲಕ್ಕೋಟೆಯನ್ನು ಕೊಟ್ಟು ಹೋದನು. ರಾಟೆ (ರಾಟಿ, ತಕ್ಲಿ)ಯನ್ನೂ, ನೇಣನ್ನೂ, ಕರಟ (ಗರಟ)ದಲ್ಲಿಟ್ಟು ಲಕ್ಕೋಟೆ ಒಡೆದರು. ಕಾಗದದ ಮೇಲ್ಗಡೆಯಲ್ಲಿ.....ಶ್ರೀ ಮಠವೆಂದಿತ್ತು. ರಾಯರಿಗೆ ಎದೆ ಡವಗುಟ್ಟಹತ್ತಿತು. ಓದುತ್ತಿದ್ದಂತೆ ವೋರೆ ಕಪ್ಪಿಟ್ಟು ಕಣ್ಣು ಕಣ್ಣೀರಿನಿಂದ ಕುರುಡಾಗ ತೊಡಗಿತು. ಕಾಗದವನ್ನು ಓದಿ ಮುಗಿಸಿ ಕೆಳಗಿಟ್ಟು—'ಅಂಧ ಮಠಾಧಿಪತಿಗಳೇ! ಕಲ್ಲೆದೆಯ ಸಮಾಜವೇ! ಶ್ರೀಮಂತ ತರುಣಿಯರು ಮದುವೆಯ ಮೊದಲೇ ಕುಲಗೆಟ್ಟರೂ ಮೂಗು ಹಿಡಿದು ಬಾಯಿ ಮುಚ್ಚಿ ಪಿಳಿಪಿಳಿ ನೋಡುತ್ತಿರುವಿರಿ. ಬಡವರು ವರದಕ್ಷಿಣೆಯನ್ನು ಕೊಡಲಾರದೆ ಒದ್ದಾಡುತ್ತಿರುವುದನ್ನು ಕಂಡೂ ಅವರಿಗೊಂದಿಷ್ಟು ನೆರವಾಗದೆ, ನಿರ್ಮಲ ಹುಡುಗಿಯರ ಮೇಲೆ ಮಸಿಗೆರೆಯನ್ನೆಳೆಯುವ ನಿಮ್ಮ ವರ್ತನಕ್ಕೆ ಧಿಕ್ಕಾರವಿರಲಿ! ಬಡ ಕನ್ಯಾಪಿತೃವನ್ನು ಹಳಿವು ಹೊದ್ದ ದಂತೆ ಮಾಡುವುದನ್ನು ಬಿಟ್ಟು, ಬಾಯಿ ತೆರೆದುಕೊಂಡು 'ಬಹಿಷ್ಕಾರ! ಬಹಿಷ್ಕಾರ!'ವೆಂದು ಬರೆದಿರುವಿರಷ್ಟೆ! ಈ ಗೋಳು ನಿಮಗೆ ತಟ್ಟದಿರದು!' ಎಂದು ಕಾಗದವನ್ನು ಹಿರಣೆಯ ಕಣ್ಣಿಗೆ ಬೀಳಗೊಡಬಾರದೆಂದು ಹರಿದು ನುಚ್ಚುನೂರು ಮಾಡಿ ಬಿಸಾಟರು. ವಾಚಕವೃಂದ! ಆ ಕಾಗದದ ಸಂಗತ್ಯಾನುಸಾರಗಳು ನಿಮಗೆ ಹೊಳೆದಿರಬಹುದು. ಆದರೂ ಆ ಗುಟ್ಟಿನ ಪತ್ರವನ್ನು ನಿಮಗೆ ಮಾತ್ರ ಬಿಚ್ಚಿ ಹೇಳುತ್ತೇನೆ. ಹಿರಣಿಗೆ ಹೇಳಬೇಡಿ. ಕೈ ಮುಗಿಯುತ್ತೇನೆ. ಕಾಗದದಲ್ಲಿ ಕಠಿಣ ಹೃದಯದ ಸಮಾಜದ ಸೂತ್ರಧಾರರೆನ್ನಿಸಿಕೊಂಡ ಮಠಾಧಿಪತಿಗಳ ಕರ್ಣಶೂಲದ ಒಕ್ಕಣೆಯಿತ್ತು.

(ಪತ್ರ) ತಾಜಾ ನಕಲು.

.....ಶ್ರೀ ಮಠದ.....ಸನ್ನಿಧಾನದಿಂದ—

ನಾರಾಯಣ ರಾಯರಿಗೆ ಬರೆದ ಎಚ್ಚರಿಕೆಯ ಪತ್ರ—

ನಿಮ್ಮ ಮಗಳು ಮದುವೆಯಾಗದೆ ಋತುಮತಿಯಾಗಿದ್ದಳೆಂದು ವರ್ತಮಾನ ತಲಪಿದೆ. ಇದು ಘೋರ ಪಾತಕ (?), ಶಾಸ್ತ್ರಗಳಿಗೆ ತೀರ ವಿರುದ್ಧವಾದ ವಿಷಯ; ಅಲ್ಲದೆ ಬ್ರಾಹ್ಮಣ್ಯಕ್ಕೆ ಕಲಂಕ ತರುವ ವಿಷಯ. ಈ ಪತ್ರ ತಲಪಿದೊಡನೆ ಹಿರಣೆಯನ್ನು ಮನೆಯಿಂದ ಹೊರ ಹಾಕತಕ್ಕದ್ದು. ಇಲ್ಲವಾದಲ್ಲಿ ನಿಮಗೆ ಬಹಿಷ್ಕಾರ—ಬಹಿಷ್ಕಾರ. ತಿಳಿದಿರಲಿ.

ವಾಚಕರೇ! ಈ ಬರಹವನ್ನು ಹೆಣ್ಣನ್ನು ಪಡೆದ ಸಂಸಾರಿಯು ಬರೆದುದಲ್ಲವಾಗಿರಬೇಕು. ಕಲ್ಲಿನ ಕೈಯಿಂದ ಯಾವನೋ ಒಬ್ಬ ದಾನವನು ಬರೆದಿರಬಹುದು. ಇಲ್ಲವಾದಲ್ಲಿ ಜೀವದಂತೆ ಸಾಕಿದ ಅರಗಿಳಿಯನ್ನು ಹೊರನೂಕು ಎಂದು ಬರೆದ ವ್ಯಕ್ತಿಯ ಕೈಯು ಕೋಮಲೆಯ ಕರವನ್ನು ಹಿಡಿದಿರದ ಒರಟು ಕಟ್ಟಿಗೆಯ ತುಂಡಾಗಿರಬೇಕು. ಅಲ್ಲವೇ?

ರಾಯರಿಗೆ ಜಗತ್ತಿನಲ್ಲಿ ಸುಖದ ಸೋನೆ ಎಂದರೆ ಹಿರಣ್ಮಯಿ. ಇವಳೇ ರಾಯರಿಗೆ ಆಧಾರ. ಹಿರಣೆಗೂ ತಂದೆಯ ವಿನಹ ಮತ್ತಾರೂ ರಕ್ತಸಂಬಂಧಿಗಳಿರಲಿಲ್ಲ. ರಾಯರನ್ನು 'ಅಣ್ಣಾ' ಎಂದು ಕರೆಯುವ ತಮ್ಮತಂಗಿಯರಾಗಲೀ, 'ಮಗೂ' ಎಂದು ಕರೆಯುವ ತಾಯಿತಂದೆಗಳಾಗಲೀ ಇರಲಿಲ್ಲ. ಅವರಿಗೆ ಹಿರಣ್ಮಯಿಯು ನಗುತ್ತಿದ್ದ ದಿನಗಳೆಲ್ಲಾ ಸುದಿನಗಳು; ಚಿಂತೆಯಿಂದ ಬಾಡಿದ ದಿನವೇ ದುರ್ದಿನವು.

ನಾರಾಯಣ ರಾಯರಿಗೆ ಹಿರಣ್ಮಯಿಯೂ ಬೇಕಿತ್ತು; ಸಮಾಜವೂ ಬೇಕಿತ್ತು. ಅದಕ್ಕಾಗಿ ಏನು ಮಾಡಲೆಂದು ಯೋಚಿಸಿದರು; ತಲೆ ಕೆರೆದುಕೊಂಡು ಗುಣಿಸಿದರು; ಕಡೆಗೊಂದು ಯೋಚನೆ ಹೊಳೆಯಿತು. ದೀರ್ಘವಾದೊಂದು ಉಸಿರನ್ನು ಬಿಟ್ಟು ರಾಟೆಯನ್ನು ನಾಗೊಂದಿಗೆಯಲ್ಲಿಟ್ಟರು. ಅವರ ಮನಸ್ಸಿನಲ್ಲಿ ಏನು ವ್ಯಥೆಯಾಯಿತೋ ಹೇಳಲು ಬಾರದು. ಒಂದು ಕ್ಷಣ ಅತ್ತರು. ಅಷ್ಟರಲ್ಲಿ ಒಳಗಿನಿಂದ ಹಿರಣೆ ಬಂದು, 'ಅಪ್ಪಾ! ಸಂಧ್ಯಾವಂದನೆ ಬೇಗ ಮಾಡು. ದೀಪದಲ್ಲಿ ಎಣ್ಣೆ ಇಲ್ಲ. ಬೇಗ ಊಟ ಮಾಡುವ,' ಎಂದಳು. ರಾಯರು ಅದಕ್ಕೆ ಉಪ್ಪೆನ್ನಲೂ ಇಲ್ಲ, ಉಪ್ಪಿನ ಕಲ್ಲೆನ್ನಲೂ ಇಲ್ಲ. ಹಿರಣೆ ಇದನ್ನು ಕಂಡು ಅವಾಕ್ಕಾದಳು.

'ಅಪ್ಪಾ! ಸಮಾಚಾರ ಏನು? ಅಳುವಿಯೇಕೆ? ಕಣ್ಣು ಕಿಸ್ಕಾರದ ಹೂವಿನಂತಾಗಿದೆ!'

'ಏನಿಲ್ಲ, ಸಾಜೆಯ ಗಾಳಿಯಿಂದ ಸ್ವಲ್ಪ ಶೀತವಾಗಿದೆಯಷ್ಟೆ.'

ತಂದೆಯ ಮಾತಿನಲ್ಲಿ ಹಿರಣೆಗೆ ನಂಬಿಕೆ ಹುಟ್ಟಲಿಲ್ಲ. ಇದರಲ್ಲೇನೋ ಒಳಗುಟ್ಟಿದೆಯೆಂದು ತೋರಿತು. ಆದರೂ ಕೆದಕುವ ಹವ್ಯಾಸಕ್ಕೆ ಹೋಗಲಿಲ್ಲ.

ಬೆಳಗಾಯಿತು. ಭಾಸ್ಕರನು, ಹಿರಣ್ಮಯಿಯ ಮೇಲೆ ಹುಳುಕಿನ ಹೊರೆಯನ್ನು ಹೊರಿಸಿದವರನ್ನೆಲ್ಲಾ ಹುರಿದು ಅರಳಾಗಿ ಮಾಡುವೆನೆಂದು ಆಕಾಶದಲ್ಲಿ ಏರಿ ಬರುತ್ತಿದ್ದನು. ಹಿರಣೆಯು ಬೆಳಗಿನ ಕಸಮುಸುರೆಗಳನ್ನೆಲ್ಲಾ ಮುಗಿಸಿ ತಂದೆಗೆ ಹೆಸರನ್ನೆರೆದು ಗಂಗಾ ಉದಕ ಮಾಡಿಟ್ಟಳು. ಈಗ ಅಪ್ಪಯ್ಯ ಬಂದಾರೆಂದು ಗಳಿಗೆಗೊಂದು ಸಲ ಕಡುವಿನ ಬಾಗಿಲ ವರೆಗೆ ಹೋಗಿ ನೋಡಿ ಬರುತ್ತಿದ್ದಳು. ಹದಿನೈದು ಗಳಿಗೆಯಾದರೂ ರಾಯರ ಸುಳಿವಿಲ್ಲ. ಹಿರಣ್ಮಯಿಯು ರಾಯರು ಮಲಗುವ ಕೋಣೆಗೆ ಹೋದಳು. ಅಲ್ಲಿ ಚಾಪೆ ಮಡಿದಿತ್ತು. ಚಾಪೆಯ ಮೇಲೊಂದು ಕಾಗದ ಬಿದ್ದಿತ್ತು. ಹಿರಣೆ ಹೆಕ್ಕಿ ಓದಿದಳು.

(ಕಾಗದ)

ಮುದ್ದು ಹಿರಣೇ!

ನಿನ್ನಿಂದ—ಅಲ್ಲ, ನಿರ್ಭಾಗ್ಯನಾದ ನಿನ್ನ ತಂದೆಯು ನಿನಗೆ ಮದುವೆ ಮಾಡದುದರಿಂದ ಮಠಾಧಿಪತಿಗಳು ನನಗೆ.....ಹಾಕಿರುವರು.....ಈ ವೋರೆಯನ್ನು ಇನ್ನು ಜನರಿಗೆ ತೋರಿಸಲಾರೆ. ನಿನ್ನನ್ನು ಅಗಲಿದೆನೆಂದು ಅಳಬೇಡ. ಅಗೋ, ಮೇಲೆ ನೋಡು! ದೇವರಿದ್ದಾನೆ ನಿನ್ನ ಸಹಾಯಕ್ಕೆ; ಸಾಧ್ಯವಿದ್ದಲ್ಲಿ ಯೋಗ್ಯ ಪತಿಯನ್ನು ಹೊಂದು; ಸಂತೋಷ. ಅಸಾಧ್ಯವಾದಲ್ಲಿ ನಿನ್ನ ಅಮ್ಮನ ಬಳಿಗೆ ತೆರಳು. ನಾನೂ ಅಲ್ಲೇ ಸಿಕ್ಕುತ್ತೇನೆ. ನನ್ನನ್ನು ಹುಡುಕಬೇಡ. ನಾನು ಈ ಜಗತ್ತಿನಿಂದ ಬೆಳಿಗ್ಗೆ ೫ ಗಂಟೆಯ ಸುಮಾರಿಕ್ಕೆ ಮಾಯವಾದೆ. ನಿನಗೆ ಗೋಳು ಕೊಟ್ಟಿನೆಂದು, ಮಗೂ, ತಪಿಸಬೇಡ.....

ಇತಿ,

....ನಾರಾಯಣ....'

(.....ಈ ಗುರುತುಗಳ ಸ್ಥಾನದಲ್ಲಿದ್ದ ಅಕ್ಷರಗಳು ರಾಯರ ಕಣ್ಣೀರಿನಿಂದ ಚಿತ್ತು ಆಗಿದ್ದುದರಿಂದ ಹಿರಣೆಗೆ ಓದಲಾಗಲಿಲ್ಲ.)

ಹಿರಣೆಯು ಕಾಗದವನ್ನು ಒಂದು ಸಲ ಓದಿದಳು. ಎರಡನೆಯ ಸಲ ಓದುವಾಗ ಗಂಟಲು ಕಟ್ಟಿತು. ಮೂರನೆಯ ಸಲ ಓದಲಾರದೆ ಆ ಪತ್ರವನ್ನು ಕೈಯಲ್ಲಿ ಹಿಡಿದುಕೊಂಡು ಮನೆಯಿಂದ ಹೊರಬಿದ್ದಳು. ಅವಳನ್ನು ಕಂಡೊಡನೆಯೇ ಹಟ್ಟಿಯ ದನಗಳೆರಡು ಏನು ತಿಳಿದುಕೊಂಡವೋ ಏನೋ, 'ಅಂಬಾ, ಅಂಬಾ' ಎಂದು ಒರಲಹತ್ತಿದುವು. ಹಿರಣೆಗೆ ಅವುಗಳ ಆರ್ತಧ್ವನಿಯು ಕೇಳಿಸಿರಲಿಕ್ಕಿಲ್ಲ. ಅವಳು ಮನೆಯ ಕಡೆಗೆ ಒಂದು ಸಲ ನೋಡಿ ದಕ್ಷಿಣಕ್ಕೆ ಸಾಗಿದಳು. ತಾನು ಎಲ್ಲಿಗೆ ಹೋಗಲಿ? ಏನು ಮಾಡಲಿ? ಎಂಬುದು ಅವಳಿಗೆ ತಿಳಿದಿರಲಿಲ್ಲ; ಯೋಚಿಸುವ ಗೊಂದಲಕ್ಕೂ ಹೋಗಲಿಲ್ಲ.

ಹೊತ್ತು ಬಾನಿನಿಂದ ಕೆಳ ಜಾರ ತೊಡಗಿತ್ತು. ಹಿರಣೆಯು ನದಿಯ ದಂಡೆಯನ್ನು ಸೇರಿದೊಡನೆಯೇ ಆಜನ್ಮದುಃಖಿನಿ ಸೀತಾಮಾತೆಯ ಮಂಜುಳ ರಂಜಿತ ಗಾನವೂ, ತಣ್ಣನೆಯ ಎಳ ಗಾಳಿಯ ಹೊಡೆತವೂ ಅವಳ ತಲೆಯನ್ನು ಸ್ವಲ್ಪ ತಂಪು ಮಾಡಿದ್ದರಿಂದ ಅವಳಿಗೆ ಅರಿವು ಹುಟ್ಟಿತು. ತಾನು ನದಿಯ ದಂಡೆಗೇಕೆ ಬಂದೆನೆಂದು ಯೋಚಿಸಹತ್ತಿದಳು. ಅಪ್ಪನ 'ನಿನ್ನ ಅಮ್ಮನ ಬಳಿಗೆ ತೆರಳು. ನಾನೂ ಅಲ್ಲೇ ಸಿಕ್ಕುತ್ತೇನೆ' ಎಂಬ ಮಾತಿನ ನೆನಪಾಗಿ, ಅವನೇ ದಾರಿಯನ್ನು ತೋರಿಸಿದನೆಂದು ತಿಳಿದುಕೊಂಡು, ಅಲ್ಲೇ ದಂಡೆಯ ಮೇಲೆ ಕೂತು, ಕಾಲುಗಳನ್ನು ನೀರಿಗೆ ಇಳಿಯಬಿಟ್ಟುಕೊಂಡು ಅಳಹತ್ತಿದಳು. ಹಿರಣೆಗೆ ಹೆತ್ತ ಅಬ್ಬೆಯ ಪರಿಚಯವಿಲ್ಲದಿದ್ದರೂ, ಅಪ್ಪನ ಒಡನಾಟದಿಂದ ತಾಯಿಯ ವಿಯೋಗವ್ಯಥೆಯು ಎದೆಯಲ್ಲಿ ಮೂಡುತ್ತಿರಲಿಲ್ಲ. ಆ ತಂದೆಯೇ ಇಂದು ತನಗಾಗಿ ಜಗತ್ತಿನಿಂದ ಹೊರಟು ಹೋಗಿದ್ದನು. ಹಿರಣೆಯು ಅತ್ತಳು; ಹೊಟ್ಟೆ ಹೊಡೆದುಕೊಂಡಳು; ತಲೆ ಚಚ್ಚಿಕೊಂಡಳು. ಕೇಳುವರಾರು? ಬಡವರ ದುಃಖವನ್ನು ನಿಷ್ಕುರದ ಜಗತ್ತು ತಣಿಸುವುದೇ? ಲೋಕವು ಶ್ರೀಮಂತರ ಲೀಲಾಭವನವು. ಹಣವಂತರ ಕಷ್ಟಸುಖಗಳಲ್ಲಿ ಮಾತ್ರ ಸಹಭಾಗಿಯಾಗಿ ಮರುಗುವ ಈ ಪಾಪಿ ಜಗತ್ತು ಬಡವರ ಕಡೆಗೆ ನೋಡುವುದಾದರೂ ಉಂಟೇ? ಕಣ್ಣಿನಲ್ಲಿ ರಕ್ತವಿಲ್ಲದ ಜಗತ್ತೇ! ನಿನ್ನ ವರ್ತನಕ್ಕೆ ಶತ ಧಿಕ್ಕಾರವಿರಲಿ! ಆದರೆ ಮಾರುತನು ಮಾತ್ರ ಈ ಸಾಳಿನವನಲ್ಲ; ಹೆಂಗರುಳಿನವನು. ಹಿರಣೆಯ ಅಳುವನ್ನು ಕೇಳಿ ಸಮಾರನು ಎದೆಕರಗಿ ನದಿಯ ತೆರೆಗಳ ನಡುವಿನಿಂದ ಜಲಕಣಗಳನ್ನು ಹೊತ್ತುಕೊಂಡು ಬಂದು ಮೆಲ್ಲಮೆಲ್ಲನೆ ಅವಳ ಮುಂಗುರುಳನ್ನು ತೀಡಿ, ಮುಖಕ್ಕೆ ತುಂತುರುಗಳನ್ನೆರಚಿ ಸಮಾಧಾನಪಡಿಸುತ್ತಿದ್ದನು.

ಬಾಲೆಯ ಮನೋಗರ್ಭದಲ್ಲಿ ಕುದಿಯುತ್ತಿದ್ದ ದುಃಖರಸವು ಈಗ ಉಕ್ಕಿ ಹೊರ ಸೂಸಹತ್ತಿತು.

'ಅಮ್ಮಾ! ನೀನು ನನ್ನನ್ನು ಯಾವ ಸೌಭಾಗ್ಯ ನೋಡಲು ಹೆತ್ತೆ? ಹೆತ್ತ ದಿನವೇ ಕೊರಳನ್ನೇಕೆ ಅಮುಕಲಿಲ್ಲ? ನನ್ನಿಂದ ನಿನಗೆ ಸುಖ ಸಿಕ್ಕಲಿಲ್ಲ. ತಂದೆಯಂತೂ ನನಗಾಗಿಯೇ ಆತ್ಮಹತ್ಯ ಮಾಡಿಕೊಂಡರು. ನಾನಾದರೋ ಕೇಳಲಾರದ ಮಾತುಗಳನ್ನೆಲ್ಲಾ ಕೇಳಿದೆ. ಅನವಾನದ ಹೊರಲಾರದ ಹೊದಿಕೆ ಹೊತ್ತೆ. ಸಮಾಜವು ನನಗೆ ಸ್ಥಳ ಕೊಡದು. ನಾನೀ ಅಂಧ—ನಿಷ್ಕುರುಣಿಯ ಸಮಾಜದ ನೆರಳಿನಲ್ಲಿ ಬಾಳಲಾರೆ. ನನ್ನನ್ನು ನಿನ್ನ ಬಳಿ

(ಒನೇ ಪುಟಕ್ಕೆ ಮುಂದರಿಸಿರುದೆ.)



For agency terms apply to:—

THE CONTROLLER,
West Coast Agencies,
TELLICHERRY.

ನಿಮ್ಮ ಕರ್ತವ್ಯ

ನಿಮಗೋಸ್ಕರ

ನಿಮ್ಮ ಕರ್ತವ್ಯ

ನಿಮ್ಮ ಪ್ರಿಯತಮರಿಗೋಸ್ಕರ.

ವೃದ್ಧಾಪ್ಯದಲ್ಲಾಗಲಿ ಮರಣದಲ್ಲಾಗಲಿ ರಕ್ಷಣೆ ಪಡೆಯುವಂತೆ ನಿಮ್ಮನ್ನು ಒತ್ತಾಯಪಡಿಸುತ್ತದೆ.

ಇದನ್ನು ನೆರವೇರಿಸುವ ಅತ್ಯುತ್ತಮ ಉಪಾಯವೇನೆಂದರೆ

ಈಸ್ಟ್ ಎಂಡ್ ವೆಸ್ಟ್

ವಾರ್ಷಿಕ ಪ್ರೀಮಿಯಮ್ ತೆತ್ತುದರ ಮೇಲೆ ಶೇಕಡಾ

2½ ಯ

ರಿಬೇಟಿದೆ.

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.,

1913ರಲ್ಲಿ ಸ್ಥಾಪಿತವಾದುದು,

ಈ ಸಂಸ್ಥೆಯ ಆಲೋಚನೆ ಕೇಳುವುದು

ಅವರು ನಿಮ್ಮನ್ನು ನಿಮ್ಮ ಕಾತರತೆಯಿಂದ ದೂರಗೊಳಿಸಿ ನಿಮ್ಮ ಜೀವನವು ದೀರ್ಘವಾಗಿರುವಂತೆ ಹೂಡುವರು.

ನಮ್ಮ ಪ್ರತಿನಿಧ್ಯವಿಲ್ಲದೆಡೆಗಳಲ್ಲಿ ಏಜೆಂಟರುಗಳಿಗೆ ಉದಾರ ಶರ್ತಗಳಿವೆ.

ವಿವರಕ್ಕೆ ಬರಕೊಳ್ಳಿ:—

MESSRS. PADUBIDRI BROS.,
Chief Agents,
KARNATAKA AND MAHARASHTRA,
BOMBAY No. 8.

ಉನ್ಮಾದ ರೋಗಕ್ಕೆ

ಅತ್ಯುತ್ತಮ ಔಷಧ.

(ಹುಚ್ಚು ರೋಗಕ್ಕೆ ಕೈಕಂಡ ಮದ್ದು).

ರೋಗವು ಎಷ್ಟೇ ಘೋರವಾಗಿರಲಿ, ಎಷ್ಟೇ ಹಳೆಯದಾಗಿರಲಿ, ನಮ್ಮ ಔಷಧದ ಉಪಯೋಗದಿಂದ **ಖಂಡಿತವಾಗಿ ಗುಣ**ವಾಗುವುದು. ಒಂದೇ ವಾರದ ಉಪಯೋಗದಿಂದ ರೋಗವು ಹಿಮ್ಮೆಟ್ಟುವುದು. ಅಪಸ್ಮಾರ, ಹಿಸ್ಟೀರಿಯಗಳೂ ಶಾಂತಿ ಹೊಂದುವುವು.

ವಾರದ ಔಷಧಕ್ಕೆ ಕ್ರಯ ರೂ. 3—8—0.

ಮಾಳ ನಾರಾಯಣ ಭಟ್ಟ, ವೈದ್ಯ,
'ಸಿದ್ಧೌಷಧ ಭವನ', ಪಡ್ನೂರು ಗ್ರಾಮ,
ಪೋಸ್ಟು ವಿಟ್ಲ, ದ. ಕನ್ನಡ.

JAYA LAXMI BANK, LTD.,
MANGALORE.

ಜಯಲಕ್ಷ್ಮೀ ಬೇಂಕ್, ಲಿಮಿಟೆಡ್.,
ಮಂಗಳೂರು.

ಶಾಖೆಗಳು:—ಪುತ್ತೂರು, ಕಾಸರಗೋಡು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

ಮಾಸಿಕ, ಸೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO,
ಸೆಕ್ರಟರಿ.

ಪಿಟೀಲು, ವೀಣಾ, ಕೊಳಲು, ಹಾರ್ಮೋನಿಯಮ್ ಮತ್ತು ಸಶಾಸ್ತ್ರ ಗಾಯನವನ್ನು ಶಿಕ್ಷಕರ ಸಹಾಯವಿಲ್ಲದೆ ಕಲಿಯುವ

ಹಾರ್ಮೋನಿಯಂ ಶಿಕ್ಷಕ

ಇದರಲ್ಲಿ ಯಾವತ್ತೂ ಕನ್ನಡ ನಾಟಕದೊಳಗಿನ ಪದಗಳೂ ಮತ್ತು ಸುಪ್ರಸಿದ್ಧ ನಾಟಕದೊಳಗಿನ ಪದಗಳು, ಹಿಂದೂಸ್ಥಾನೀ ಚೀಜುಗಳ ಗ್ರಾಮೋಫೋನ್‌ನಲ್ಲಿ ಕೊಟ್ಟ ಪದಗಳ ಸಶಾಸ್ತ್ರ ಸುಲಭ ನೊಟೇಶನ್ ಕೊಟ್ಟಿರುತ್ತದೆ.

ಕನ್ನಡ ಲಿಪಿ ಭಾಗ ೩, ಪ್ರತಿಯೊಂದು ಭಾಗಕ್ಕೆ ಬೆಲೆ ೧೨ ಆಣೆ.

ಪತ್ರವ್ಯವಹಾರ ಇಂಗ್ಲೀಷಿನಲ್ಲಿ ಮಾಡಬೇಕು.

B. V. PHATAK,
Fort, MIRAJ (S.M C.)

ಶುದ್ಧವಾದ ಪ್ರಕಾಶ.

ದೀರ್ಘವಾದ ಬಾಳಿಕೆ

ಕಾರಖಾನೆಯ ಪ್ರತಿನಿಧಿಗಳು:
ಡಾಜ್ ಎಂಡ್ ಸೆಪ್ಟೋರ್, ಲಿಮಿಟೆಡ್,
ಕಲ್ಕತ್ತಾ, ಬೊಂಬಾಯಿ, ಮದ್ರಾಸ್, ಕರಾಚಿ, ಲಾಹೋರ್, ದಿಲ್ಲಿ.

ಯು. ಎಸ್. ಎ.ಯಲ್ಲಿ ಸಿದ್ಧವಾದದ್ದು.

AMERICAN EVEREADY

REPUTATION.

A Bank's reputation is not gained from the magnificence of its building nor from the elegance of its glittering fixtures.

True reputation is gained only through public knowledge of the high character and ability of its management and often high ideals of service to the community. For about a decade the Central Bank has enjoyed a reputation for efficient management, sound banking principles and careful yet liberal policies.

To maintain this reputation every effort is made to give to all transactions large or small a sympathetic consideration and extend the most liberal courtesies consistent with sound banking practice.

The entire facilities of the Central Bank are yours to command.

THE CENTRAL BANK LIMITED,

(INCORPORATED IN TRAVANCORE)

Bunder Road, **MANGALORE.**

ಅಶೋಕ್

ಬೋನಸ್
ಪ್ರತಿ ಸಾವಿರಕ್ಕೆ ರೂ. 10/-
ಅದೂ
ಪ್ರಥಮ ಮೂಲ್ಯವೇತನದಲ್ಲಿಯೇ.

ಜನತೆಯ ವಿಶ್ವಾಸದ ಪ್ರತ್ಯಕ್ಷ ನಿದರ್ಶನ.

ಗುಜರಾಥಿನ ಪ್ರಥಮ ಜೀವವಿಮಾ ಕಾರ್ಯಾಲಯವಾದ ಇದು ತನ್ನ ಪ್ರಥಮ ಮೂಲ್ಯವೇತನ ಕಾಲದಲ್ಲಿಯೇ, ನಾಲ್ಕು ವರ್ಷಗಳ ಅಂತ್ಯದೊಳಗೆ ಮಾತ್ರವೇ 'ಶಿಲುಕ'ನ್ನು ತೋರಿಸಲು ಸಮರ್ಥವಾಗಿದೆ.

ಡೈರೆಕ್ಟರರ ಮಂಡಲಿಯಲ್ಲಿ, ದೆಲ್ಲಿಯಲ್ಲಿ ನಡೆದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಅಧಿವೇಶನದ ಮಾಜೀ ಪ್ರೆಸಿಡೆಂಟರಾದ ಸೇಟ್ ರಾಂಜೋದ್‌ಲಾಲ್, ಕಟ್ನಿಯ ಸಿಮೆಂಟ್ ಮತ್ತೂ ಇಂಡ ಸ್ಟ್ರೀಯಲ್ ವರ್ಕ್ಸ್, ಲಿಮಿಟೆಡ್‌ನ ಶ್ರೀ. ಹರಿದಾಸ್ ಗೋಪಾಲ್ ದಾಸ್, ಅಹಮ್ಮದಾಬಾದ್ ಮುನಿಸಿಪಾಲಿಟಿಯ ಮಾಜೀ ಪ್ರೆಸಿಡೆಂಟ್ ಮತ್ತೂ ವೈಸ್ ಪ್ರೆಸಿಡೆಂಟರಾದ ಶ್ರೀ. ಜಿ. ವಿ. ಮಾವ್ಲಂಕರ್, ಬೀ. ಏ, ಎಲ್. ಎಲ್. ಬಿ. ಇಂಥವರೂ ಇತರರೂ ಇದ್ದಾರೆ.

ಕಂಪೆನಿಯ ಏಕ್ಚುವೆರಿಯಾದ ಶ್ರೀ. ಜಿ. ಎಸ್. ಮರಾತೇ, ಎಂ. ಏ., ಏ. ಐ. ಏ. ಇವರು ಬರೆಯುವುದೇನೆಂದರೆ:—

'ಮೂಲ್ಯವೇತನದ ಫಲವು ಉತ್ತೇಜನಕಾರಿಯೆಂದು ಎಣಿಸಬೇಕು' ನಿಮ್ಮ ಕಂಪೆನಿಯು ಕಷ್ಟದ ಸಮಯವಾದ ಒಂದೊಂದು ಅವಧಿಯನ್ನೀಗ ದಾಟಿದೆ. ಯಾವ ಆ ಸಮಯದ ಒಂದು ಭಾಗದಲ್ಲಿ ನೀವೂ, ಜನತೆಯೂ ಅನಿಶ್ಚಿತವಾದ ವಿದ್ಯಮಾನಗಳ ಅನುಭವವನ್ನು ಪಡೆದಿರೋ ಯಾವ ಆ ಸಮಯದಲ್ಲಿ ನಿಮ್ಮ ಆಫೀಸಿನ ಉದ್ಯೋಗಿಗಳು ಕೊಂಚ ಮಟ್ಟಿಗೆ ಸಾರ್ವಜನಿಕ ಸೇವೆಯನ್ನು ಸಮರ್ಪಿಸಲು ಯತ್ನಿಸಿದರೋ, ಆ ಸಮಯದಲ್ಲಿ, ನಿಮ್ಮ ಕೆಲಸಕಾರ್ಯಗಳ ಮೇಲೆ ವಿಶೇಷವಾದ ಮಾನಸಿಕ ಪರಿಶ್ರಮದ ಭಾರವು ಹೇರಿರಲೇ ಬೇಕು; ಆದರೆ, ಇಷ್ಟೊಂದು ಸಂಕಷ್ಟಾನುಭವವನ್ನು ಮಾಡಿಕೊಂಡೂ, ನೀವು ಇಷ್ಟೊಂದು ಶೀಘ್ರಗತಿಯ ವೃದ್ಧಿಯನ್ನು ಸಾಧಿಸುವ ಹಾಗೆ, ನಿಮ್ಮ ಕಂಪೆನಿಯು ಪ್ರದರ್ಶಿಸಿದ ಈ ವೃದ್ಧಿಗತಿಯನ್ನು ಜನತೆಯೂ ಮೆಚ್ಚುತಿರದೆಂದು ನಾನು ಭಾವಿಸುತ್ತೇನೆ...ಆದುದರಿಂದ, ನೀವು... ವರ್ಷದಿಂದ ವರ್ಷಕ್ಕೆ ಇನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ತೋರಲು ಸಮರ್ಥರಾಗುವಿರೆಂದು ನನ್ನ ನಂಬಿಕೆ.'

ಚುರುಕಾದ ಏಜೆಂಟರುಗಳು ಬೇಕಾಗಿದ್ದಾರೆ. ಬರೆದುಕೊಳ್ಳಿ:

THE ASHOK INSURANCE CO., LTD.,

9, Forbes Street, Fort, BOMBAY. **Raikhad, AHMEDABAD.**

ಅಥವಾ
ಕೊಡಗು ಮತ್ತೂ ಮೈಸೂರು ಪ್ರಾಂತ್ಯಗಳ ಚೀಫ್ ಏಜಂಟ್ಸ್:—
ನಾಥ ಬ್ರದರ್ಸ್, 3, ಆಸ್ಪತ್ರೆಯ ರೋಡ್, ಬಳೇಪೇಟೆ, ಬೆಂಗಳೂರು ಸಿಟಿ.

ಪಾರವಾರವೂ ತಪ್ಪದೆ

'ಕಂಠೀರವ' ಪತ್ರಿಕೆಯನ್ನು ಓದಿರಿ.

ಬಿಡಿ ಸಂಚಿಕೆ ಬೆಲೆ ಆಣೆ ೦—೧—೦. ಎಲ್ಲೆಲ್ಲಿಯೂ ಸಿಗುತ್ತದೆ.

ಗ್ರಾಮೋದ್ಧಾರವು ಹೀಗೆ!

(ಲೇಖಕ:—'ಅರೋರ', ಮದರಾಸು.)

ಹಳ್ಳಿಯ ದೀನಸ್ಥಿತಿಯು ಎಲ್ಲರಿಗೂ ತಿಳಿದಿರುವುದು ವ್ಯಕ್ತವಾಗುವುದಲ್ಲದೆ, ಕೆಲವರು ಮುಂದಿನ ದಾರಿಯನ್ನು ಆಲೋಚಿಸುತ್ತಿರುವರೆಂಬುದೂ ಕಂಡುಬರುವುದು — ಎಲ್ಲೆಲ್ಲಿಯೂ ಅರೆ ಹೊಟ್ಟೆ, ಅರೆ ಬಟ್ಟೆಗಳಿಂದ ಜನರು ಕಷ್ಟಪಡುತ್ತಾರೆ. ತಿಳಿಗೇಡಿತನ (Illiteracy) ಕೂಳುಗೇಡಿತನಗಳ ಕೂಗು ಎಲ್ಲೆಲ್ಲಿಯೂ ಹಬ್ಬಿದೆ. ದುಃಖದ ಕಣ್ಣೀರ ಕಾಲಿವೆಗಳು ನೀಳವಾಗಿ ಹರಿಯುತ್ತಿವೆ. ರುದ್ರರೂಪವನ್ನು ತಾಳುತ್ತಿರುವ ಈ ದಾರಿದ್ರ್ಯರಕ್ಕಸನನ್ನು ಹೀಗೆಯೇ ಬೆಳೆಯ ಬಿಟ್ಟರೆ, ಕುಪ್ಪಳಿಸುತ್ತಿರುವ ನಮ್ಮ ಸಮಾಜದಲ್ಲಿ ಎಂತಹ ಕೋಲಾಹಲವು ಏಳಲಿರುವುದೋ ಹೇಳಲಸಾಧ್ಯ—ಎಂಬುದು ಎಲ್ಲರೂ ತಿಳಿದ ಮತ್ತು ತಿಳಿಸಿದ ವಿಷಯವು. ಆದುದರಿಂದ ದೇಶ, ಸಮಾಜ ಹಿತೈಷಿಗಳು ಇತ್ತ ಕಡೆ ದೃಷ್ಟಿಯನ್ನಿಡುವುದು ಆಶ್ಚರ್ಯವಲ್ಲ.

ಈ ಸಣ್ಣ ಲೇಖನದಲ್ಲಿ ನನ್ನದೊಂದು ಮತವನ್ನು ಬರೆಯ ಲಿಚ್ಛಿಸುವೆನು. ದೇಶಸುಧಾರಣೆ, ಸಮಾಜದ ಮೇಲ್ಮೆ, ಸ್ವರಾಜ್ಯ ಸಂಪಾದನೆಗಳಿಗೆ ಮೊದಲು ಸ್ತ್ರೀಯರು ಪರಿವರ್ತನೆಯನ್ನು ಹೊಂದಬೇಕೆಂದು ನನ್ನ ನಂಬಿಕೆ. ಸಮಾಜದಲ್ಲಿ ಸ್ತ್ರೀಯರಿಗೂ ಒಂದು ಸ್ಥಾನವಿದೆ. ಪುರುಷರಂತೆಯೇ ಸ್ತ್ರೀಯರೂ ಜೀವನ, ಕುಟುಂಬ, ದೇಶಸ್ವಾತಂತ್ರ್ಯಕಾರ್ಯಗಳಲ್ಲಿ ಸಮಭಾಗಿಗಳಾಗಬೇಕು. ಸ್ತ್ರೀಯರೂ ಪುರುಷರಂತೆಯೇ ತಮ್ಮ ತಮ್ಮ ಕಾರ್ಯವನ್ನು ಸರಿಯಾಗಿ ತಿಳಿದು ಸಾಂಗವಾಗಿ ನಡೆಸಿದರೆ ಮಾತ್ರ ಸಂಸಾರರಥವಲ್ಲ, ಸಮಾಜರಥ, ದೇಶರಥವೇ ಜಯದಿಂದ ಮುಂದೆ ಸಾಗುವುದು. ಇದನ್ನು ನಮ್ಮ ಭಗಿನಿಯರೂ ಅಣ್ಣ ತಮ್ಮಂದಿರೂ ಮೊದಲು ತಿಳಿಯತಕ್ಕುದು.

ಈ ಶ್ರೇಯಸ್ಕರ ಕಾರ್ಯದಲ್ಲಿಯೂ ಸ್ತ್ರೀಯರಿಗೂ ಒಂದು ದೊಡ್ಡ ಕರ್ತವ್ಯವಿದೆ. ನಮ್ಮ ದೇಶದ ದುಃಸ್ಥಿತಿಯನ್ನು ಹೋಗಲಾಡಿಸಿ, ದಾರಿದ್ರ್ಯರಕ್ಕಸನಿಂದ ಪಾರುಮಾಡುವರೆ ಸ್ತ್ರೀಯರೆ ಅರ್ಹರು. 'ಒಲಿದರೆ ನಾರಿ, ಮುನಿದರೆ ಮಾರಿ'ಯಲ್ಲವೆ?—ಆದ್ದರಿಂದ ಮನಸ್ಸು ಮಾಡಿದರೆ ಸ್ತ್ರೀಯರು ಯಾವ ಕಾರ್ಯವನ್ನು ಮಾಡಲಿಕ್ಕಿಲ್ಲ? ದುಷ್ಟನಿಗ್ರಹ, ಶಿಷ್ಟಸಂರಕ್ಷಣೆಯ ಕಾರ್ಯದಲ್ಲಿ ಹಿಂದೆ ಸೀತೆ, ದ್ರೌಪದಿಯಂತೆ ಮಹಾಸ್ತ್ರೀಯರು ಕಾರಣೀಭೂತರಾಗಲಿಲ್ಲವೆ? ಅಂತೆಯೇ ಇಂದಿನ ದುಷ್ಟನಿಗ್ರಹ ಕಾರ್ಯದಲ್ಲೂ ಸ್ತ್ರೀಯರೇ ಮುಖ್ಯಪಾತ್ರಧಾರಿಗಳಾಗಬೇಕು—ಇಂದಿನ ಅಧೋಗತಿಗೆ ನಮ್ಮ ಭಗಿನಿಯರ ಅಸಡ್ಡೆಯೇ ಕಾರಣ. ಇದಕ್ಕೆ ಇನ್ನೂ 'ಅ'ಗಳನ್ನೂ ಸೇರಿಸಬಹುದು. ಪುರುಷನೆಂದರೆ ಏನು? ಸ್ತ್ರೀಯರ ಕೈಯಲ್ಲಿ ಒಂದು ಆಟದ ಗೊಂಬೆಯಂತೆ. ದಿನವೆಲ್ಲವೂ ದುಡಿದು ಕಾಸುಚಿಕ್ಕಾಸುಗಳನ್ನು ಕೊಂಡುಕೊಡುವುದು ಯಾರ ಕೈಯಲ್ಲಿ? ಮನೆಯ ರಾಣಿಯ ಕೈಯಲ್ಲಲ್ಲವೆ? ಈ ಅಲ್ಪ ಹಣಕ್ಕೆ ತಾನೂ ಸ್ವಲ್ಪ ಕೂಡಿಸಿ, ಗೃಹಕೃತ್ಯ ಕಾರ್ಯವನ್ನು ಸೂಕ್ಷ್ಮವಾಗಿ ನಡೆಸಿ, ಇದರ ಕಾಸುಚಿಕ್ಕಾಸುಗಳನ್ನು ಸದುಪಯೋಗಿಸಿದರೆ, ವಿದ್ಯೆಗೂ, ಬಟ್ಟೆಗೂ, ಕೂಳಿಗೂ ದುಡ್ಡು ಧಾರಾಳವಾಗಿ ಹಣಸಿಕ್ಕುವುದಲ್ಲದೆ, ಶುಚಿತ್ವ, ನಿರ್ಮಲತ್ವ, ಸುಖಸಲ್ಲಾಪಗಳಿಗೂ ಎಡೆ ಇರುವುದು.

ಹಳ್ಳಿಯ ಸಂಕಷ್ಟವು ಹೊಸತಾಗಿ ಏನಿದೆ? ದ್ರವ್ಯ, ವಿದ್ಯೆ, ಇವೆರಡೇ. ಇವುಗಳನ್ನು ಸಂಪಾದಿಸುವರೆ ಬೇಕಾದುದು ಗ್ರಾಮುಕ್ಕೊಂದು ಪಂಚಾಯತಿ ಬೋರ್ಡು, ಒಬ್ಬ ಪಟೇಲ, ಒಬ್ಬ ಶ್ಯಾನುಭೋಗ, ಇಬ್ಬರು ಪೇದೆಯರಲ್ಲ. ಇಂತಹ ಅಧಿಕಾರಿಗಳು ನಮ್ಮ ದೇಶದಲ್ಲಿ ಹೆಚ್ಚಾಗಿದ್ದಾರೆ. ಬೇಕಾದುದು ಶ್ರದ್ಧೆ; ಕಾರ್ಯತತ್ಪರತೆ; ದೇಶೀಯ ವಾತ್ಸಲ್ಯ; ಸಮಾಜಪ್ರೇಮ; ಮಾನವ ಪ್ರೀತಿ. ಇವು ನಮ್ಮ ಭಗಿನೀವೃಂದದಲ್ಲಿಯೇ ತುಂಬಿ ತುಳುಕುತ್ತಿದೆ. ದಾರಿದ್ರ್ಯರಕ್ಕಸನ ಕೈಯಲ್ಲಿ ಸಿಲುಕಿ, ಅನಾಗರಿಕತೆಯೇ ಹಬ್ಬಿರುವ ಅಂಧಕಾರದ ಕಗ್ಗಡವಿಯಲ್ಲಿ ದಿಕ್ಕು ತೋರದೆ ಓಡಾಡುವ ನಮ್ಮ ಹಳ್ಳಿಯ ಬಾಂಧವರನ್ನು ಮೇಲ್ಮೆಗೆ ತರುವುದು ನಮ್ಮ ಭಗಿನೀವೃಂದದಲ್ಲಿಯೂ, ಅಲ್ಪ ಮಂದಿ ವಿದ್ಯಾವಂತರಾದ ತರುಣತರುಣಿಯರಲ್ಲೂ ಇದೆ. ಹಳ್ಳಿಗೆ ಮುನಿದಿರುವ, ಸಹೋದರಿಯರಾದ 'ಲಕ್ಷ್ಮಿ—ಸರಸ್ವತಿಯರನ್ನು' ಒಲಿಸಬೇಕಾದರೆ ಪುರುಷರು ಭಗೀರಥಪ್ರಯತ್ನ ಮಾಡಿದರೂ ಸಾಧ್ಯವೇ! ಮನ್ಮಥನನ್ನು ವಧಿಸಿ ಜಯಶೀಲಂಕರಾದ ಸ್ತ್ರೀ ಕುಲವೇ ಇದಕ್ಕೆ ಯೋಗ್ಯವಾಗದಿರದು. ಭಗಿನಿಯರೇ, ಇನ್ನಾದರೂ ಆಲೋಚನಾಪರರಾಗಿರಿ. ಅಂಧಕಾರದಲ್ಲಿ ಕಣ್ಣು ತೋರದೆ, ಕತ್ತುದ್ದ ನೀರಲ್ಲಿ ಕಾಲು ಸಿಕ್ಕದೆ ತೇಲಾಡುವ ಹಳ್ಳಿಗಳ ಸೇವಾನಿರತರಾಗಿರಿ. ಲಕ್ಷ್ಮಿಯೇ ಮುನಿದಿರುವಳು. ಸರಸ್ವತಿಯೇ ಹುಬ್ಬು ಗಂಟಿಕ್ಕಿರುವಳು. ಸ್ತ್ರೀಕುಲಚೂಡಾಮಣಿಗಳಾದ ಇವರಿಬ್ಬರನ್ನು ಒಲಿಸುವ ಕಾರ್ಯಕ್ಕಿಳಿದು ದೇಶಸೇವಾತತ್ಪರರಾಗಿರಿ. ಇದಕ್ಕೆ ಜಿಲ್ಲಾ ಬೋರ್ಡು, ತಾಲೂಕು ಬೋರ್ಡು, ಮುನಿಸಿಪಲ್ ಕೌನ್ಸಿಲುಗಳ ಸಭಿಕರಾಗಲಿ ಚುನಾವಣೆಯ ರಂಗಸ್ಥಳಕ್ಕಿಳಿದು, ತನುಮನಧನವನ್ನು ವ್ಯಯಪಡಿಸಿ, ಪುಣ್ಯಕಾಲವನ್ನು ಸಂಕಲ್ಪದಲ್ಲಿಯೇ ಕಳೆಯುವುದಕ್ಕಿಂತ, ಇಂದೇ ಸೇವಾನಿರತರಾದರೆ, ಸತ್ಕುಲದಲ್ಲಿ, ಭಾರತ ಮಾತೆಯ ಉದರಲ್ಲಿ ಜನಿಸಿ, ಅಲ್ಪಸ್ವಲ್ಪ ವಿದ್ಯಾದಾನವನ್ನು ಪಡೆಯುದಕ್ಕೆ ಸಾರ್ಥಕವಾಗದೆ? ನೀವೇ ಕಾರ್ಯಕ್ಕಿಳಿದರೆ ನಿಮ್ಮ ಅಣ್ಣತಮ್ಮಂದಿರೂ ಕಣ್ಣು ಮುಚ್ಚಿ ನಿಮ್ಮನ್ನು ಹಿಂಬಾಲಿಸುವರು.

ಕಾರ್ಯವೇನು? ಹಣವೇ ಸರ್ವ ಸುಖ, ದುಃಖ, ಕಷ್ಟ, ಸಂಕಷ್ಟಗಳಿಗೆ ಕಾರಣ. ಇಂದಿನ ನಮ್ಮ ದುರ್ವ್ಯವಸ್ಥೆಗೂ ನಮ್ಮ ದಾರಿದ್ರ್ಯವೇ ಕಾರಣ. ದ್ರವ್ಯ ಸಂಪಾದನೆಗೂ, ಇದರ ಹೆಚ್ಚಳಕ್ಕೂ ಬರೇ ನಮ್ಮ ವ್ಯವಸಾಯವು ಸಾಲದು. ಕೈಗಾರಿಕೆಯು ಅಗತ್ಯ. ಕಳೆದು ಹೋದ ನಮ್ಮ ಹಳ್ಳಿಯ ಕೈಗಾರಿಕೆಗಳನ್ನು ಪುನರುಜ್ಜೀವಿಸಿ, ಪ್ರೋತ್ಸಾಹ ಕೊಡಬೇಕು. ಆಹಾರಸಾಮಗ್ರಿಗಳ ನಂತರ ಬಟ್ಟೆಯೇ ಮಾನಪನಿಗೆ ಮುಖ್ಯ. ಆದುದರಿಂದ ಮಹಾತ್ಮಾ ಗಾಂಧಿಯವರಿಂದ ಸ್ಥಾಪಿತವಾದ ಗ್ರಾಮು ಕೈಗಾರಿಕೆ ಸಂಘವನ್ನು ಮೇಲ್ಮೆಗೆ ತಂದು, ಕಾರ್ಯನಿರತರಾಗಬೇಕು. ಬಂಡವಾಳ ಸಂಕೋಚದ ದೆಸೆಯಿಂದ ಸಣ್ಣ ಸಂಘ-ಸಂಸ್ಥೆಗಳನ್ನೂ, ಸಹಕಾರ ಸಂಸ್ಥೆಯನ್ನೂ ಏರ್ಪಡಿಸಿ ಕಾರ್ಯವನ್ನು ಕೈಕೊಳ್ಳಬೇಕು. ಚರಕವನ್ನು ತಿರುಗಿಸಲು ನಮ್ಮ ಕೋಮಲಾಂಗಿಯರು ಕೈಕೊಳ್ಳಬೇಕು. ವಿದ್ಯಾವಂತರಾದ ಕೆಲವರ ಮುಂದಾಳುತ್ವದಿಂದ ಎರಡು ಮೂರು ಗ್ರಾಮುಗಳನ್ನು ಸೇರಿಸಿ, ಚರಕ ಸಂಘಗಳನ್ನು ಸ್ಥಾಪಿಸಿ, ನೂಲು ತೆಗೆದು, ಬಟ್ಟೆ ಮಾಡಿ ತಾವೇ ಉಟ್ಟು ಕೊಂಡು, ಆದಷ್ಟು 'ಸೆಲ್ಫ್ ಸಫೀಶಿಯಂಟ್' ತತ್ವ ಕಾರ್ಯವನ್ನು ಕೈಕೊಂಡರೆ ಪರದೇಶಕ್ಕೂ ದೇಶದ ಭಂಡವಾಳದಾರರಿಗೂ ಹೋಗುವ ದ್ರವ್ಯವು ನಮ್ಮ ಸಹೋದರಿಯರ ಖಜಾನೆಯಲ್ಲೇ ನಿಲ್ಲುವುದು. ಹಳ್ಳಿಯ, ಅಂತೂ ಮಿಡ್ಲ್ ಕ್ಲಾಸು, ಹೈ ಕ್ಲಾಸು ಭಗಿನಿಯರು ಕಾಸಿಗೆ ಪ್ರಯೋಜನವಿಲ್ಲದೆ ಹರಟೆ ಮಾತಿನಲ್ಲಿ ಎಷ್ಟು ಕಾಲವನ್ನು ಕಳೆಯುವುದಿಲ್ಲ? ಈ ಕಾಲವನ್ನು ಸದುಪಯೋಗಿಸಿದರೆ ಶೇಕಡ ೨೫ರ ಖರ್ಚು ಉಳಿಯುವುದು. ಇಂದಿನ ಸೋಮಾರಿ, ಮೈಗಳ್ಳತನವೇ ಲಕ್ಷ್ಮೀದೇವಿಯನ್ನು ಕೋಪಿಸಿದುದು. ಆದುದರಿಂದ ಕಾರ್ಯಜಾಣರಾಗಿ, ಕೈಯಲ್ಲಿ ಚರಕ, ರಾಟೆ, ಮಗ್ಗಗಳನ್ನು ತಿರುಗಿಸಿ, ಲಕ್ಷ್ಮೀದೇವಿಗೆ ಆರತಿ ಎತ್ತಿದರೆ ಅವಳು ಒಲಿಯದಿರಲು ಕಾರಣವುಂಟೇ?

ಎರಡನೆಯದು ವಿದ್ಯೆ. ಸ್ತ್ರೀಯರಿಗೆ ವಿದ್ಯೆಯು ಪುರುಷರಿಗಿಂತಲೂ ಅಗತ್ಯ. ವಿದ್ಯೆಯ ಗುರಿಯು ಬರೀ ಹಣಕಾಸುಗಳನ್ನು ಕೂಡಿಸುವುದಲ್ಲ. ಸಂಸಾರದ ಸುಖ, ಸಮಾಜ ಹಿತ, ದೇಶ ಸೇವೆಗಳೇ ಇದರ ಗುರಿಯಾಗಿವೆ. ಸಮಾಜದಲ್ಲಿ ಸ್ತ್ರೀಯರ ಸ್ಥಾನವನ್ನು ಪರ್ಯಾಲೋಚಿಸಿದರೆ ಇದರ ಆವಶ್ಯಕತೆಯು ವ್ಯಕ್ತವಾಗುವುದು. ವಿದ್ಯೆಯೆಂದರೆ ಆಂಗ್ಲೇಯ ಭಾಷೆಯನ್ನು ಮಾತಾಡ ಕಲಿತರೆ ಮಾತ್ರ ವಿದ್ಯಾವಂತರೆಂದಲ್ಲ. ಆಂಗ್ಲೇಯ ಕಂಪೆನಿಗಾರರಿಂದ ಸ್ಥಾಪಿತವಾದ ಗರಿಯನ್ನೋಡಿಸುವ ವಿದ್ಯೆಯು ವಿದ್ಯೆಯಲ್ಲ. ಲೋಕಜ್ಞಾನ, ಸಾಮಾನ್ಯ ತಿಳಿವಳಿಕೆ, ಮಾನವ ಭಕ್ತಿ, ಸಮಾಜಸೇವೆ, ದೇಶವಾತ್ಸಲ್ಯ ಇವನ್ನುದ್ಭವಿಸಿ, ಪ್ರೋತ್ಸಾಹಿಸುವ ದೇಶೀಯ ವಿದ್ಯೆಯೂ ವಿದ್ಯೆಯು. ಇದೇ ನಮಗೆ ಇಂದು ಅಗತ್ಯವಾದ್ದು. ಇಂಥಾ ವಿದ್ಯೆಯು ನಮ್ಮ ಸ್ತ್ರೀಯರಲ್ಲಿ ವ್ಯಾಪ್ತಿಯಾದರೆ ದೇಶವೇ ವಿದ್ಯಾಗನಿಯಾದಂತಾಗುವುದು. ತಾಯಿ ವಿದ್ಯಾವತಿಯಾದರೆ ತನ್ನ ಉದರದಲ್ಲಿ ಜನಿಸಿದ ಮಕ್ಕಳನ್ನು ತಿಳಿಗೇಡಿಗಳನ್ನಾಗಿ ಬೆಳೆಯ ಬಿಡುವಳೆ! ಆದುದರಿಂದ ಹಳ್ಳಿಯ ಸೇವೆಯಲ್ಲಿ ಸ್ತ್ರೀಯರಿಗೆ ವಿದ್ಯೆಯು ಅಗತ್ಯ. ಕೇಂದ್ರೀಯ ಸ್ಥಾನದಲ್ಲಿರುವ ಮಠ, ದೇವಸ್ಥಾನಗಳನ್ನು ಪ್ರಾರ್ಥನಾಮಂದಿರಗಳಲ್ಲದೆ ಸರಸ್ವತೀನಿಲಯಗಳನ್ನಾಗಿ ಮಾಡಬಹುದು. ಧರ್ಮಾರ್ಥ ಲೈಬ್ರೆರಿಗಳನ್ನು ಸ್ಥಾಪಿಸಿ, ವಿದ್ಯಾವ್ಯಾಪ್ತಿಯ ಕಾರ್ಯವನ್ನು ಕೈಕೊಳ್ಳಬಹುದು. ಓದು ಹುಟ್ಟು ಒಮ್ಮೆ ಹುಟ್ಟಿತೆಂದರೆ ನುತ್ತೆ ಬಿಡುವುದು ಕಷ್ಟ. ಅಂತೂ ನಮ್ಮ ಭಗಿನಿಯರು ಎಂದೂ ಬಿಡುವಂತಿಲ್ಲ. ಇದಕ್ಕೆ ಹಂಚು ಹಾಕಿದ, ಗಾರೆ ಬಳೆದ ಅಪ್‌ಟುಡೇಟು ಕಟ್ಟಡಗಳು ಇಲ್ಲವೆಂದು ಸುಮ್ಮನೆ ಕುಳಿತರೆ ಕಾರ್ಯ ಸಾಗದು—ಇದ್ದ ಸೌಕರ್ಯಗಳನ್ನು ಸಂತೋಷದಿಂದ ಕೂಡಿಸಿ, ಕಾರ್ಯವನ್ನು ಸಾಂಗಗೊಳಿಸುವುದೇ ಕಾರ್ಯಜಾಣರ ಲಕ್ಷಣವಲ್ಲವೆ?

ಸಹೋದರಿ 'ಲಕ್ಷ್ಮಿ—ಸರಸ್ವತಿಯರು' ಕಣ್ಣು ತೆರೆದು ಪ್ರೇಮವಾತ್ಸಲ್ಯವನ್ನು ಬೀರಿದರೆ, ಬೇರೆಲ್ಲರೂ ಒಬ್ಬರ ಹಿಂದೊಬ್ಬರು ತಾವಾಗಿಯೇ ಬರುವರು. ಸುಖಿತ್ವ, ನಿರ್ಮಲತ್ವ, ಶಾರೀರಿಕ, ಮಾನಸಿಕ, ಇಹಲೋಕ, ಪರಲೋಕ ಸುಖಕಾರಿಗಳು ತಾವಾಗಿಯೇ ದರ್ಶನವನ್ನೀಯುವರು. ಅಸ್ಪೃಶ್ಯತಾನಿವಾರಣೆಯಾಗುವುದು. ಹಿಂದೂ, ಮುಸ್ಲಿಂ, ಬಂಟ, ಬಿಲ್ಲವ, ಜೇಡ, ಕ್ರಿಶ್ಚಿಯನ್, ಪಾರ್ಸೀ ಎಂಬ ಭೇದಾಭೇದವು ಮಾಯವಾಗುವುದು. ಐಕ್ಯವು ಹುಟ್ಟುವುದು. ಜನರೆಲ್ಲರೂ ಒಗ್ಗಟ್ಟಾಗಿ ದೇಶಸೇವೆಗೆ ಇಳಿದರೆ ಕಾರ್ಯವು ನಿಮಿಷಮಾತ್ರದಲ್ಲೇ ಕೈಗೂಡುವುದು. ಒಗ್ಗಟ್ಟಿನಲ್ಲಲ್ಲವೆ ಬಲ? ಸ್ವರಾಜ್ಯ ಕೋಳಿಯು ಕೂಗುವುದು. ಪ್ರಫುಲ್ಲವಾದ, ಕಾಂತಿಮಯ, ಸುಖದಾಯಕ ರವಿಯು ಮೂಡುವನು. ಭಾರತಮಾತಾ—ಹಿಂದೂದೇಶವು—ಅಂಧಕಾರದಿಂದ ಬೆಳಕಿಗೆ ಬರುವಳು. ದೇಶವೃಂದದಲ್ಲಿ ತಕ್ಕ ಸ್ಥಾನವನ್ನು ಪಡೆದು ತನ್ನ ಹಿಂದಿನ ತೇಜಸ್ಸನ್ನು ಹೊಂದಿ ಲೋಕನಾಯಕಿಯಾಗುವಳು! ಭಗಿನಿಯರೇ ಆಲೋಚಿಸಿರಿ.

(ಇನೇ ಪುಟದಿಂದ)

ಕರೆದುಕೊ. ಅಮ್ಮಾ! ಈ ಸಂಕಷ್ಟದಲ್ಲಿ ನೀನಲ್ಲದೆ ನನಗೆ ಆಶ್ರಯ ಕೊಡುವವರು ಯಾರು? ಬಾ, ಮಗೂ, ಅಳಬೇಡ, ನಿನ್ನ ಪಾಲಿಗೆ ನಾನಿದ್ದೇನೆ, ಎನ್ನುವವರು ಯಾರು? ನನ್ನನ್ನು ಕರೆದುಕೊಂಡು ಹೋಗು. ನೀನು ಇರುವ ಸ್ಥಳದ ದಾರಿ ತಿಳಿಯೆನು, ಅಮ್ಮಾ! ಬೇಗ ಬಾ, ಬಾ; ನಾನಿರಲಾರೆ; ಕರೆದುಕೊಂಡು ಹೋಗು!' ಎಂದು ಬೊಬ್ಬಿಟ್ಟಳು. ನದಿಯ ದಂಡೆಯ ಮೇಲಿನ ತೆಂಗಿನ ಮರಗಳು—'ಅಹಾ! ಸಮಾಜವೇ! ನಿರಾಧಾರೆಯಾದ ಹೆಣ್ಣಿನ ಮೇಲೆ ಇಷ್ಟು ನಿರ್ದಯನಾದಿಯಲ್ಲ!' ಎಂದು ತಮ್ಮ ತಲೆಗಳನ್ನು ಕೊಡಹುತ್ತಾ 'ಉಸ್ಸ್, ಉಸ್ಸ್' ಎಂದು ನಿಟ್ಟುಸಿರು ಬಿಡುತ್ತಿದ್ದುವು. ಚಿರದುಃಖಿನಿ ಸೀತಾಮಾಯೆಯು ಇವಳ ದುಃಖ ದೊಂದಿಗೆ ತನ್ನ ಅಳುಗೊರಳನ್ನು ಸೇರಿಸಿ ಅಳುತ್ತಾ, ತನ್ನ ತೆರೆಗೈಗಳಿಂದ, 'ಹಿರಣೇ! ಬಾ, ಸಮಾಜವು ನೂಕಿದರೂ ನಾನು ಆಶ್ರಯ ಕೊಡುತ್ತೇನೆ,' ಎಂದು ಕರೆಯುತ್ತಿದ್ದಳು. ಹಿರಣಿಗೆ ನದಿಯ ಸೂಚನೆ ತಿಳಿಯಿತು. ಅವಳು ಕಣ್ಣೀರನ್ನು ಒರಸಿಕೊಂಡು ಎದ್ದು ನಿಂತು—'ತಾಯಿಾ! ನೀನು ಪತಿತ ವಾವನೆ. ನನ್ನಲ್ಲಿ ಕಳಂಕ ವಿದ್ದರೆ ತೊಳೆದು ಪಾವನಳನ್ನಾಗಿ ಮಾಡಿ ಸ್ವೀಕರಿಸು. ಸಮಾಜವು ನೂಕಿದಂತೆ ನೀನೂ ಒಗಡಿಸಿ ಬಿಡುವೆಯಾದರೆ ಹಾಗೇ ಮಾಡು,' ಎಂದವಳೇ ನದಿಗೆ 'ಧುಡುಂ' ಹಾರಿದಳು. ನದಿಯ ತೆರೆಗಳು ಹೊರಳಿಗಳ ಮೇಲೆ ಹೊರಳಿಗಳು ಬಂದು ದಡವನ್ನು ಅಪ್ಪಳಿಸಿದುವು. ನಿರ್ಮಲ ಸಲಿಲದಲ್ಲಿ ಹಿರಣಿಯ ಕೇಶಗುಚ್ಛಗಳು ಮೂರು ಸಲ ತೋರಿದುವು. ಆ ಮೇಲೆ ಕಾಣಿಸಲಿಲ್ಲ.

ದುಷ್ಟ ಸಮಾಜವೇ! ಈಗೇನು ಮಾಡುವಿ? ಹೆಣ್ಣೊಂದನ್ನು ಹೊಳೆಗೆ ನೂಕಿದೆಯಷ್ಟೆ! ಇನ್ನಾದರೂ ಸುಖದಿಂದ ನಿದ್ದೆ ಮಾಡು. ಸಮಾಜ! ನಿನ್ನ ಮುಡಿ ಗಾತ್ರದ ದೋಷಗಳನ್ನೆಲ್ಲಾ ಮುಚ್ಚಿಟ್ಟು, ಕೋಮಲೆ ಬಾಲೆಯ ಸಾಸಿವೆ ತೋರದ ತಪ್ಪನ್ನು ಗಾಳಿಗೆ ಹರಡಿ ಕೊಂದೆಯಲ್ಲ! ನಿನ್ನ ವರ್ತನಕ್ಕೆ ಬೆಂಕಿ ಹಚ್ಚಲಿ!

ಸೀತಾ ನದಿಯು ಹಿರಣಿಯನ್ನು ತನ್ನಲ್ಲಿ ಅಡಗಿಸಿಕೊಂಡು ಸಮುದ್ರಾಭಿಮುಖವಾಗಿ ತೆರಳಹತ್ತಿದಳು. ಹೆಣ್ಣಿನ ಹರಿಬಕ್ಕೆ ಅವಳೊಬ್ಬಳೇ ನೆರವಾದಳು.

ಹಿರಣ್ಮಯಿಯು ವರದಕ್ಷಿಣೆಗೆ ಬಾಯಿನೀರು ಕರೆಯುವ ದಾನವರ ಲೋಕದಿಂದ ಅದೃಶ್ಯಳಾದಳು. ಅವಳಿನ್ನೆಂದಿಗೂ ಈ ಕಲ್ಲೆದೆಯ ಜಗತ್ತಿನಲ್ಲಿ ಜನಿಸಳೆಂದು ನನ್ನ ನಂಬುಗೆ.

AN OPEN LETTER TO THE READERS OF "KANTEERAVA"

Dear Mr. Reader,

Will it cause you any surprise if I inform you that THE GUARDIAN OF INDIA INSURANCE CO., LTD., which has done a record business of about 37 Lakhs within an year of its start, has a most attractive 'Depositors Insurance Scheme' which enables every man or woman between the ages 18 and 50 to take out an Endowment Policy for 15, 20 & 25 years WITH PROFITS through The Travancore National Bank Ltd., The Canara Banking Corporation Udipi Ltd., or any other good Banks in South Kanara.

If you have an account with any of the Banks mentioned above it is high time for you to take out a policy under the above scheme at once, and the advantages you get thereby are many.

You pay the LOWEST PREMIUM of all the Insurance Companies in India. You get interest on your account from the Bank. You are saved the trouble of remitting your premium. The premium rate under this scheme is about Rs. 5 less than our standard premiums.

All these advantages coupled with the fact that we have done a record business already, must induce you and your friends to write to the undersigned for full particulars.

Kindly note that the Directorate of THE GUARDIAN consists of, among others Heads of two of the foremost Banks in South India. A post-card from you to the undersigned will bring you back a handsome Book-let of The Depositors Insurance Scheme.

Thanking you in advance, I remain,

very truly yours,

V. D. HERANJAL,

Dt. Organiser, Udipi

ವೆಂಕಟಗಿರಿ ಮಹಾತ್ಮೆ

೫೯೯ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ.

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಸೂರೆಯಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್ ಟೋನ್ ಚಿತ್ರಗಳಿಂದ ಕೂಡಿದೆ.

ನುಣ್ಣಗಿನ ಮುದ್ರಣ.

ಬೆಲೆ ರೂಪಾಯಿ ೧—೪—೦.

ಟಪ್ಪಾಲು ಹಾಸಲು ಬೇರೆ.

ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮ ಕೃಷ್ಣಯ್ಯನವರಿಂದ ಭಾಷಾಂತರಿಸಲ್ಪಟ್ಟಿತು. ಸುಲಭ ಶೈಲಿ, ಪಂಡಿತರಿಗೂ ಆನಂದಕರ ಪಠನ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕಿತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

ಯೋಗ್ಯ ದರದಲ್ಲಿ ಉತ್ತಮ

ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.



ಸಚಿತ್ರ ಕ್ಯಾಟಲಾಗ್ ಫುಕಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಪಾತ್ರಿಯವರಿಗಾಗಿ ಸದಾ ಸಿದ್ಧವಿರುವವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,
ಭಾಂಡೆ ವ್ಯಾಪಾರಿ, Brass-ware Merchant,
ಉಡುಪಿ, ದ. ಕ. Udipi, S. K.



ಆರ್. ಮಾರ್ಟಿನ್ಸ್‌ರ

ಆಸ್ತಮೊಡಾಯನ್

ಈ ಸಮ್ಮ ಔಷಧವು ಬಹಳ ಕಾಲದಿಂದ ಉಪಯೋಗಿಸಿದ ಮತ್ತು ಅತೀ ಪ್ರಯೋಜನಕರವಾದ ಕಫ, ಕೆಮ್ಮು, ದಮ್ಮು, ನೆಗಡಿ, ಗಂಟಲುನೋವು ಎದೆನೋವು, ಶ್ವಾಸಕೋಶದ ನೋವು ಇವೇ ಮುಂತಾದವುಗಳನ್ನು ನಾಶ ಮಾಡಿ ಉಸುರಾಡುವುದಕ್ಕೆ ಸುಲಭ ಮಾಡುತ್ತದೆ. ಎದೆಯನ್ನು ಶುಭ್ರ ಮಾಡುತ್ತದೆ. ಈ ಔಷಧದ ಪೂರ್ಣ ಗುಣ ಸಿಕ್ಕಬೇಕಾದರೆ ಒಂದೇ ಬಾಟ್ಲಿಯನ್ನು ಉಪಯೋಗಿಸಿದರೆ ಸಾಕು. ಈ ಔಷಧವನ್ನು ಒಂದು ಸಾರಿ ತೆಗೆದುಕೊಂಡವರಿಗೆ ಮೇಲೆ ವಿವರಿಸಿದ ಕಾಯಿಲೆಗಳು ಪುನಃ ಹಿಡಿಸುವುದಿಲ್ಲ. 60 ಗುಳಿಗೆಗಳ ಒಂದು ಬಾಟ್ಲಿಗೆ ಕ್ರಯ ರೂ. 1—4—0. 12 ಬಾಟ್ಲಿಗಳಿಗೆ ಕ್ರಯ ರೂ. 13—8—0.

R. D. KATELY & Co.,
319 Frere Road,
Opposite Fort Market, near Fountain,
BOMBAY.

ಆರ್. ಡಿ. ಕಟೆಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೆಟಿನ ಎದುರು,
ಫೋರ್ಟ್, ಬೊಂಬಾಯಿ.

ಆರೋಗ್ಯ
ಮತ್ತು
ಚೈತನ್ಯ
ಕ್ಕಾಗಿ
ಒಕಾಸಾ
ಸೇವಿಸಿ.

ಈ ಅತ್ಯುತ್ಕೃಷ್ಟವಾದ ಹೊರ್ಮನ್ ಟಾನಿಕಿನ ಖಾತರಿಯೂ ತೀವ್ರವೂ ಆದ ಗುಣಕ್ಕೆ ಹೋಲಿಸಲು ಬರುವ ಅಥವಾ ಸಮೀಪವರ್ತಿಯಾಗಿರುವ ಬೇರಾವುದೂ ಇಲ್ಲ.



ಒಕಾಸಾದಲ್ಲಿ ವಿಪುಲವಾದ ಆರೋಗ್ಯವನ್ನೂ, ಚೈತನ್ಯವನ್ನೂ ದೊರಕಿಸಿಕೊಡುವ ಪದಾರ್ಥಗಳಿವೆ; ಅದು ನಿಮ್ಮ ದೇಹರಚನೆಯಲ್ಲಿರುವ ನಿಶ್ಶಕ್ತಿ ಮತ್ತು ನಿತ್ರಾಣದ ಪ್ರತಿಯೊಂದು ಚಿಹ್ನೆಯನ್ನೂ ಸಂಪೂರ್ಣವಾಗಿ ಹೋಗಲಾಡಿಸುತ್ತದೆ; ನಿಮ್ಮನ್ನು ಉತ್ತಮ ಆರೋಗ್ಯ, ಬಲವಾದ ನರ, ಹೆಚ್ಚಿನ ಶಕ್ತಿ ಮತ್ತು ವೃದ್ಧಿಯಾದ ಚೈತನ್ಯ ಇವುಗಳಿಂದ ಕೂಡಿದ ಒಬ್ಬ ಹೊಸ ಮನುಷ್ಯನನ್ನಾಗಿ ಮಾಡುತ್ತದೆ.

ತರುಣರಾಗಿರಿ

ಒಕಾಸಾದೊಡನೆ.

ಅದನ್ನು ಪಡೆಯಿರಿ, ನಿಮ್ಮ ಕೆನಿಸ್ಟರಿಂದ ಅಥವಾ
OKASA Co., BERLIN (INDIA), LTD.,
12, Rampart Row, Fort,
P. O. Box 396, BOMBAY.

POHOLATUM

An ideal Balm for all pains,
sprains, headaches, colds etc.

SOLE AGENTS FOR INDIA.

Basel Mission Book Depot,
MANGALORE.

Agents and stockists wanted from all parts.

Gordhandas Sandal Oil Distillery, Mangalore.

NOW READY!
CHEAPER-YET MORE EFFICIENT!

MOSQUITO FUMIGATOR STICKS

3 ANNAS A PACKET!
(Sufficient for one week)

Use and enjoy sound and healthy sleep and protect from maleria, cholera etc., contageous diseases—

Stock'sts:—
SHENOY BROTHERS,
CAR STREET, MANGALORE,

ಬಿಳೇ ತೊನ್ನು—
ಮತ್ತೂ ಕುಷ್ಠ ರೋಗ.

ಈ ಔಷಧದ ಕೆಲವು ದಿನಗಳ ಸೇವನೆಯಿಂದಲೇ ಬಿಳೇ ತೊನ್ನೂ ಕುಷ್ಠರೋಗವೂ ಸಂಪೂರ್ಣವಾಗಿ ಗುಣವಾಗುತ್ತದೆ. ಸೂರಾರು ಮಂದಿ ಹಕೀಮರೂ, ಡಾಕ್ಟರುಗಳೂ, ಕವಿರಾಜರೂ, ಜಾಹೀರಾತುಗಳನ್ನು ಪ್ರಕಟಿಸಿದನರೂ ಈ ಭಯಂಕರ ವ್ಯಾಧಿಯನ್ನು ಗುಣಮಾಡಲಾರದೆ ಹೋದರೂ ಈ ಔಷಧಪ್ರಯೋಗದಿಂದ ಆ ರೋಗವನ್ನು ನಿರ್ಮೂಲಿಸಿ ಬಿಡಿ. ಇದು ವ್ಯರ್ಥವೆಂದು ರುಜುವಾತಾದಲ್ಲಿ ನಮ್ಮ ಬಹುಮಾನ ರೂ. 500.

Vaidya Raj Akhila Kishori Ram,
No. 223, P. O., Katri Sarai. (GAYA)
ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

Guaranteed
Hygienic Rubber Goods
(PROPHYLACTIC)

Of superior quality. Dozen Rs. 3/12. Six annas postage stamps will get you one as sample.

K. Agency,
(Dept. C),
MANGALORE No. 13.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ
ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ಪರದೇಶದಲ್ಲಿ ಖರ್ಚಾಗುವ,

ಶಕ್ತಿಯ ಮೇಲೆ ಮೊದಲನೆ ತರಗತಿಯ ಟಾನಿಕ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾಕರ್ಷಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀಯಂತ್ರಗಳಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ [ಗರಮಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಒಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರುಪು ಬೀಳೋಣ, ಶೌಚಕ್ಕೆ ಸಾಫು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವೃಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ, ಶರೀರ ಒಲವಾಗಿ, ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣದ ಗರ್ಮಿಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು.

ಪ್ರಮಾಣ:—ನಸಿಕಿನಲ್ಲಿ ಒಂದು ತೊಲೆ ಮತ್ತು ಸಂಜಿಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧। ರೂ. ೩ ಬಾ. ಬೆಲೆ ೩॥ ರೂ.
೧ ಡಜನ್ ಬಾ. ಬೆಲೆ ೧೨ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಪ್ಪ ನಿಪ್ಪಾಣಿ, ಜಿಲ್ಲಾ (ಬೆಳಗಾಂವ.)

ಮಂಗಳೂರು—ಮಿಜಾರಕರ ಬ್ರದರ್ಸ, ಶೆಣೈ ಬ್ರದರ್ಸ್, ವ ಗಜಾನನ ಮೇಡಿಕಲ ಹಾಲ, ಕಾರ ಸ್ಟ್ರೀಟ್,
ಉಡ್ಪಿ— ಪೈ ಫಾರ್ಮಸಿ ಮತ್ತು ಕೆ. ಶೇಷಗಿರಿ ಪೈ, ತರಕಪೇಟೆ.
ಕಾರ್ಕಳ—ವ್ಹಿ. ವ್ಹಿ. ಶೆಣೈ.
ಕುಂದಾಪುರ—ಕೆ. ಆರ್. ಭಡಜೀ.
ಕಾಸರಗೋಡು—ಕೆ. ರಾಮು ನಾಯ್ಕ.
ಭಕ್ತ ಬ್ರದರ್ಸ್—

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೊರ್ಸ್‌ದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ

ಡಿಸ್ಟ್ರಿಕ್ಟ್ ಬೋರ್ಡಿನ ಅವ್ಯವಸ್ಥೆ

(ಎಸ್. ಎ. ಇವರಿಂದ)

ಹಿಂದಿನ ಸಂಚಿಕೆಯಲ್ಲಿ ಈ ವಿಷಯ ಕೊಂಚ ಎತ್ತಿಕೊಂಡಿದೆ. ೬ ತಾಲೂಕು ಬೋರ್ಡುಗಳನ್ನು ಮುರಿದು ಅವುಗಳ ಎಲ್ಲಾ ಕೆಲಸಗಳನ್ನು ಡಿಸ್ಟ್ರಿಕ್ಟ್ ಬೋರ್ಡು ಒಂದೇ ನಿರ್ವಹಿಸಬೇಕೆಂಬ ಏರ್ಪಾಡಿಗೆ ಆಗಲೇ ಎಲ್ಲರೂ ಆಕ್ಷೇಪಿಸಿದ್ದಾರೆ. ಆದರೂ ಈ ಸಂಯೋಜನೆ ನಡೆದೇ ಹೋಯಿತು. ಇಲ್ಲಿ ಮೊತ್ತಮೊದಲು ಎಲ್ಲಾ ತಾ. ಬೋರ್ಡುಗಳ ಸಿಬಂದಿ ಬಂದು ಕೆಲಸ ಮಾಡಲಾರಂಭಿಸಿತು. ಆಪ್ಪರಲ್ಲಿ ಖರ್ಚು ಕಡಿಮೆ ಮಾಡುವ ಬಗ್ಗೆ ಸೂಚನೆಗಳು ಬಂದವು. ಸಿಬಂದಿ ಕಡಿಮೆ ಮಾಡಲಾಯಿತು. ಸಿಬಂದಿಗಳ ಯೋಗ್ಯತೆಯ ಹೊಸ ಅಳತೆ ಕೋಲನ್ನು ತಯಾರಿಸಿ ಪ್ರಾಂತಿಕ ಸರಕಾರದವರು ಕಳುಹಿಸಿದರು. ಅದಕ್ಕೆ ಮೊದಲು ಮೊಳವೆಂಬುದು ಮಾರಿಗಿಂತ ತುಸು ಕಡಿಮೆಯಾಗಿದ್ದಿತು. ಈಗ ಯಾರ್ಡುಕೋಲಿನಿಂದ ಅಳೆಯುವಾಗ ಹಲವರ ಯೋಗ್ಯತೆ ಕಡಿಮೆಯಾಗಿದ್ದು ಆ ಗುಮಾಸ್ತರ ಸಂಖ್ಯೆಯೊಂದಿಗೆ ಸಂಬಳದ ದರಗಳೂ ಕಮ್ಮಿಯಾದುವು. ೫೫ ರೂ. ಒಮ್ಮೆ ದೊರೆಯುತ್ತಿದ್ದವರಿಗೆ ಈ ಹೊಸ ಸರ್ವೇಯಲ್ಲಿ ೩೮, ೪೯ ರೂಪಾಯಿ ಸಿಗಲಾರಂಭಿಸಿತು. ಮುಖ್ಯವಾಗಿ ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ ತಾಲೂಕಿಗೆ ಒಬ್ಬರಂತೆ ಹಿಂದೆ ೬ ಮಂದಿ ಮಾಡುತ್ತಿದ್ದ ಕೆಲಸವನ್ನು ಮೂರೇ ಮಂದಿ ಮಾಡಬೇಕೆಂದಾಯಿತು. ಬೇರೆ ಕೆಲವು ಜಿಲ್ಲೆಗಳಲ್ಲಿ ಈ ಅಳತೆ ಕೋಲು ಜಾರಿಗೆ ಬಂದರೂ ಗುಮಾಸ್ತೆಯರ ಸಂಖ್ಯೆ ಒಮ್ಮೆ ಕಡಿಮೆಯಾದುದು ಆ ಮೇಲೆ ಮೆಲ್ಲಮೆಲ್ಲನೆ ಏರಿತು. ಇಲ್ಲಿ ೬ ಮಂದಿ ಮಾಡುವ ಕೆಲಸವನ್ನು ೩ ಮಂದಿ ಕಡಿಮೆ ದರಗಳಲ್ಲಿ ಮಾಡಬೇಕಾಯಿತು. ಅವರಿಗೆ ಬೇಕು ಬೇಕಾದ ಕಾಫಿ ತಿಂಡಿ ತಿನ್ನಲಿಕ್ಕೆ ದುಡ್ಡು ಕಡಿಮೆ; ಮೊದಲು ಈ ಗುಮಾಸ್ತರನ್ನೆ ಆಶ್ರಯಿಸಿದ್ದವರು ದಯಾಳುವಾದ ಪ್ಲೆಸಿಡೆಂಟರನ್ನು ಆಥವಾ ಸೆಕ್ರೆಟರಿಗಳನ್ನು ಸ್ವತಃ ಕಂಡು ಆಥವಾ ಬೇಕುಬೇಕಾದ ಡಿ. ಬೋ. ಮೆಂಬರರನ್ನು ಹಿಡಿದು ಅವರ ಮೂಲಕ ತಮ್ಮ ಕಾರ್ಯ ಸಾಧಿಸಿದರು. ಅದಲ್ಲದೆ ಜಿಲ್ಲಾ ಕೋರ್ಟು, ಕಲೆಕ್ಟರರ ಕಚೇರಿಗಳಂತೆ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸುಗಳ ಸವಿೂಪದಲ್ಲಿ ಕಾಫಿ ಹೋಟ್ಲುಗಳಿಲ್ಲ. ಹೀಗಾಗಿ ಈ ಬಡ ಗುಮಾಸ್ತರು ಉಪಾಧ್ಯಾಯರಿಂದ ಬಂದ ರಿಪೋರ್ಟುಗಳನ್ನೆ ತಿಂದು ಜೀವಿಸ ತೊಡಗಿದರು. ಪ್ರಾಥಮಿಕ ಶಾಲಾ ಉಪಾಧ್ಯಾಯರು ಬಂದು ಸೇರುವ ಕಾಫಿ ಹೋಟ್ಲುಗಳಲ್ಲಿ ಅರ್ಧ ಗಂಟೆ ಕುಳಿತುಕೊಂಡರೆ ಉಪಾಧ್ಯಾಯರ ಬಾಯಿಯಲ್ಲಿ ಇದೇ ದೂರು. ಹೋದ ಹೋದ ಆರ್ಜಿಗಳು, ರಿಪೋರ್ಟುಗಳು ಕಾಣೆ. ಮೆಲ್ಲಗೆ ಅಲ್ಲಿಂದ ಶಾಲಾ ಇಲಾಖಾ ಆಫೀಸರರು ಬರೆದ ರಿಪೋರ್ಟುಗಳೂ ಕಾಣೆಯಾಗ ತೊಡಗಿದವು. ಯಾವುದೊಂದು ಇತ್ಯರ್ಥಕ್ಕೆ ಅಗತ್ಯಬಿದ್ದಾಗ ವಿದ್ಯಾ ಇಲಾಖೆಯ ಆಫೀಸರರಿಂದ ರಿಪೋರ್ಟುಗಳ ದ್ವಿಪ್ರತಿಗಳನ್ನು ತರಿಸ ಬೇಕಾಗಿ ಬಂತು. ಈ ಬಗೆಯ 'ಡಿಸ್‌ಪೊಸಲ್ಸ್' ಡಿ. ಬೋರ್ಡಿನವರು ಎಲ್ಲಿಯೊ ವಿದ್ಯಾ ಇಲಾಖೆಯಿಂದ ಕಲಿತಂತೆ ಕಾಣುತ್ತಿದೆ. ಈಗ ಹಲವು ವರ್ಷಗಳ ಹಿಂದೆ ಈ ಜಿಲ್ಲೆಯಲ್ಲಿ ಒಬ್ಬ ಲೋಕಲ್ ಫಂಡ್ ಸುಪರ್‌ವೈಜರರಿದ್ದರಂತೆ. ಅವರಿಗೆ ಮೇಲಾಫೀಸರರಿಂದ ಅಂದರೆ ಸರಕಾರಿ ಸಬ್ ಅಸಿಸ್ಟಾಂಟರಿಂದ ಬಂದ ಒಂದು ಪತ್ರವ್ಯವಹಾರಕ್ಕೆ ಉತ್ತರ ಹಾರೈಸಿ ಜನೇ 'ರಿಮ್ಯಾಂಡರ್' ಬಂತಂತೆ. ಆಗ ಅವರು ತಮ್ಮ ಪತ್ರವ್ಯವಹಾರವನ್ನೆಲ್ಲ ಒಂದು ಚಾಪೆಯ ಮೇಲೆ ಬಿಡಿಸಿಟ್ಟು, ಒಂದೊಂದೆ ಕಾಗದವನ್ನು ತೊಡೆಯ ಮೇಲಿತ್ತಿ ಉತ್ತರ ಬರೆಯುತ್ತಿದ್ದರು—ಆಗ್ಗೆ ಮೇಜು ಕುರ್ಚಿಗಳ ವಾಡಿಕೆಯಿದ್ದಿಲ್ಲ—ತೋಟದಲ್ಲಿ ಮೇಯುತ್ತಿದ್ದ ಆಡೊಂದು ಓಡಿ ಬಂದು ಜಗಲಿ ಹತ್ತಿ ಸುಪರ್‌ವೈಜರರು ಇಟ್ಟ ಕಾಗದ ಪತ್ರವನ್ನು ಕಚ್ಚಿಕೊಂಡು ಓಡಿ ಹೋಯಿತು. ಇವರು ಆಡಿನ ಹಿಂದೆ ಓಡಿದರು. ಮೈ ಬೆವರಿತು, ಕಾಲು ದಣಿಯಿತು. ಆಡು ಈ ಕಡೆಗೂ ಆ ಕಡೆಗೂ ಓಡಾಡಿ ಆ ಕಾಗದವನ್ನು ತಿಂದುಬಿಟ್ಟಿತು. ಆಡುಗಳಿಗೆ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಆಹಾರ ಕೊಟ್ಟು ಸಾಕುವುದು ಕಡಿಮೆ; ಆವು ಬೇರೆಯವರ ತೋಟಗಳನ್ನು ಮುರಿದೇ ಕಾಲಕ್ಷೇಪ ಮಾಡಬೇಕಾಗಿದೆ. ಆಂತು ಸುಪರ್‌ವೈಜರರ ಜೀವದ ಸುತ್ತಿಗೆ ಬಂತು. ಇದನ್ನೆಲ್ಲ ನೋಡುತ್ತಿದ್ದ ಗೆಳೆಯನೊಬ್ಬನು 'ಇನೆ ರಿಮ್ಯಾಂಡರ ಕಳುಹಿಸಬೇಡಿ. ಆಡು ಆ ಪತ್ರವ್ಯವಹಾರವನ್ನು ಸರಿಯಾಗಿ ಡಿಸ್ಪೊಸಲ್ ಮಾಡಿದೆ ಎಂದು ಮೇಲಾಫಿಸರರಿಗೆ ಬರೆಯಿರಿ,' ಎಂದನಂತೆ. ಇದನ್ನು ಈ ಗುಮಾಸ್ತರುಗಳು ಎಲ್ಲಿಯೋ ಕೇಳಿರಬೇಕು. ಹೀಗಾಗಿ ಹೋದ ಕಾಗದಗಳಿಗೆ ಪ್ರತ್ಯುತ್ತರವೇ ಬರುವುದಿಲ್ಲ. ಡಿಸ್ಟ್ರಿಕ್ಟ್ ಬೋರ್ಡ್ ಎಜ್ಯುಕೇಶನಲ್ ಆಫೀಸರರಿಂದ ಸರ್ಕ್ಯುಲರ್‌ಗಳು ಬರುವುದಕ್ಕೆ ಮಿತಿಯೆ ಇಲ್ಲವೆಂದು ಈ ಉಪಾಧ್ಯಾಯರ ದೂರು. ತಮ್ಮ ರಿಪೋರ್ಟುಗಳಿಗೆ ಏನು ಹುಕುಂ ಬಂದಿದೆ ಎಂದು ನೋಡುವುದಕ್ಕಾಗಿ ಈ ಉಪಾಧ್ಯಾಯರು ಆಗಾಗ ತಾಲೂಕಿನ ಹೆಡ್‌ಕ್ವಾರ್ಟರುಗಳಿಗೆ ಬರುತ್ತಾರೆ. ಹೀಗಾಗಿ ಶನಿವಾರ ಅರ್ಧ ಹೊತ್ತು ಕೆಲಸ ಹೆಚ್ಚಿಸಿದ್ದಕ್ಕಾಗಿ ಅವರು 'ಫ್ರೆಂಚ್ ಲೀವ್' ತೆಗೆದು ಕೊಳ್ಳುವುದಕ್ಕೂ ಮಿತಿ ಇಲ್ಲ. ಇರಲಿ.

ಇಷ್ಟರಲ್ಲಿ ಹೊಸ ಸ್ಕೇಲು ಜಾರಿಗೆ ಬಂತು. ಸಂಬಳದ ದರಗಳು ಹೆಚ್ಚಿದವೆಂದು ಉಪಾಧ್ಯಾಯರು ನಂಬಿದರು. ಆಪ್ಪರಲ್ಲಿಯೇ ಸಂಬಳದ ದರಗಳಲ್ಲಿ ಕಡಿತ ರೂಪಾಯಿಗೆ ಒಂದಾಣೆಯಂತೆ. ಇದು ಕಳೆದ ಸಲ ಬಜೇಟು ತಯಾರಿಸುವ ಕಾಲದಲ್ಲಿಯೇ ಹೊರ ಬಿತ್ತು. ಆಗ ಒಂದು ಬಜೇಟು ಕಮ್ಮಿಟಿ ಏರ್ಪಟ್ಟಿತ್ತು. ಈ ಕಮ್ಮಿಟಿಯು ಹಲವು ಸಲ ಸಭೆ ಸೇರಿತು. ಒಬ್ಬೊಬ್ಬರು ಆರ್ಧದಲ್ಲಿಯೇ 'ಬಂಡೂಕು ಲಾತಾವ್' ಎಂದು ಜಾರಿದರು. ಆವರಿಗೆ ಈ ಅಂಕೆಸಂಖ್ಯೆಗಳ ಗೊಂದಲದಿಂದ ತಲೆಸಿಡಿತ ಜೋರಾಯಿತು. ಎಷ್ಟು ಕೆಫಿಎಸ್ಪಿರಿನ್ ಗುಳಿಗೆಗಳನ್ನು ಸೇವಿಸಿದರೂ ಪುರುಷಾರ್ಥವಾಗಲಿಲ್ಲ. ಕಡೆಗೆ 'ಪಂಚ ಪಾಂಡವರೆಂದರೆ ಮಂಚದ ಕಾಲಿನ ಹಾಗೆ ... ...' ಎಂಬಂತೆ ಶ್ರೀ। ಶಿವರಾಯರು ಆಧ್ಯಕ್ಷರು, ಮತ್ತು ಪೂಂಜರು ಮಾತ್ರ ಉಳಿದರು. 'ಕೆಪಿಟಲ್ ಫಕ್ಸ್' ವಿಶೇಷ ಹಣ ಒಮ್ಮೆಲೆ ವೆಚ್ಚಮಾಡುವ ಕಾಮುಗಾರಿಗಳಿಗೆ ಹಣವಿಲ್ಲವಲ್ಲ ಎಂದರು ಶ್ರೀ। ಶಿವರಾಯರು. ಶ್ರೀ। ಪೂಂಜರಿಗೆ ಸಿಟ್ಟೆದ್ದಿತು. ಆ ಸಿಟ್ಟು ಇನ್ನೂ ಆಣಗದ್ದರಿಂದಲೇ ಅವರು ಈ ಸಲ ಬೋರ್ಡ್ ಮೆಂಬರಿಕೆಗೆ ಕೈಹಚ್ಚಲಿಲ್ಲವೆಂದು ಸುದ್ದಿ. ಹೇಗೂ ಇರಲಿ. ಒಟ್ಟಾರೆ 'ಲೆಕ್ಕಮಾಡುವಾಗ ಜನರಲ್ ಫಂಡಿಗೆ ಕೂಡಾ ಸ್ವಲ್ಪ ಹಣ ಕಡಿಮೆ ಬೀಳುತ್ತಿತ್ತು. ಯಾಕಂದರೆ ಎಲ್ಲರ ಶರಾವುಗಳಿಗೆ ಸ್ಥಾನ ಕೊಡುವಾಗ ಖರ್ಚಿನ ಮಿತಿಯೇರಿತು. ಆದಾಯದ ಮಿತಿ ತಗ್ಗಿತು. ಆಪ್ಪರಲ್ಲಿ ೧೯೩೮—೩೫ನೇ ಖರ್ಚಿನ ಬಿಲ್ಲುಗಳು ಕೈಸೇರದೆ ಇದ್ದುದರಿಂದ ಪ್ರಾಥಮಿಕ ಶಿಕ್ಷಣ ಖಾತೆಯಲ್ಲಿ ಉಳಿದ ಹಣ—ಇದಕ್ಕೆ ಬೀಲು ಗಳೂ ಈಗಲೂ ಬರುತ್ತಿವೆ—ಜನರಲ್ ಫಂಡಿಗೆ ಜಮೆಯಾದ ನಿಮಿತ್ತ ಇತರ ಸಿಬಂದಿಗೆ ಕಡಿತ ಬೀಳಲಿಲ್ಲ. ಪ್ರಾಥಮಿಕ ಉಪಾಧ್ಯಾಯರೂ ತಮ್ಮ ಶಾಲೆಗಳ ಖರ್ಚನ್ನು ಹೇಗೆ ತಗ್ಗಿಸಬಹುದೆಂದು ಸೂಚನೆ ಕೊಡಲಿಕ್ಕೆ ತಮ್ಮದೊಂದು ಸಬ್ ಕಮ್ಮಿಟಿಯನ್ನು ಏರ್ಪಡಿಸಿ ಬಜೆಟ್ ಸಬ್ ಕಮ್ಮಿಟಿಯ ಮುಂದೆ ಹಾಜರಾಗಲು ಅಪ್ಪಣೆ ಬೇಡಿದರು. 'ನಮ್ಮ ಕೆಲಸ ನಾವು ಮಾಡಲಿಕ್ಕೆ ಈ ಚಿಲ್ಲರೆ ಉಪಾಧ್ಯಾಯರಿಂದ ಕಲಿಯಬೇಕೆ? ಆವರಿಗೆ ನಮ್ಮ ಸಬ್ ಕಮ್ಮಿಟಿಯ ಮುಂದೆ ಬರಲು ಬಿಡಬಾರದು,' ಎಂದು ಒಬ್ಬರ ಭಯಂಕರ ಆರ್ಭಟೆ. ಆಂತೂ ಹೊರಗೆ ಕಾಯುತ್ತಿದ್ದ ಉಪಾಧ್ಯಾಯರ ಪ್ರತಿನಿಧಿಗಳು ಆ ದಿನದ ಸಂಬಳ ತಮಗೆ ತೆಗೆಯದಿದ್ದದ್ದೆ ಉಪಕಾರವೆಂದು ಕಂಬಿಕಿತ್ತರು. ಹೀಗಾಗಿ ಸಬ್ ಕಮ್ಮಿಟಿಯು ನಿರ್ಧಾರವೊಂದೂ ಆಗಲಿಲ್ಲ. ೬ ಫೀಟು ಉದ್ದದ ಮನುಷ್ಯನಿಗೆ ೪॥ ಫೀಟಿನ ಕಂಬಳಿಯನ್ನು ಹೊದಿಸುವುದು ಹೇಗೆ? ಕಂಬಳಿಯನ್ನು ಮೇಲೆ ಎಳೆದರೆ ಕೆಳಗೆ ಕಾಲುಗಳ ಮೇಲೆ ಹೊದಿಕೆ ಇಲ್ಲ, ಕಾಲುಗಳನ್ನು ಹೊದಿಸಿದರೆ ತಲೆಗೆ ಕಂಬಳಿ ಎಟಕುವುದಿಲ್ಲ ಎಂಬುದಕ್ಕೆ ಒಂದು ಯುಕ್ತಿಯನ್ನು ಒಬ್ಬರು ಕಂಡರು. ಒಂದು ದಪ್ಪವಾದ ಕೋಲಿನಿಂದ ಮೊಣಕಾಲಿನ ಗಂಟಿಗೆ ಬಲವಾಗಿ ಕಾಯಿಸಿಬಿಟ್ಟರು. 'ಆಯ್ತಲ್ಲ' ಎಂದು ಮರುಗಿ, ಮಲಗಿದವನು ಕಾಲು ಮಡಚಿದನು. ಈಗ ಕಂಬಳಿಯನ್ನು ಸರಿಯಾಗಿ ಹೊದಿಸಲು ಬಂತೆಂದು ನೋಡಿದರೆ ಪಾದಗಳು ಹೊರ ಬೀಳುತ್ತವೆ. ಈಗ ಪಾದಗಳಿಗೆ ಚಳಿಯಾದರೆ ಕಾಲುಗಳನ್ನು ಇನ್ನಷ್ಟು ಮಡಚಬಹುದು, ಈಗ ಸುಮ್ಮನಿರಿ ಎಂದು ಅವರು ಹೇಳಿದರಂತೆ. ಹಾಗೆ ಕಡಿತವು ರೂಪಾಯಿಗೆ ೧ ಆಣೆಯಂತೆ ಮಾಡಿ ಇನ್ನೂ ಕಡಿಮೆ ಬಿದ್ದ ಮೊಬಲಗಿಗೆ ಸರಕಾರದವರು ಸಹಾಯ ಕೊಡಬೇಕೆಂದು ಬೇಡಿದರೂ ಹಣ ಸಾಕಾಗದಿದ್ದರೆ ತನ್ನಷ್ಟಕ್ಕೆ ಬೋರ್ಡಿನವರು ಇನ್ನೂ ಕಡಿತ ಮಾಡುತ್ತಾರೆ. ಆಥವಾ ಏನೊಂದು ಹಂಚಿಕೆ ಮಾಡುತ್ತಾರೆ ಆಪ್ಪರ ವರೆಗೆ ಸುಮ್ಮಗಿರೋಣ ಎಂದು ಸರಕಾರದವರು ತಟಸ್ಥರಾದರು. ಈಗ ಸಾಧಾರಣ ನಾಲ್ವತ್ತು ಸಾವಿರ ರೂಪಾಯಿ ನಷ್ಟ ಭರ್ತಿಗೆ ಸರಕಾರ ಹುದ್ದೆದಾರ ಪ್ಲೆಸಿಡೆಂಟರು ಸೂಚನೆ ಕೊಟ್ಟಿದ್ದಾರೆ. ಇದೇ ಸೂಚನೆ ಬಜೆಟು ವಿಂಟಿಂಗಿನಲ್ಲಿ ಡಿ. ಬ. ಮಹಾಬಲ ಹೆಗ್ಗಡೆಯರಿಂದ ಬಂದಾಗ ಜಾರಿಗೆ ತಂದರೆ ಈ ನಷ್ಟದಲ್ಲಿ ಸ್ವಲ್ಪ ಉಳಿಸಬಹುದಿತ್ತು. ಆದರೆ ಸಿಬಂದಿ ತಗ್ಗಿಸಿದರೆ ನಿರುದ್ಯೋಗಿಗಳ ಸಂಖ್ಯೆ ಹಳ್ಳಿಯಲ್ಲಿ ಹೆಚ್ಚುವುದೊಂದು, ಈ ಹಳ್ಳಿ ಸಾಲೆಗಳಲ್ಲಿ ಕೆಲಸ ಮಾಡುವ ಹಲವು ಉಪಾಧ್ಯಾಯರು ಸಂಬಳದಾರಿ ನಿರುದ್ಯೋಗಿಗಳಂತಿದ್ದಾರೆ, ಬೇಕು ಬೇಕಾದವರಿಗೆ ಕೆಲಸ ಮಾಡಿಸಿಕೊಡುವ ಸಂದರ್ಭ ತಪ್ಪುವುದೊಂದು, ಇವರು ಊರಲ್ಲೆಲ್ಲಾ ಗಲಭೆ ಹಚ್ಚಿ ಮುಂದಿನ ಚುನಾವಣೆಗೆ ಅಭ್ಯಂತರಗಳನ್ನು ಒಡ್ಡುವುದೊಂದು ಇಷ್ಟೆಲ್ಲ ಆಡಚಣೆಗಳ ನಿವೃತ್ತಿಯೇನು? ಒಂದೇ ದೃಷ್ಟಾಂತ ಇಲ್ಲಿ ಕೊಡಬೇಕಾಗಿದೆ. ಮೂಲ್ಕಿಯಲ್ಲಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೆಲಸ ಮಾಡುವವರೆಲ್ಲರು—ಆಧಿಕ ಮಂದಿ—ಅಲ್ಲಿಯವರೇ. ಇವರು ಹೈಸ್ಕೂಲಿಗೆ ಆಡ್ಡಿ ಬರುತ್ತಾರೆ, ಇವರನ್ನೆಲ್ಲ ದಿಗ್ದೇಶಗಳಿಗೆ ಓಡಿಸಬೇಕೆಂದು ಬಹಳ ಪ್ರಯತ್ನ ನಡೆಯುತ್ತಿತ್ತು. ಆ ಸೂಚನೆ ಆಗ ಮಾನ್ಯ ಮಾಡಿದ್ದರೆ ಶ್ರೀ। ಸೆಟ್ಟರಿಗೆ ಪ್ರತಿಸ್ಪರ್ಧಿಗಳಿಲ್ಲದೆ ಮೂಲ್ಕಿಯಲ್ಲಿ ಮೆಂಬರರಾಗಲು ಸಾಧ್ಯವಿಲ್ಲವೆಂಬುದು ಆಲ್ಲಿಯ ಹಿಂದಿನ ತಾಲೂಕು ಬೋರ್ಡ್ ಚುನಾವಣೆಯಲ್ಲಿ ಅನುಭವಕ್ಕೆ ಬಂದಿದೆ. ಆದ್ದರಿಂದ ಈ ಭೂತೋಚ್ಚಾಟನೆ ಕಾರ್ಯಕ್ಕೆ ಯಾರೂ ಮುಂದುವರಿಯಲಿಲ್ಲ.

ಇರಲಿ. ಬೋರ್ಡಿನವರಿಗೆ ಈಗ ಇದ್ದ ರೂಪಾಯಿಗೆ ೬॥ ಪೈಯಿಂದ ೪॥ ಪೈ ವರೆಗೆ ಸರಕಾರದ ಅಪ್ಪಣೆ ಪಡೆದು ಎಡ್ಯುಕೇಶನ್ ಸೆಸ್ಸ್ ಏರಿಸಲು ಸಾಧ್ಯವಿದೆ. ಆದರೂ ಈ ವಿಚಾರಕ್ಕೆ ಒಪ್ಪಿಗೆ ಕೊಡುವ ಮೆಂಬರರು ಇನ್ನೊಂದು ಚುನಾವಣೆಯಲ್ಲಿ ತಮಗೆ ಸ್ಥಾನ ತಪ್ಪಿಹೋದೀತೆಂದೇ ಹೆದರುತ್ತಾರೆ. ಹೈಸ್ಕೂಲುಗಳ ಪರವಾಗಿ ಕಡಿತ ಹಾಕಬಾರದೆಂದು ಒಬ್ಬ ಮೆಂಬರರು; ತಮ್ಮ ಬತ್ತೆಯ ದರಗಳಲ್ಲಿ ಕಡಿತ ಹಾಕಿದ್ದುರಿಂದ ಅದು 'ನುಸಿಯ ಮೂಸಲ ತಿಂದಂತೆ' ಎಂದು ಕೆಲವರು ಜ್ಞಾನ ಹೇಳುತ್ತಾರೆ. ತಮ್ಮ ತಮ್ಮ ಸೂಚನೆಗಳಿಗೆ ಹಣ ವಿಟ್ಟಿದೊ ಇಲ್ಲವೊ ಎಂದು ಎಲ್ಲರ ಕುತೂಹಲ. ಎಲ್ಲಾದರೂ ಅದಕ್ಕೆ ಕಡಿತ ಬಿತ್ತೆಂದರೆ 'ಎಲ್ಲಾ ಶಿವರಾಯರು ಹೇಳಿದಂತಾಗಬೇಕೇ, ಶಿವರಾಯರೇ ಬೋರ್ಡ್, ಬೋರ್ಡೇ ಶಿವರಾಯರು ಎಂದು ನಾವು ಏಕೆ ನರ್ತಿಸಬೇಕು, ಶಿವರಾಯರು ತಮ್ಮ ಹಿರಿಯರ ಆಸ್ತಿಯಿಂದ ಕೊಡುವಂತೆ 'ಅದಕ್ಕೆ ಇಲ್ಲ, ಇದಕ್ಕೆ ಉಂಟು' ಎಂದು ಹೇಳಲು ಅವರಿಗೆ ಯಾವ ಅಧಿಕಾರ?' ಮುಂತಾದ ಉದ್ಗಾರಗಳು ಶ್ರೀ. ಕೆ. ಸರ್ವೋತ್ತಮ ಸೆಟ್ಟರ ಲೇಖನ ಪರಿಮುಖವಾಗಿ ಹೊರಡಲಿಕ್ಕೂ ಅವರಿಗೆ ವಿದೂಷಕ, ಕಪಟನಾಟಕಿ ಇತ್ಯಾದಿ ಬಿರುದುಗಳನ್ನು ಕೊಡಲಿಕ್ಕೂ ಕಾರಣವಾಯಿತು. ಶ್ರೀ। ಸರ್ವೋತ್ತಮ ಸೆಟ್ಟರು ಹುಟ್ಟುವ ಮುಂಚೆ, ಅವರು ಇನ್ನೂ ಅಂಬೆಗಾಲು ಇಡುತ್ತಿರುವಾಗಲೇ ಶ್ರೀ। ಶಿವರಾಯರಿಗೆ ಸರಕಾರದಿಂದ ಬರಲಿರುವ ಬಿರುದನ್ನು ಬೇಡವೆಂದು ಅವರು ತಿರಸ್ಕರಿಸಿದ್ದು ಗೊತ್ತಿದ್ದವರಿಗೆ ಗೊತ್ತುಂಟು. ವಿದೂಷಕ ಎನ್ನುವ ಬದಲಾಗಿ 'ಕೋಡಂಗಿ' ಎಂದು ಅವರಿಗೆ ಹೆಸರಿಡದಿದ್ದುದು ಒಂದು ದೊಡ್ಡ ಉಪಕಾರ. ಯಾಕಂದರೆ ಕೋಡಂಗಿಯವರಂತೆ ಅವರು ಪ್ರತಿಯೊಂದು ವಿಂಟಿಂಗಿನ ಆಟದ ಆರಂಭದಿಂದ ಹಾಜರಿದ್ದು ಕೊನೆಗೆ 'ಎಲ,ಲಾಲಿ' ಹಾಕುವ ವರೆಗೆ ಇರುತ್ತಿದ್ದರು. ಈ ಸಮಯದಲ್ಲಿ ಊಟ, ಸ್ನಾನ ಬಾಯಾರಿಕೆ ಪರಿಹಾರಗಳ ಪರಿವೆ ಅವರಿಗೆ ಇಲ್ಲದ್ದು ಗೊತ್ತಿದ್ದವರಿಗೆ ಗೊತ್ತುಂಟು. ಹೀಗಾಗಿ ಶ್ರೀ। ಸೆಟ್ಟರು ಸಹ ಶ್ರೀ। ಶಿವರಾಯರ ನಿಷ್ಕಲಂಕ ಕಾರ್ಯಾಸಕ್ತಿಗೆ ಮೆಚ್ಚಿ, ತಾನೇ ಅಧ್ಯಕ್ಷನಾಗಿದ್ದರೂ ಶ್ರೀ। ಶಿವರಾಯರನ್ನು ತನ್ನ ಬಲಭುಜವೆಂದು ಭಾವಿಸುತ್ತಿದ್ದರು. ಅಂಥವರಿಗೆ 'ಪ್ರೆಸಿಡೆಂಟ ಡೆರಿಗೇಟ್' ಮಾಡಿದ್ದಕ್ಕಾಗಿ ವಿಂಟಿಂಗಿನಲ್ಲಿ ಎದ್ದ ಪ್ರಶ್ನೆಗಳ ಪರಂಪರೆಯನ್ನು ಕಂಡರೆ ಎಷ್ಟರ ಮಟ್ಟಿಗೆ ನಮ್ಮ ಬುದ್ಧಿ ಸಂಕುಚಿತವಾಗಿದೆ ಎಂದು ತೋರುತ್ತದೆ. ಇದೇ ಮಹಾಶಯರು ಅಧ್ಯಕ್ಷರ ಅಧಿಕಾರಗಳಲ್ಲಿ ಕೆಲವನ್ನು ಸೆಕ್ರೆಟರಿ ಸಾಹೇಬರಿಗೆ ಒಪ್ಪಿಸಿದ್ದಕ್ಕೆ ನ್ಯಾಯವಾಗಿಯೂ ಈ ಅಧಿಕಾರಗಳು ವೈಸ್ ಪ್ರೆಸಿಡೆಂಟರಿಗೆ ಸಲ್ಲಬೇಕಿತ್ತು, ಈಗ ಅಂಥ ಅಡಚಣೆಗಳು, ಬಾರದಂತೆ ಯೋಗ್ಯ ಮತ್ತು ಮಂಗಳೂರಿನಲ್ಲಿ ಕಾಯಂ ವಾಸ್ತವ್ಯವಿರುವ ವೈಸ್‌ಪ್ರೆಸಿಡೆಂಟರು ಬರಬಹುದು. ಸೆಕ್ರೆಟರಿ ಸಾಹೇಬರಿಗೆ ಬಜೆಟಿನಲ್ಲಿ ಬತ್ತೆ ಕಲಂ ಇಟ್ಟದ್ದಕ್ಕೆ ಒಂದಿಷ್ಟು ಚರ್ಚೆ ಎತ್ತಲಿಲ್ಲ. ಸೆಕ್ರೆಟರಿಗಳು ಇಡೀ ಡಿ. ಬೋ. ಆಫೀಸಿನ ಗುಮಾಸ್ತರ ಮೇಲ್ವಿಚಾರಕರು, ಇವರಿಗೆ ಸರ್ಕಿಟಿನ ಗೊಡವೆ ಏಕೆ? ಎಡ್ಯುಕೇಶನಲ್ ಆಫೀಸರರು ಪ್ರತ್ಯೇಕ ಒಬ್ಬರು ಇದ್ದರೂ ಈ ಸೆಕ್ರೆಟರಿಗಳು ಶಾಲೆಗಳನ್ನು ಥಕ್ಕನೆ ಸಂದರ್ಶನೆ ಮಾಡುವ ಗುಪ್ತ ಪೋಲೀಸು ಆಗಬೇಕೆ? ಆಂದರೆ ಎಡ್ಯುಕೇಶನಲ್ ಆಫಿಸರರ ಮೇಲೆ ವಿಶ್ವಾಸವಿಲ್ಲವೆಂಬದಕ್ಕೆ ಬೇರೆ ನಿದರ್ಶನ ಬೇಕೆ?

(ಮುಂದರಿಸಲಾಗುವುದು.)

THE UDIPI BANK LIMITED.

ಕಾಲಿಕ ರೇವಣಾತಿ (ಟ್ಯಾವ್ ಡಿಪೊಸಿಟು.)

ವಕೀಲರಿಗೆ, ಡಾಕ್ಟರುಗಳಿಗೆ, ಸಾಹುಕಾರರಿಗೆ ಮತ್ತು ಮಧ್ಯಮ ತರಗತಿಯ ಮಹಾಜನರಿಗೆ—
ಎಲ್ಲರಿಗೂ ವಿಶೇಷವಾಗಿ ಉಪಯುಕ್ತವಾದುದೆನ್ನಿ.

ದಿನಾಂತದ ಶಿಲ್ಕಿನ ರೂ. 25ರ ಸಂಖ್ಯೆಯ ಮೊಬಲಗಿನ ಮತ್ತು ಅದರ ಗುಣಸಂಖ್ಯೆಗಳ ಮೊಬಲಗಿನ ಮೇಲೆ ರೂ. 10,000ದ ವರೆತ್ತದವರೆಗೆ ಸಾಲಿಯಾನ ಸೇಕಡ ರೂ. 3ರಂತೆ ವಿಶೇಷ ದರದ ಬಡ್ಡಿಯು ನಡೆದೇ ನಡೆಯುವುದು.

ವಾಪಾಸು ಪಡೆವುದು ಚೆಕ್ಕಿನ ಮೂಲಕವೇ; ಪಾಸು ಪುಸ್ತಕವನ್ನು ಹಾಜರು ಮಾಡಬೇಕೆಂಬುದಿಲ್ಲ.

ಆಯಾ ಲೆಕ್ಕದಲ್ಲಿ ಜಮೆಯಿರುವ ಮೊತ್ತದ ಕಾಲಾಂಶವನ್ನು ನೋಟೀಸು ಕೊಡದೆಯೇ ವಾಪಾಸು ಪಡೆಯಬರುವುದಲ್ಲದೆ, ಬರೀ 15 ದಿನಗಳ ನೋಟೀಸಿನಿಂದ ಎಷ್ಟನ್ನು ಬೇಕಾದರೂ ವಾಪಾಸು ಪಡೆಯಬರುತ್ತದೆ.

ನಿಯಮಗಳಿಗಾಗಿ ಬರೆದು ಕೇಳಿ—

ದಿ ಉಡುಪಿ ಬ್ಯಾಂಕ್ ಲಿಮಿಟೆಡ್,
(1925ರಲ್ಲಿ ಸ್ಥಾಪಿತವಾದುದು)
ಕಲ್ಸಂಕ ಉಡುಪಿ ದ. ಕನ್ನಡ.

The United India Life Assurance Co., Ltd.

Head Office: **MADRAS.** { ESTABLISHED: 1906. } Bran

ರಸಕರ್ಪೂರವಿಲ್ಲದೆ

ನಿಮ್ಮ ಯಕೃತ್ತಿನ ಪಿತ್ತರಸವನ್ನು ಎಚ್ಚರಗೊಳಿಸಿರಿ.

ಆಗ ನೀವು ಒಂದು ಬಸ್ಸನ್ನಾದರೂ ದೂಡಬಲ್ಲೆವೆಂಬ ಅನುಭವ ಪಡೆದು, ನಿಮ್ಮ ಹಾಸಿಗೆಯಿಂದ ಹಾರುವಂತಾಗುವುದು.

ನಿಮ್ಮಲ್ಲಿ ಸಿಡುಕತನವೂ, ಜಿಗುಪ್ಸೆಯೂ, ಕಂಡು ಬಂದರೆ, ಪ್ರಪಂಚವು ನಿಸ್ಸಾರವಾಗಿ ತೋರಿದರೆ, ಧಾರಾಳವಾಗಿ ಲವಣಗಳನ್ನೂ ಪ್ರವಸಾಧಕಗಳನ್ನೂ, ಅಸಾರ್ಥಕವಾದ ಹಾನೀಯಗಳನ್ನೂ ರುಚಿಕರವಾದ ಭೇದಿಯ ಔಷಧಗಳನ್ನೂ ಅಸಹ್ಯವಾದ ಜುಲಾಬಿನ ಮದ್ದುಗಳನ್ನೂ ಸೇವಿಸಿ, ಅವುಗಳು ನಿಮ್ಮನ್ನು ಸುಖಿಗಳನ್ನಾಗಿಯೂ ಉತ್ಸಾಹಿಗಳನ್ನಾಗಿಯೂ ಮಾಡುತ್ತವೆಂದೂ, ನವಶಕ್ತಿಯನ್ನು ತುಂಬುತ್ತಿವೆ ಎಂದೂ ತಿಳಿಯಬೇಡಿ.

ಏಕೆಂದರೆ ಅವು ನಿಮ್ಮನ್ನು ಹಾಗೆ ಮಾಡಲಾರವು. ಅವು ನಿಮ್ಮ ಕರುಳುಗಳನ್ನು ಮಾತ್ರ ಸಡಲಿಸಬಲ್ಲವು. ಆದರೆ ಆಸ್ಪು ಮಾತ್ರದಿಂದಲೇ ಇದರ ಮೂಲ ಮುರಿಯುವುದಿಲ್ಲ. ನಿಮ್ಮ ಜಿಗುಪ್ಸೆಗೆ ಮುಖ್ಯ ಕಾರಣವೆಂದರೆ ನಿಮ್ಮ ಯಕೃತ್ತ್ಕೆ. ಅದು ನಿತ್ಯವೂ ನಿಮ್ಮ ಕರುಳೊಳಗೆ ಎರಡು ಪೈಂಟ್ ಪಿತ್ತದ ದ್ರವವನ್ನು ಹೊರ ಸುರಿಯಬೇಕಾಗಿದೆ.

ಈ ಪಿತ್ತರಸವು ಸರಿಯಾಗಿ ಹೊರಸುರಿಯುವುದಿಲ್ಲವಾದರೆ, ನಿಮ್ಮ ಆಹಾರವು ಜೀರ್ಣವಾಗುವುದಿಲ್ಲ. ಅದು ಕರುಳಲ್ಲಿಯೇ ಹಾಳಾಗುತ್ತದೆ. ವಾಯುವು ನಿಮ್ಮ ಹೊಟ್ಟೆಯ ವರೆಗೆ ತುಂಬಿಕೊಳ್ಳುತ್ತದೆ. ನಿಮಗೆ ಸ್ಥೂಲವಾದ ಕೆಟ್ಟ ರುಚಿ ಇರುತ್ತದೆ. ನಿಮ್ಮ ಶ್ವಾಸೋಚ್ಛ್ವಾಸವು ಹೊಲಸಾಗಿರುತ್ತದೆ. ನಿಮ್ಮ ತಲೆ ನೋಯುತ್ತದೆ. ನಿಮಗೆ ಸ್ವಲ್ಪವೂ ದೇಹ ಶಾಂತಿ ಇಲ್ಲ. ನಿಮ್ಮ ಇಡೀ ಶರೀರವೇ ವಿಷಮಯವಾಗಿರುತ್ತದೆ.

ಸುಪ್ರಸಿದ್ಧವಾದ ಖಂಡಿತವಾಗಿಯೂ ಗುಣಕಾರಿಯಾದ ಕಾರ್ಟರರ ಚಿಕ್ಕ ಲಿವರ್ ಮಾತ್ರೆಗಳನ್ನು ಸೇವಿಸುವುದರಿಂದ, ಅವೆರಡು ಪೈಂಟ್ ಪಿತ್ತರಸವು ಸರಾಗವಾಗಿ ಹರಿಯುವಂತಾಗಿ, ನಿಮ್ಮ ಉತ್ಸಾಹವು ಹೆಚ್ಚುತ್ತದೆ. ಇದರಲ್ಲಿ ಆಶ್ಚರ್ಯಕರವಾದ, ಹಾನಿಕರವಲ್ಲದ, ಮೃದುವಾದ ಸಸ್ಯಾಹಾರವಿದೆ. ಸರಾಗವಾಗಿ ಪಿತ್ತರಸವನ್ನು ಹರಿಯುವಂತೆ ಇದು ಮಾಡುವಾಗ, ಆದ್ಭುತವೆನಿಸುತ್ತದೆ. ನಿಜವಾಗಿಯೂ ಆರೋಗ್ಯವನ್ನುಂಟು ಮಾಡುವ ಸುಪ್ರಸಿದ್ಧವಾದ ಈ ಕಾರ್ಟರರ ಗುಳಿಗೆಗಳನ್ನು ಉಪಯೋಗಿಸಿರಿ. ಪ್ಯಾಕೇಟಿನ ಮೇಲೆ 'ಕಾರ್ಟರ'ರ ಹೆಸರನ್ನು ಹುಡುಕಿರಿ.

For all kinds of
NEAT AND ACCURATE PRINTING,
please consult
The Saraswathi Printing Works, Ltd.,
MANGALORE, S. K.

ಸಿದ್ಧ ಮಂತ್ರ.

ಇದೇ ಸಿದ್ಧ ವಶೀಕರಣ ಮಂತ್ರವಾಗಿದೆ.

ಈ ಮಂತ್ರವನ್ನು ಉಚ್ಚರಿಸಿದ ಮಾತ್ರದಿಂದಲೇ ಅತ್ಯಂತ ಕಷ್ಟತರವಾದ ಉದ್ದೇಶವಾದರೂ ಸಫಲವಾಗುವುದು. ನಿಮಗೆ ಬೇಕಾದಾಕೆ ಬಹಳ ಕಠಿನ ಹೃದಯೆಯೂ, ಗರ್ವಿಷ್ಠೆಳೂ ಆಗಿದ್ದರೂ ಕೂಡ, ಆಕೆ ಈ ಮಂತ್ರದಿಂದ ನಿಮ್ಮ ಬಳಿಗೆ ಬರುವಳು. ಈ ಮಂತ್ರಬಲದಿಂದ ನಿಮಗೆ ಪರೀಕ್ಷೆಗಳಲ್ಲಿ ಜಯ, ವ್ಯಾಖಾರದಲ್ಲಿ ಲಾಭ, ವ್ಯಾಜ್ಯ ವ್ಯವಹಾರಗಳಲ್ಲಿ ಯಶಸ್ಸು ಉಂಟಾಗುವುದು ಮಾತ್ರವಲ್ಲದೆ, ನಿಮಗೆ ಅದರಿಂದ ಅಭಿವೃದ್ಧಿಯೂ, ಪುತ್ರ ಐಶ್ವರ್ಯಾದಿಗಳ ಪ್ರಾಪ್ತಿಯೂ ಲಭಿಸುತ್ತವೆ. ಅದು ನಿಮ್ಮನ್ನು ಅದೃಷ್ಟಶಾಲಿಯನ್ನಾಗಿ ಮಾಡುತ್ತದೆ. ನೀವು ಒಂದು ರೂಪಾಯಿಯನ್ನು ವೆಚ್ಚಮಾಡಿ, ವಿಜಯವನ್ನು ಪಡೆಯಿರಿ; ಅಥವಾ ಇದು ಸುಳ್ಳೆಂದು ರುಜುಪಡಿಸಿ 50 ರೂಪಾಯಿಗಳ ಬಹುಮಾನಕ್ಕೆ ಪಾತ್ರರಾಗಿರಿ.

Gupta Mantra Bhandar,
No. 43, P. O. Katri Sarai (Gaya.)

ಎಚ್ಚರಿಕೆ! ಮೋಸಗಾರರ ವಿಷಯದಲ್ಲಿ ಎಚ್ಚರದಿಂದಿರಿ!!
(100 ರೂಪಾಯಿಗಳ ಬಹುಮಾನ.)

ಗುಪ್ತ ವಶೀಕರಣ ಯಂತ್ರ

ಈ 'ಯಂತ್ರ'ವನ್ನು ಒಬ್ಬನು ತನ್ನ ಸ್ವಾಧೀನವಿರಿಸಿಕೊಂಡ ಮಾತ್ರದಿಂದಲೇ, ಅತ್ಯಂತ ಕಷ್ಟತರವಾದ ಉದ್ದೇಶವಾದರೂ ನೆರವೇರುವುದು. ಇದರಿಂದ ಕೆಟ್ಟ ಗ್ರಹಗಳ ಬಾಧೆ ತೊಲಗುವುದು; ಶತ್ರುಗಳ ಮೇಲೆ ಜಯಲಾಭ ದೊರಕುವುದು; ನಿಮಗೆ ಬೇಕಾದಾಕೆ ನಿಮ್ಮ ಹಿಡಿತದೊಳಗೆ ಬರುವಂತಾಗುವುದು. ಪರೀಕ್ಷೆ, ವ್ಯಾಪಾರ, ವ್ಯಾಜ್ಯ ಮೊಕದ್ದಮೆಗಳಲ್ಲಿಯೂ ಕುದುರೆಗಳ ಜೂಜು, ಸೋಡ್ತಿ, ನೌಕರಿಗಳಲ್ಲಿಯೂ, ಪುತ್ರ ಮತ್ತೂ ಅತುಳ ಸಂಪತ್ತಿನ ಪ್ರಾಪ್ತಿಯಲ್ಲಿಯೂ, ಋಣ ಪರಿಹಾರ, ಅಪಾಯಕಾರಕ ರೋಗನಿವಾರಣೆಯಲ್ಲಿಯೂ ನಿಮಗೆ ಜಯಲಾಭವು ಸಿಕ್ಕುವುದು. ಇದು ನಿಮ್ಮನ್ನು ಅದೃಷ್ಟಶಾಲಿಯಾಗಿ ಮಾಡುವುದು. ಯಾರು ಇದನ್ನು ಸುಳ್ಳೆಂದು ರುಜುವಾತು ಮಾಡಿಕೊಡುವರೋ ಅವರಿಗೆ ಬಹುಮಾನ ರೂ. 100. ಬೆಲೆ ರೂ. 2. ಬೆಳ್ಳಿಯ ಮುಚ್ಚಳದಕ್ಕೆ ರೂ. 8—4; ಚಿನ್ನದ ಮುಚ್ಚಳದಕ್ಕೆ ರೂ. 12.

Mahashakti Mantra Ashram.
No. 10, P. O. Parabalpore, Patna.



ಕೇರಳ ಗಂಧದ ಸಾಬೂನು

ಉತ್ಕೃಷ್ಟವಾದ ಸಾಧನಗಳಿಂದ ಯೋಗ್ಯರಾದ ಹಿಂದೀ ರಸಾಯನ ಶಾಸ್ತ್ರ ಪಂಡಿತರಿಂದ ಸಿದ್ಧವಾಗುತ್ತವೆ.

ಚೀಫ್ ರೆಪ್ರೆಸೆಂಟೇಟಿವ್:— ಆರ್. ಸಿ. ದಲಾಲ್, ಕಲ್ಲಿಕೋಟೆ.

THE TRAVANCORE
NATIONAL BANK, LIMITED.

INCORPORATED IN TRAVANCORE 1912.
Head Office: **ALLEPPEY.**
London Agents: **MIDLAND BANK LTD.**

MANGALORE BRANCH.

Chit Fund No. 2 announced to be started at the Mangalore Office from 11th January 1936 has been postponed to 8th February 1936 at the request of several of our subscribers. There are a few vacancies for which applications are being received. Please apply sharp.

Mangalore,
11—1—1936.

M. R. BANGARA,
AGENT.

THE GENERAL INSURANCE BANK OF INDIA LIMITED.,

OPPOSITE TALUK POLICE STATION,
MANGALORE.
ESTD. 1933.

AS ON 31ST OCTOBER 1935.

BENEFIT AMOUNT PAID EXCEEDS RS. 13,250/—
RESERVE FUND EXCEEDS RS. 4,300/—

WE HAVE THREE SCHEMES FOR YOU.

LIFE **MARRIAGE** **BIRTH**

ADMISSION FEE RS. 5—8—0 ONLY. (By Instalments if required)
MONTHLY PREMIUM RUPEE ONE ONLY.
WANTED Special Agents & Representatives on Liberal Terms.
For Full Prospectus & Agency Terms please call at or write to:—
THE GENERAL INSURANCE BANK OF INDIA LIMITED., MANGALORE.

Mangalore.
Dated 5th November '35.

P. K. MENON,
Secretary.

MODERN PRINTING! AT MODERATE RATES!
CONSULT
The Saraswathi Printing Works, Limited,
CANTONMENT, MANGALORE.

ಕಳೆದ ವಾರ

ಜಗತ್ತಿನಲ್ಲೆಲ್ಲ ಅತ್ಯಂತ ದೊಡ್ಡ ಶ್ರೀಮಂತರು

ಎಸಿಸಿರುವ ನಮ್ಮ ನೈಜಾಮರ ಕುರಿತೂ, ಅವರ ಸಂಪತ್ತಿನ ಕುರಿತೂ ಇಂಗ್ಲೆಂಡಿನ ಕೆಲವು ಪತ್ರಿಕೆಗಳು, ಅರೇಬಿಯನ್ ಕಥೆಗಳಂತೆ, ಅತ್ಯಂತ ವಿಸ್ಮಯಕರವಾದ ವಾರ್ತೆಗಳನ್ನು ಈಚಿಗೆ ಪ್ರಕಟಿಸತೊಡಗಿವೆ. ಇಂತಹ ಒಂದು ವಾರ್ತೆಯಲ್ಲಿ, 'ನೈಜಾಮರ ಸದ್ಯದ ಜುಬಿಲಿ ಸಮಾರಂಭದ ಕಾಲದಲ್ಲಿ, ಬರೇ ಬಾಣ ಬಿರುಸುಗಳಿಗಾಗಿ ೫೦ ಸಾವಿರ ಪೌಂಡುಗಳು ವಿನಿಯೋಗವಾಗಲಿದೆ' ಎಂದು ಪ್ರಕಟವಾಗಿದೆ. ಅಲ್ಲದೆ ನೈಜಾಂರವರು ಆಗ ಒಂದು ವಾರದ ತನಕ ಬೆಳ್ಳಿಯಿಂದ ಮಾಡಿದ ಒಂದು ದಿವ್ಯ ವಾಹನದಲ್ಲಿ ಕುಳಿತು ಸವಾರಿ ಮಾಡುವರೆಂದೂ, ಈ ಸಮಾರಂಭ ಕಾಲದಲ್ಲಿ ಒಂದು ಸಾವಿರ ಎತ್ತನ್ನೂ, ೧೦ ಸಾವಿರ ಕುರಿಗಳನ್ನೂ ಕೊಲ್ಲಲಿರುವರೆಂದೂ, ನೈಜಾಂರು ಬೀದಿಬೀದಿಗಳಲ್ಲಿ ಬಿಜಯ ಮಾಡುತ್ತ ಒಡಬಗ್ಗರಿಗೆ ಹೊಸ ಬೆಳ್ಳಿಯ ನಾಣ್ಯಗಳನ್ನು ಚೆಲ್ಲುವರೆಂದೂ ಪ್ರಕಾಶಗೊಂಡಿದೆ. ಆದರೆ ನೈಜಾಂರನ್ನು ಬಲ್ಲ ಯಾವನೊಬ್ಬನಾದರೂ ಇಂತಹ ಅತ್ಯುಕ್ತಿಯ ಮಾತುಗಳನ್ನು ನಂಬಲಾರನು. ಬರೇ ಹೊಗೆಯ ರೂಪದಲ್ಲಿ ಕರಗಲಿರುವ ಆ ಬಾಣ ಬಿರುಸುಗಳಿಗಾಗಿ ಅರ್ಧ ಲಕ್ಷ ಪವನುಗಳನ್ನು ವೆಚ್ಚ ಮಾಡುವುದೆಂದರೇನು? ಇತರ ಆಡಂಬರವೈಭಗಳಾದರೂ ಅಷ್ಟು ಅನಾವ್ರಯದೊಡನೆ ನಡೆದೀತೇ? ಊಹನೆಗೆ ಮೀರಿದುದಿದು! ಇಂಗ್ಲಿಷ್ ಪತ್ರಿಕೆಗಳ 'ಲಂಡನ್ ಜಟ್ಕಿ' ಇದು.

* * * * *

ನೈಜಾಂ ಪ್ರಭುಗಳವರು ಜಗತ್ತಿನಲ್ಲೇ

ಬಹು ದೊಡ್ಡ ಶ್ರೀಮಂತರೆಂಬುದು ನಿಜ. ಆದರೆ ಅವರ ಐಶ್ವರ್ಯದ ಮಿತಿಯನ್ನು ತಿಳಿದವರಿಲ್ಲ. ಪ್ರಾಯಶಃ ನೈಜಾಂರವರಿಗೇ ಸ್ವತಹ ಗೊತ್ತಿದೆಯೋ—ಇಲ್ಲವೋ! ಸಾಮಾನ್ಯವಾಗಿ ಅವರ ಸ್ವಾಧೀನವಿರುವ ಬಂಗಾರದ ಜೆಲೆ ೫೦,೦೦೦,೦೦೦ (೫೦ ಕೋಟಿ) ಪೌಂಡುಗಳೆಂದು ನಂಬಲಾಗಿದೆ. ಅಲ್ಲದೆ ಪ್ರಪಂಚದಲ್ಲೇ ಅಪೂರ್ವವಾದ ಹೇರಳ ವಜ್ರ, ಮುತ್ತು, ಕೆಂಪು ಮೊದಲಾದ ನವರತ್ನಗಳ ರಾಶಿಯೂ ಅವರಲ್ಲಿದೆ. ಇಷ್ಟೇ ಅಲ್ಲ; ಈ ಬಂಗಾರ ಮತ್ತೂ ನವರತ್ನ ರಾಶಿಗಳಲ್ಲದೆ, ನೈಜಾಂರವರಿಗೆ ವರ್ಷ ಒಂದಕ್ಕೆ ಅವರ ಸ್ವಂತ ಆಸ್ತಿಯಿಂದ ಬರತಕ್ಕ ಉತ್ಪನ್ನ ಸುಮಾರು ೧,೮೦,೦೦೦ ಪೌಂಡು; (೧೮ ಲಕ್ಷ) ಅವರಿಗೆ ಸಂಸ್ಥಾನದ ಭಂಡಾರದಿಂದ ದೊರಕತಕ್ಕುದು ವರ್ಷಕ್ಕೆ ೫ ಲಕ್ಷ ಪೌಂಡು. ಹೀಗಿರುವಲ್ಲಿ ಇಂತಹ ಲಕ್ಷ್ಮೀ ಪುತ್ರರು ಬಹು ಸುಖವಾಗಿ, ಬಹು ಆಡಂಬರಯುಕ್ತವಾದ ಜೀವನವನ್ನು ನಡೆಸುವುದೇ ಸಹಜವಾದರೂ, ನೈಜಾಂರವರ ಜೀವನದ ರೀತಿ ಮಾತ್ರ ಹೀಗಿಲ್ಲ. ಅವರು ಸರಳ ಜೀವನದ ರೀತಿನೀತಿಗಳನ್ನೇ ಅನುಸರಿಸುತ್ತ ಬರುವವರು. ಅವರ ಸಂಸ್ಥಾನದಲ್ಲಿ ಅವರಷ್ಟು ಕಷ್ಟ ಪಟ್ಟು ಕೆಲಸ ಮಾಡುವವರು ಇನ್ನೊಬ್ಬರಿಲ್ಲವೆಂಬ ಕೀರ್ತಿಯೂ ಅವರಿಗಿದೆ.

* * * * *

ಶಾಸ್ತ್ರೀಯ ಸಂಗೀತ ಪದ್ಧತಿಯನ್ನು

ಜನಪ್ರಿಯವನ್ನಾಗಿ ಮಾಡುವ ಪ್ರಯತ್ನಗಳೊಂದಿಗೆ, ಹಿಂದುಸ್ಥಾನೀ ಸಂಗೀತದ ಅಭಿರುಚಿಯೂ ಎಲ್ಲೆಲ್ಲಿಯೂ ಹಬ್ಬಿ ಹರಡುವಂತಾಗಬೇಕೆಂಬ ಪ್ರಚಾರಕಾರ್ಯವು ನಡೆಯುತ್ತಿರುವುದೂ ಸಂತೋಷಪ್ರದವಾಗಿದೆ. ಈಚಿಗೆ ಶ್ರೀ. ಗುಜರಾಥ ಸಂಗೀತ ಮಂಡಲದ ಒಂದು ಸಭೆ ಸೇರಿದ್ದಿತು. ಆಗ ಹಿಂದೀ ರಾಜಕುಮಾರರಲ್ಲಿ ಒಬ್ಬರಾದ ಧರ್ಮಾಪುರದ ಮಹಾರಾಣಾ ಸಾಹೇಬ್ರರವರು,—ಅನೇಕ ವರ್ಷಗಳಿಂದಲೂ ಹಿಂದುಸ್ಥಾನೀ ಸಂಗೀತವು ಹೆಚ್ಚಿನ ಜನಾದರಕ್ಕೆ ಪಾತ್ರವಾಗುವಂತೆ ಪ್ರಯತ್ನಿಸುತ್ತಿರುವವರು,—ಒಂದು ಎಡ್ರೆಸ್ ಕೊಟ್ಟರು. 'ಇಂತಹ ಸಂಸ್ಥೆಗಳನ್ನೆಲ್ಲವನ್ನೂ ಒಂದುಗೂಡಿಸಿ; ವಿಶ್ವವಿದ್ಯಾಲಯಗಳಲ್ಲಿ ಇದಕ್ಕೆ ಸ್ಥಾನಮಾನಗಳು ದೊರಕುವಂತೆ ಏರ್ಪಡಿಸಿ' ಎಂದರು. ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಸಂಗೀತ ಶಿಕ್ಷಣಕ್ಕೆ ಅವಕಾಶವುಂಟು; ಅನ್ನಾಮಲೆ ವಿಶ್ವವಿದ್ಯಾಲಯದಲ್ಲಿಯೂ ಸಂಗೀತ ಉಪಾಧ್ಯಾಯರಿಗೆ ಆ ಶಿಕ್ಷಣಕ್ಕಾಗಿ 'ಬೇಸಿಗೆ ಶಾಲೆ'ಗಳು ತೆರೆಯುವ ಏರ್ಪಾಡಾಗುತ್ತಿದೆ. ಅನ್ನುವಾಗ ಸಂಗೀತ ಕಲಾ ಅಭಿವೃದ್ಧಿಯ ದೃಷ್ಟಿಯಿಂದ ಮಹಾರಾಣಾರವರ ಈ ಸೂಚನೆಯೂ ಮಾನ್ಯವಾದುದೇ.

* * * * *

ಮೂರು ತಿಂಗಳ ಮೇಲಾಯಿತು!

ಅಬಿಸೀನಿಯದ ದಿಗ್ವಿಜಯವಾಗಲಿಲ್ಲ; ಅಷ್ಟೇ ಅಲ್ಲ; ಇಟೆಲಿಯವರು ಆಕ್ರಮಿಸಿರುವ ಅಬಿಸೀನಿಯದ ಭಾಗಗಳನ್ನೂ ಈಗ ಸ್ವಾಧೀನದಲ್ಲಿ ಇರಿಸಿಕೊಳ್ಳುವುದೂ ಅಸಾಧ್ಯವೆಂದೇ ಮುಸಲೋನಿಯವರಿಗೆ ಈಚೀಚಿಗೆ ಗೋಚರಕ್ಕೆ ಬರುತ್ತಿದೆ. ಇಪ್ಪರಲ್ಲಿ ಅಲ್ಲಿ ಮಳೆಯ ಆರಂಭ; ತೊಂದರೆ. ಪ್ರಾಯಶಃ ಪ್ರಕೃತಿದೇವಿಯೂ, ನೆಪೋಲಿಯನನು ರಷ್ಯಾ ದೇಶಕ್ಕೆ ದಾಳಿ ಇಟ್ಟಾಗ ಅಲ್ಲಿನ ನಿವಾಸಿಗಳಿಗೆ ಸಹಾಯ ಮಾಡಿದಂತೆ, ಇಲ್ಲಿಯೂ ಸಹಾಯ ಮಾಡುವಳೇನೋ—ಯಾರು ಬಲ್ಲ? ನೆಲದಲ್ಲಿ ಮುಂಬರಿಯಲಾರದೆ ಇಟೆಲಿ ಸೇನಾಪತಿಗಳು ವಿಮಾನ ಬಲದಿಂದ ಅಬಿಸೀನಿಯವನ್ನು ಧ್ವಂಸಮಾಡಲು ಯತ್ನಿಸುತ್ತಿದ್ದಾರೆ. ಅಬಿಸೀನಿಯವನ್ನು ಗೆಲ್ಲಲಾರೆವಾದರೆ, ಬೋಂಬ್ ಹಾಕಿಯಾದರೂ, ನಿರ್ದಯದಿಂದ ಅಲ್ಲಿನ ನಿವಾಸಿಗಳ ಯಜ್ಞ ಮಾಡೋಣ ಎಂಬುದೇ ಈಗಿನ ಇಟೆಲಿಯ ಯೋಜನೆಯಾಗಿ ತೋರುತ್ತಿದೆ. ಯೋಜನೆ ಏನೋ ಒಳ್ಳಿದೇ; ಆದರೆ, ಅಬಿಸೀನಿಯದವರು, ಲೀಗಿನವರ ಸಹಾಯವನ್ನೂ ಪರಿಗಣಿಸದೆ, ತಾವೇ ತಮ್ಮ ಸಹಾಯವನ್ನೇ ನಂಬಿಕೊಂಡು ಯುದ್ಧ ಮಾಡುತ್ತಿರುವರೆಂಬುದಿದು ಮಾತ್ರ ಗಂಡಾಂತರದ ಕೆಲಸ. ಮುಖ್ಯ ಸ್ವಸಹಾಯವನ್ನು ನಂಬಿದವರಿಗೆ ದೇವರೂ ಸಹಾಯ ಮಾಡುವನೆಂಬುದು ಅಬಿಸೀನಿಯದವರಿಗೆ ಗುಣ; ಇಟೆಲಿಯವರಿಗೆ ಅವಗುಣ!

* * * * *

ಡಾ॥ ಅಂಬೇಡ್ಕರರವರ ಸ್ವಂತ ಜನಗಳೇ

'ಇವರು ನಮ್ಮವರಲ್ಲ'ವೆಂದು ಬಹಿರಂಗವಾಗಿ ಪ್ರಕಟಪಡಿಸಿದರು. ಹಿಂದೂ ಮತವನ್ನು ಪರಿತ್ಯಜಿಸಬೇಕೆಂಬ ಅವರ ಸೂಚನೆಯನ್ನು 'ಆಗುವುದಿಲ್ಲ'ವೆಂದು ಅಂದುಬಿಟ್ಟರು. ಇದರಿಂದಲಾದರೂ ಡಾಕ್ಟರರಿಗೆ ಬುದ್ಧಿ ಬರಬೇಕಿದ್ದಿತು. ಬರಲಿಲ್ಲ! ಅವರು ತಮ್ಮ ಕೊಂಚ ಕಾಲದ ಬಾಯಿ ಬೀಗವನ್ನೊಡೆದು ಸಮಗ್ರ ಕೇರಳದ ತೀಯಾ ಯುವಕರ ಸಂಘಕ್ಕೆ ಒಂದು ಶುಭ ಸಂದೇಶ ಕಳುಹಿಸಿದರೇನು? 'ಹಿಂದೂ ಸಮಾಜವನ್ನು ಬಿಡಿ!' ಎಂದು. ಇದರಲ್ಲಿ ಹೊಸದೇನೂ ಇಲ್ಲವಾದರೂ, 'ನೀವು ಹೊಸ ಮತವನ್ನು ಸೇರುವಾಗ ಒಟ್ಟಾಗಿಯೇ ಎಲ್ಲರೂ ಸೇರಿ; ಬೇರೆ ಬೇರೆಯಾಗಿ ಸೇರಬೇಡಿ' ಎಂದುದರಲ್ಲಿ ಕೊಂಚ ಹೊಸದೇ ಇದೆಯಯ್ಯ. ಡಾಕ್ಟರರಿಗೆ ಬೇರೆ ಬೇರೆಯಾಗಿ ಸೇರುವುದರಿಂದ, ಅಥವಾ ಕೆಲವರು ಮಾತ್ರ ಅನ್ಯಮತಾವಲಂಬಿಗಳಾಗುವುದರಿಂದ ಉಂಟಾಗುವ ಸಾಧಕಬಾಧಕಗಳು ಯಾವುದೆಂದು ಚೆನ್ನಾಗಿ ಗೊತ್ತಾದ ಹಾಗಿದೆ. ಇದು ಒಳ್ಳಿದು. ಇದರಿಂದ, ಡಾಕ್ಟರರ ಅನ್ಯಮತದ ಅವಲಂಬನದ ಹುಚ್ಚು ಕೆಲಸವು ಎಂದೂ ಸಾಧ್ಯವಲ್ಲವೆಂಬುದು ಸ್ವತಃ ಸಿದ್ಧವಾದಂತಾಯಿತು!

* * * * *

ಕಾಂಗ್ರೆಸ್ ಜುಬಿಲಿ ಎಲ್ಲ ಕಡೆಗಳಲ್ಲಿಯೂ ಮುಗಿಯಿತು.

ಎಲ್ಲಿಯೂ ಗಲಭೆ ಇಲ್ಲ. ಆದರೆ ಶೇಕುಪುರ ಮುನಿಸಿಪಾಲಿಟಿಯ ೮ ಮಂದಿ ಕೌನ್ಸಿಲರರಿಗೇನೋ ಸ್ವಲ್ಪ ಗ್ರಹಗತಿಯೊದಗಿದೆ. ಜುಬಿಲಿ ಮಹೋತ್ಸವ ಕಾಲದಲ್ಲಿ, ಮುನಿಸಿಪಾಲಿಟಿ ಭಾಗನಹಿಸಬಹುದೆಂಬ ಠರಾವಿನ ಪರವಾಗಿ ಓಟು ಕೊಟ್ಟವರಿವರು. ಅದರಂತೆ ಅಂದು ಮುನಿಸಿಪಲ್ ಕಟ್ಟಡದಲ್ಲಿ ದೀಪೋತ್ಸವ ನಡೆಯಿತು; ರಾಷ್ಟ್ರೀಯ ಧ್ವಜ ಹಾರಾಡಿತು. ಇದೇ ತಪ್ಪು. ಡೆಪ್ಟಿ ಕಮಿಶನರರವರು, ಇವರ ಈ ತಪ್ಪು ಅಕ್ಷಮ್ಯವೆಂದೂ, ಅವರ ಸ್ಥಾನದ ದುರುಪಯೋಗದ ಕುರುಹು ಎಂದೂ, ಇದು ಪ್ರತಿಜ್ಞಾವಚನದ ರಾಜಪ್ರಮಾಣದ ವಿರುದ್ಧ ಕಾರ್ಯವೆಂದೂ ಬಗೆದು, ಈ ೮ ಮಂದಿಯ ಮೆಂಬರಿಕೆಯನ್ನೂ ಏಕೆ ರದ್ದುಮಾಡಬಾರದೆಂಬುದಕ್ಕೆ ಕಾರಣವನ್ನು ಕೇಳಿದ್ದಾರೆ. ಗವರ್ನ್‌ಮೆಂಟಿನ ಗ್ರಾಂಟನ್ನು ಪಡೆದು, 'ಸೆಮಿ ಗವರ್ನ್‌ಮೆಂಟ್' ಎಂದೆನಿಸಿರುವ ನಮ್ಮ ಸ್ಥಳೀಯ ಸಂಸ್ಥೆಗಳ ಮೆಂಬರರು, ತಮ್ಮ ಕರ್ತವ್ಯಪಾಲನೆಯಲ್ಲಿ ಎಷ್ಟು ಜಾಗರೂಕರಾಗಿರಬೇಕೆಂಬುದಕ್ಕೆ ಇದೊಂದು ನಿದರ್ಶನ. ಅತ್ತ ರಾಜಭಕ್ತಿಯ ಪ್ರಮಾಣವನ್ನೂ ಮಾಡಿ, ಇತ್ತ ರಾಷ್ಟ್ರಸೇವೆಯನ್ನೂ ಮಾಡಲೆಳಸುವ ಕಾಂಗ್ರೆಸ್ವಾಲನಾಗಬೇಕೆಂದರೆ ಬಹು ಕಷ್ಟ. ಎರಡೂ ಒಬ್ಬನಿಂದಾಗುವ ಕೆಲಸವಲ್ಲ. ಕೊನೆಗಿದು ದೇಶದ ಮತ್ತೂ ರಾಜನ ಆಗ್ರಹವನ್ನೋ, ಅಸಂತೋಷವನ್ನೋ ಸಂಪಾದಿಸುವ ಸುಲಭ ಮಾರ್ಗ!

* * * * *

ಅಮೆರಿಕದಲ್ಲಿಯೂ 'ಜೀವಂ ಭದ್ರಾಣಿ ಪಶ್ಯತಿ'ಯೆ?

ಕರ್ನಲ್ ಮತ್ತೂ ಮಿಸೆಸ್ ಲಿಂಡ್‌ಬರ್ಗ್‌ರವರು ತಮ್ಮ ಮೂರು ವರ್ಷದ ಮಗುವಿನೊಂದಿಗೆ ಇಂಗ್ಲೆಂಡಿಗೆ ಬಂದಿದ್ದಾರೆ—ಅಲ್ಲೇ ವಾಸಮಾಡಲಿಕ್ಕೆ, ಸುಖವಾಗಿ; ಶಾಂತಿಯಿಂದ; ನೆಮ್ಮದಿಯಾಗಿ! ಇದರ ಅರ್ಥವೇನು? ಅಮೆರಿಕವು ಉಜ್ವಲವಾದ ನಾಗರಿಕ ದೇಶವೆನಿಸಿದರೂ ಅದು ತನ್ನ ದೇಶವಾಸಿಗಳ ಪ್ರಾಣ, ಧನ, ಸ್ವಾಸ್ಥ್ಯಗಳ ರಕ್ಷಣೆಯನ್ನು ಸುಸೂತ್ರವಾಗಿ ಮಾಡಲಾರದು ಎಂದಲ್ಲವೇ? ಇದೆಂತಹ ನಾಚಿಕೆಗೇಡು! ಇದರ ಕುರಿತು ನಮ್ಮ ಮಿಸ್ ಮಾಯಾದೇವಿ, ದಯೆಮಾಡಿ, ಒಂದು ಪುಟ ಬರೆದು ಅಮೆರಿಕದ ನಿವಾಸಿಗಳಿಗೊಪ್ಪಿಸಿದರೆಷ್ಟು ಚೆನ್ನಾಗಿದ್ದೀ

* * * * *

ಬಿಹಾರ್—ಒರಿಸ್ಸಾಗಳ ನ್ಯಾಯವಿಧಾಯಕ ಕೌನ್ಸಿಲು,

ಅಲ್ಲಿನ ಸರಕಾರದ ಅಪೇಕ್ಷೆಯಂತೆ, ಪಬ್ಲಿಕ್ ಸೇಫ್ಟಿ ಬಿಲ್ಲನ್ನು ಬಹುಮತದಿಂದ ಮಂಜೂರು ಮಾಡಿತು. ಈ ಬಿಲ್ಲಿನ ಸಮರ್ಥನೆಯ ಕುರಿತು ಹೊಸ ಕಾರಣಗಳೇನೂ ಮುಂದೆ ಬರಲಿಲ್ಲ; ಸಾರ್ವಜನಿಕ ರಕ್ಷಣೆಗೆ ಅಲ್ಲಿ ಈ ಬಿಲ್ಲು ಅಗತ್ಯವಲ್ಲವೆಂಬ ಮೃದುವಾದ ಸ್ವರವೊಂದೂ ಯಾರ ಕಿವಿಗೂ ಬೀಳಲಿಲ್ಲ. ಒಟ್ಟಿನಲ್ಲಿ, ಸುರಕ್ಷಣೆಗೆ ಅಗತ್ಯವಿರುವ ಶಾಸನಗಳು ಯಥಾಕಾಲದಲ್ಲಿ ಸಿದ್ಧಮಾಡಿಟ್ಟಿರುವುದೇ ಲೇಸೆಂದು ಅಧಿಕಾರಿಗಳೂ, ಕೌನ್ಸಿಲೂ ತಿಳಿದಿರುವಂತೆ ತೋರುತ್ತದೆ. ಆಗಲಿ! ಆದರೆ, ಇನ್ನೂ ಕೆಲವು ಇಂತಹ ಶಾಸನಾಯುಧಗಳು ಹೆಚ್ಚಿದರೆ, ಅವು ಉಪಯೋಗಕ್ಕೆ ಬರುವ ಅವಶ್ಯವಿಲ್ಲದೆ, ಅವಲ್ಲಿಯೇ ತುಕ್ಕು ಹಿಡಿದು ಹೋದಾವೆಂಬ ವಿಚಾರ ನಮ್ಮಗಿದೆ. ಆದರೂ ಏನು? ಇಂತಹ ಶಾಸನಗಳು ಕಡಿಮೆಯಾಯಿತೆಂದು, ಸಾರ್ವಜನಿಕ ಹಿತರಕ್ಷಣೆಯ ಅಧಿಕಾರಿಗಳು ಚಿಂತೆಗೀಡಾಗಿ ಅವರ ನಿದ್ರಾಭಂಗವಾಗಬಾರದೆಂಬುದೂ ನಮ್ಮಲ್ಲಿನ ಹಲ ಕೆಲವರ ದೊಡ್ಡ ಯೋಚನೆಯಾಗಿದೆ. ಇದಕ್ಕೇನು ಮಾಡುವ?

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟ್‌ನಲ್ಲಿ -
ಕ್ರಮ ನಂಬ್ರ 1011/1935.

ಕಿದೆಕಾರ ಹರಿಯಪ್ಪ ಭಟ್ಟ—**ವಾದಿ.**

ಮತ್ತು

ಚುಳೀಕಾನ ಶಂಭಟ್ಟ, ಪರಮೇಶ್ವರ ಭಟ್ಟರ ಮಗ, ಪೆರಡಾಲ ಗ್ರಾಮದ ಕುಂಟಿಕಾನದಲ್ಲಿರುವವ } **ಪ್ರತಿವಾದಿ.**

ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ.

ವಾದಿಗೆ ಪ್ರತಿವಾದಿಯು ತಾ. 6—1—1927 ರಲ್ಲಿ ರೂ. 2000ಕ್ಕೆ ಬರಕೊಟ್ಟ ರಿಜಿಸ್ಟ್ರಿ ಅಡವು ದಸ್ತಾವೇಜಿನ ಬಾಬ್ತು ತಾ. 6—1—1935ಕ್ಕೆ ಬಹಾ ಒಂದು ವರ್ಷದ ಬಡ್ಡಿ ಮತ್ತು ಅದರ ಮೇಲಣ ಬಡ್ಡಿ ಕೂಡಾ ರೂಪಾಯಿ 137-13-0 ಕ್ಕೆ ವಾದಿಯು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 31—1—1936ಕ್ಕೆ ಆಕೈರ ತನ್ನಿಗೆ ಇಡೋಣಾಗಿಯದೆ. ಆಕ್ಷೇಪವಿದ್ದಲ್ಲಿ ಆ ದಿವಸ ಕೋರ್ಟಿನ ಮುಂದೆ ಹಾಜಿರಾಗಿ ವ್ಯವಹರಿಸತಕ್ಕದ್ದು.

ಕಾಸರಗೋಡು, 17—1—1936. } **K. Vittal Nayak,** Advocate for Plff.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟ್‌ನಲ್ಲಿ
O. S. No. 1023/1935.

ಕುಂಞಿ ಹೆಂಗುಸು—**ವಾದಿಳು.**

ಮತ್ತು

1. ಗೋಪಾಲಕೃಷ್ಣ ಕುಬಣೂರಾಯ; 2. ತಿರುಮಲೇಶ್ವರ ಭಟ್ಟ, ಮರುವಳ ರಾಮಭಟ್ಟರ ಮಗ, ಮಂಗಳೂರು ಟೌನ್ ಪೈಕಿ ಡೊಂಗರಕೇರಿ; 3. ವೆಂಕಟರಮಣ ಭಟ್ಟ, ಪರ್ಣಜೆ ನಾರಾಯಣ ಭಟ್ಟರ ಮಗ, ವಿಟ್ಲ ಪಡ್ನೂರು ಗ್ರಾಮದ ಮೂರ್ಕಜೆ; 4. ಸುಬ್ಬಣ್ಣ ಶಾಸ್ತ್ರಿ; 5. ಕೃಷ್ಣ ಭಟ್ಟ, ಅನಂತ ಭಟ್ಟರ ಮಗ, ಮಂಗಳೂರು ಟೌನ ಪೈಕಿ ಬಂದರದಲ್ಲಿರುವವ; } **ಪ್ರತಿವಾದಿಗಳು.**

1ನೇ ಪ್ರತಿವಾದಿಯು ತಾ. 25—4—1927ರಲ್ಲು ಬರಕೊಟ್ಟ ಅಡವು ದಸ್ತವೇಜಿನ ಮೇಲ್‌ಚೀಟು ಹೊಂದಿದ ವಾದಿಯು 1932. 1933. 1934 ಮತ್ತು 1935ನೇ ಇಸವಿಗಳ ಬಾಬ್ತು ಒಡ್ಡಿನ ಬಡ್ಡಿಯ ಬಡ್ಡಿ ಕೂಡಾ ರೂ. 627-9-8ನ್ನು ಬರಮಾಡಿಕೊಳ್ಳುವರೆ ಮಾಡಿದ ಮೇಲ್ಕಂಡ ದಾವೆಯಲ್ಲಿ 2. 3 ಮತ್ತು 5ನೇ ಪ್ರತಿವಾದೀರಿಗೆ ನೋಟಿಸು ಜ್ಯಾರಿ ಆಗದ್ದರಿಂದ ಸದರಿ ವ್ಯಾಜ್ಯವನ್ನು ಪುನಹಾ ನೋಟಿಸು ಬಗ್ಗೆಂತ ತಾರೀಕು 30-1-1936ಕ್ಕೆ ಇಟ್ಟಿರುತ್ತದೆ. ಆ ದಿವಸ ಸದರಿ 2. 3 ಮತ್ತು 5ನೇ ಪ್ರತಿವಾದೀರು ಹಾಜ್ರಾಗದಿದ್ದರೆ ಅವರನ್ನು ಯೆಕ್ಸಪಾರ್ಟಿ ಮಾಡಲಾದೀತೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

Kasaragod, 15—1—1935. } **K. Sundar Rama Shetty,** Vakil for plff.

FIRST AND FOREMOST

FIRST AND FOREMOST among the ideals of the Canara Bank is the ideal of Service to its Customers.

ESTD. 1906

CANARA BANK

LIMITED.

THE KALYANPUR SUGAR MILLS, LTD.

ದಿ ಕಲ್ಯಾಣಪುರ ಶುಗರ್ ಮಿಲ್ಸ್, ಲಿಮಿಟೆಡ್.

(ದಿ ಇಂಡಿಯನ್ ಕಂಪೆನಿಸ್ ಎಕ್ಟ್ 1913ರ ಪ್ರಕಾರ ರಿಜಿಸ್ಟರ್ ಆದದ್ದು.)

ಇದರ ಒಂದು ಪ್ರತಿಯನ್ನು ಮಂಗಳೂರಿನ ಜೊಯಿಂಟ್ ಸ್ಟೋಕ್ ಕಂಪೆನಿಗಳ ಅಸಿಸ್ಟಾಂಟ್ ರಿಜಿಸ್ಟ್ರಾರರೊಡನೆ ದಾಖಲುಮಾಡಿದೆ.

ಅಧೀಕೃತ ಮೂಲಧನ ರೂಪಾಯಿ 10ರ 50,000 ಶೇರುಗಳಿಂದ ರೂಪಾಯಿ 5,00,000.

ವಂತಿಗೆಗೆ ಅರ್ಪಿಸಿದ ಮೂಲಧನ—ರೂಪಾಯಿ 2,00,000; ಪೈಕಿ ಕಬ್ಬು ಬೆಳೆಸುವವರ ಬಗ್ಗೆ ರೂಪಾಯಿ 50,000 ಪ್ರತ್ಯೇಕಿಸಲ್ಪಟ್ಟಿರುತ್ತದೆ.

ಪ್ರತೀ ಪಾಲಿಗೆ ಕೊಡಬೇಕಾದ ಐವೇಜು:—

ಅರ್ಜಿಯ ಒಟ್ಟಿಗೆ ಕೊಡಬೇಕಾದದ್ದು	ಒಂದು ಅರ್ಜಿಯಲ್ಲಿ ರೂಪಾಯಿ ಹತ್ತಕ್ಕೆ ವಿೂರಿದ ಪ್ರವೇಶ ಹಾಸಲು	0—4—0
	ಪ್ರತಿ ಪಾಲಿನ ವೊದಲಿನ ಕಂತು	2—8—0
ಅರ್ಜಿ ಅಂಗೀಕರಿಸೋಣಾದ. ಒಂದು ತಿಂಗಳ ಒಳಗೆ ಕೊಡಬೇಕಾದದ್ದು	ಎರಡನೆಯ ಕಂತು	7—8—0

ಡೈರೆಕ್ಟರರು

1. ಮಹಾರಾಜೇಶ್ರೀ (ಪ್ರೆಸಿಡೆಂಟರು) **ಅಮ್ಮೆಂಬಳ ಶ್ರೀನಿವಾಸ ಪೈಯವರು**, ಬಿ. ಎ., ಬಿ. ಎಲ್., ಕೆನರಾ ಬೇಂಕಿನ ಪ್ರೆಸಿಡೆಂಟರು.
2. (ವ್ಯಾಸ್ ಪ್ರೆಸಿಡೆಂಟ್) **ಬಂಟ್ವಾಳ ವೈಕುಂಠ ಬಾಳಿಗರು** ಬಿ. ಎ., ಬಿ. ಎಲ್., ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ಚೆಯರ್‌ಮ್ಯಾನರು; ದಿ ಕೆನರಾ ಬೇಂಕಿಂಗ್ ಕೋಪೊರೇಶನಿನ ಡ್ಯಾರೆಕ್ಟರರು; ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ಮೆಂಬರರು (ಹ್ಯಾಕೋರ್ಟಿನ ಒಪ್ಪಿಗೆಯನ್ನು ನಿರೀಕ್ಷಿಸಲಾಗುತ್ತದೆ.)
3. **ಹಟ್ಟಂಗಡಿ ಲಕ್ಷ್ಮೀನಾರಾಯಣ ಕಾಮತರು** ಸಾಹುಕಾರರು ಮತ್ತು ಜಮೀನುದಾರರು; ಕೆನರಾ ಬೇಂಕಿನ ಮತ್ತು ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ಡ್ಯಾರೆಕ್ಟರರು.
4. **ವಾಮನ ಕುಡ್ವರು** ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ಜನರಲ್ ಮೆನೇಜರರು ಮತ್ತು ಎಮ್. ಶ್ರೀನಿವಾಸ ರಾಮಚಂದ್ರ ಕುಡ್ವ ಎಂಡ್ ಸನ್ಸ್ ಲಿಮಿಟೆಡ್, ಇದರ ಮೆನೇಜಿಂಗ್ ಡೈರೆಕ್ಟರರು.
5. **ಕಿನ್ನಿ ಶೇಷಗಿರಿ ರಾಯರು** ಜಮೀನುದಾರರು ಮತ್ತು ಬೇಂಕರರು; ಶಂಕರ್ ವಿಠ್ಠಲ್ ಕಂಪೆನಿಯ ಮೆನೆಜಿಂಗ್ ಡ್ಯಾರೆಕ್ಟರರು.
6. **ಉಳ್ಳಾಲ ಶ್ರೀನಿವಾಸ ಮಲ್ಯರು** ಸಾಹುಕಾರರು, ಕೆನರಾ ಬೇಂಕಿನ ಡ್ಯಾರೆಕ್ಟರರು.
7. **ಮಣೇಲ್ ಅಣ್ಣಪ್ಪ ನಾಯ್ಕರು** ಸಾಹುಕಾರರು ಮತ್ತು ಬೇಂಕರರು, ಮಂಗಳೂರು ಮಿಲ್ಸ್ ಲಿಮಿಟೆಡ್ ಇದರ ಡ್ಯಾರೆಕ್ಟರರು.
8. **ಸುಜೀರ್ ಪುಂಡಳೀಕ ನಾಯಕರು** ಸಾಹುಕಾರರು, ಮಂಗಳೂರು ಮಿಲ್ಸ್ ಲಿಮಿಟೆಡ್ ಇದರ ಡ್ಯಾರೆಕ್ಟರರು, ಮುಂಬಾಯಿ ಫೀರ್‌ಭಾಯಿ ಬಿಲ್ಡಿಂಗಿನಲ್ಲಿರುವ ಕಮಿಶನ್ ಏಜಂಟರು.
9. **ಎಮ್. ವೆಂಕಟೇಶ ಪೈಗಳವರು** ಜಮೀನುದಾರರು, ಮತ್ತು ಬೇಂಕರರು; ಕೆನರಾ ಬೇಂಕ್ ಮತ್ತು ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿಯ ಡ್ಯಾರೆಕ್ಟರರು.

ಬೇಂಕುಗಳು

ದಿ ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು. ದಿ ಕೆನರಾ ಬೇಂಕಿಂಗ್ ಕೋಪೊರೇಶನ್, ಉಡುಪಿ, ಲಿಮಿಟೆಡ್, ಉಡುಪಿ.

ಲೆಕ್ಕ ಪರಿಶೋಧಕರು

ಮಹಾರಾಜೇಶ್ರೀ ಬಿ. ಶಾಂತಾರಾಮ ರಾಯರು, ಬಿ. ಎ., ಜಿ. ಡಿ. ಎ., ಆರ್. ಎ.

ರಿಜಿಸ್ಟರ್ಡ್ ಆಫೀಸು

ಕಂಪೆನಿಯ ರಿಜಿಸ್ಟರ್ ಮಾಡಲ್ಪಟ್ಟ ಆಫೀಸು, ಸಿ. ಪಿ. ಸಿ. ಬಿಲ್ಡಿಂಗ್, ಕೊಡಿಯಾಲಬೈಲು, ಮಂಗಳೂರು.

ವಿವರ.

1932ನೇ ಇಸವಿಯಲ್ಲಿ ಸರಕಾರದವರು ಸಕ್ಕರೆ ಕೈಗಾರಿಕೆಯ ಸಂರಕ್ಷಣಾತ್ಮಕ ಮಸೂದೆಯನ್ನು ಮಂಜೂರು ಮಾಡಿದ ನಂತರ, ಸಕ್ಕರೆ ಕೈಗಾರಿಕೆಗೆ—ಹಿಂದುಸ್ಥಾನದಲ್ಲಿ ಈ ವರೆಗೆ ಇತರ ಯಾವ ಕೈಗಾರಿಕೆಗೂ ದೊರಕದಂತಹ ಪ್ರೋತ್ಸಾಹವು ದೊರಕಿರುತ್ತದೆ. ಪರಿಣಾಮವಾಗಿ 1931-32ನೇ ವರ್ಷದಲ್ಲಿ 32 ಕಾರ್ಖಾನೆಗಳಿದ್ದದ್ದು 1935-36ರಲ್ಲಿ 154 ಕಾರ್ಖಾನೆಗಳಾಗಿವೆ. ಈ ಅಭಿವೃದ್ಧಿಯು ಹೆಚ್ಚಾಗಿ ಉತ್ತರ ಹಿಂದೂಸ್ಥಾನದಲ್ಲಿಯೇ ಆಗಿರುತ್ತದೆ—ಪೈಕಿ ಸಂಯುಕ್ತಪ್ರಾಂತ್ಯ ಮತ್ತು ಬಿಹಾರಿನಲ್ಲಿ ಮಾತ್ರವೇ 111 ಕಾರ್ಖಾನೆಗಳಿವೆ. ಇದರೊಡನೆ ದಕ್ಷಿಣ ಹಿಂದೂಸ್ಥಾನದಲ್ಲಿ ಬರೇ 21 ಕಾರ್ಖಾನೆಗಳು—ಅವುಗಳು ಕೂಡಾ ಉತ್ತರ ಹಿಂದೂಸ್ಥಾನದ ಎಷ್ಟೋ ಕಾರ್ಖಾನೆಗಳಿಗಿಂತ ಬಹಳ ಚಿಕ್ಕವುಗಳಾಗಿವೆ. ಆದುದರಿಂದ ಸಕ್ಕರೆ ಕೈಗಾರಿಕೆಯ ಅಭಿವೃದ್ಧಿಯ ಮಟ್ಟಿಗೆ ದಕ್ಷಿಣ ಹಿಂದೂಸ್ಥಾನವು ಬಹಳ ಹಿಂದೆಬಿದ್ದಿರುತ್ತದೆಂಬುದು ಒಡೆದು ಕಾಣುತ್ತದೆ.

ಪಶ್ಚಿಮ ಕರಾವಳಿಯಲ್ಲಿ ಕೊಯಂಬತ್ತೂರು ಮತ್ತು ತಿರುವಾಂಕೂರು ಜಿಲ್ಲೆಗಳಲ್ಲಿ ಬರೇ ಎರಡು ಕಾರ್ಖಾನೆಗಳಿವೆ. ಇವುಗಳು ತಯಾರಿಸುವ ಸಕ್ಕರೆಯು ಇವುಗಳ ಸ್ಥಳೀಕ ಅವಶ್ಯಕತೆಗಳಿಗೆ ಕೂಡ ಸಾಕಾಗುವುದಿಲ್ಲ. ಆದುದರಿಂದ ಪಶ್ಚಿಮ ಕರಾವಳಿಯಲ್ಲಿ ಒಂದು ಕಾರ್ಖಾನೆಯನ್ನೇರ್ಪಡಿಸಲಿಕ್ಕೆ ತುಂಬಾ ಅನುಕೂಲತೆ ಇದೆಯೆಂಬುದು ಸ್ಪಷ್ಟವಾಗುತ್ತದೆ.

ಕಲ್ಯಾಣಪುರ ಹೊಳೆಯ ದಡದಲ್ಲಿಯೇ ಇದ್ದ ಒಂದು ಸ್ಥಳವನ್ನು ತೆಗೆದುಕೊಳ್ಳುವ ಸಂದರ್ಭವು ಕಂಪೆನಿಯ ಸುಯೋಗದಿಂದ ಒದಗಿರುತ್ತದೆ. ಆ ಸ್ಥಳವು ಸ್ವರ್ಣ ನದಿ, ಮಡಿಸಾಲ ಹೊಳೆ, ಸೀತಾನದಿ ಮತ್ತು ಸಂಕದ ಹೊಳೆ ಇವುಗಳ ಸಂಗಮಕ್ಷ ಹತ್ತಿರದಲ್ಲಿಯೇ ಇದ್ದು, ಹದಿನೈದು ಮೈಲುಗಳ ವರೆಗೆ ಕಬ್ಬಿನ ತೋಟಗಳಿಗೆ ಜಲಮಾರ್ಗದ ಪ್ರಯೋಜನ ಉಳ್ಳದ್ದಾಗಿದೆ. ಉತ್ತಮ ತರಗತಿಯ ಬೆಲ್ಲ ತಯಾರಿಸುವುದರಲ್ಲಿ ಹೆಸರುವಾಸಿಯಾದ ಉಪ್ಪೂರು, ಅರೂರು, ಬಾರ್ಕೂರು ಮೊದಲಾದ ಹಳ್ಳಿಗಳು ಈ ನದಿಗಳ ದಡದಲ್ಲಿರುತ್ತವೆ. ಈ ಹಳ್ಳಿಗಳಲ್ಲಿಯೂ, ಈ ನದಿಗಳ ದಡದಲ್ಲಿಯೂ,—ಡಿಪ್ಯುಟಿ ಡ್ಯಾರೆಕ್ಟರ್ ಆಫ್ ಎಗ್ರಿಕಲ್ಚರ್, ತಲಚೇರಿ, ಇವರು ನಮಗೆ ತಿಳಿಸಿದ ಪ್ರಕಾರ ಶೇಕಡಾ 15ರಿಂದ 16ರ ವರೆಗೆ ಸಕ್ಕರೆಯ ಸತ್ವವಿರುವ ಕೆಂಪು ಮೊರಿಸ್ ಕಬ್ಬು ಬೆಳೆಸಲ್ಪಡುತ್ತದೆ. ಈ ಸ್ಥಳದಿಂದ ಮಂಗಳೂರು ಬಂದರಕ್ಕೂ ಮಂಗಳೂರು ರೈಲ್ವೆ ಸ್ಟೇಷನಿಗೂ ಮಜ್ಜೆಗಳ ಮೂಲಕ ಹೋಗುವ ಸುಲಭವಾದ ಸಮುದ್ರ ಮಾರ್ಗವಿದೆ. ಆದುದರಿಂದ ಹೆಚ್ಚು ಸಕ್ಕರೆ ಸತ್ವವಿರುವ ಕಬ್ಬನ್ನು ಕಾರ್ಖಾನೆಗೂ, ಕಾರ್ಖಾನೆಯಲ್ಲಿ ತಯಾರಿಸಲ್ಪಟ್ಟ ಸಾಮಾನುಗಳನ್ನು ಬಂದರ ಮತ್ತು ರೈಲ್ವೆ ಸ್ಟೇಷನುಗಳಿಗೂ ಕಡಿಮೆ ಖರ್ಚಿನಲ್ಲಿ ಕೊಂಡೊಯ್ಯಲಿಕ್ಕೆ ಅನುಕೂಲವಿದೆ. ಈ ವಿಷಯಗಳಲ್ಲಿ ಈ ಸ್ಥಳವು ಅದರ್ಶಸ್ಥಳವೆನಿಸಿದೆಯೆಂದು ನೆನೆಸಲಾಗಿದೆ.

ಇಲ್ಲಿಯ ನಮ್ಮ ಡ್ಯಾರೆಕ್ಟರರಾಗಿರುವ ಮತ್ತು ದೊಡ್ಡ ಜಮೀನುದಾರರಾದ ಮಾ। ರಾ। ಹಟ್ಟಂಗಡಿ ಲಕ್ಷ್ಮೀನಾರಾಯಣ ಕಾಮತ್ ಮತ್ತು ಕಿನ್ನಿ ಶೇಷಗಿರಿ ರಾವ್ ಇವರ ಸಹಕಾರದಿಂದ ಕಾರ್ಖಾನೆಗೆ ಸಾಕಷ್ಟು ಕಬ್ಬನ್ನು ಕ್ರಮವಾಗಿ ಒದಗಿಸಲು ವ್ಯವಸ್ಥೆಗೊಳಿಸಬಹುದಾಗಿದೆ.

ಕಂಪೆನಿಯು ಪ್ರಥಮ ವರ್ಷದಲ್ಲಿ ದಿನ ಒಂದಕ್ಕೆ 50 ಟನ್ನು ಕಬ್ಬನ್ನು ಗಾಣಕ್ಕೆ ಹಾಕುವ ಸಣ್ಣ ಕಾರ್ಖಾನೆಯೊಡನೆ ಆರಂಭಿಸಿ, ಕ್ರಮೇಣ 150 ಟನ್ನು ವರೆಗೆ ಗಾಣಕ್ಕೆ ಹಾಕುವಂತೆ ಏರ್ಪಡಿಸಬೇಕಾಗಿ ಯೋಚಿಸಿದೆ. ಮೊದಲಿನ ವರ್ಷದಲ್ಲಿ ಕಾರ್ಖಾನೆಯು 120 ದಿನ ಕೆಲಸಮಾಡಿ, ಮುಂದೆ ವರ್ಷಾವಧಿ ಕೆಲಸದ ದಿನಗಳನ್ನು 150ಕ್ಕೆ ಏರಿಸಬಹುದಾಗಿ ನಿರೀಕ್ಷಿಸಲಾಗಿಯಿದೆ. ಕಾರ್ಖಾನೆಯು ಪ್ರಥಮದ ವರ್ಷ 600 ಟನ್ನು ಸಕ್ಕರೆಯನ್ನು ತಯಾರಿಸಿ, ಕಟ್ಟಕಡೆಗೆ 2,200 ಟನ್ನು ಸಕ್ಕರೆ ತಯಾರಿಸುವ ಅಶಯವುಳ್ಳದಾಗಿದೆ. ನಮ್ಮ ಜಿಲ್ಲೆಯು ಪ್ರತಿವರ್ಷವೂ ಸುಮಾರು 4,000 ಟನ್ನು ಸಕ್ಕರೆಯನ್ನು ಆಮದು ಮಾಡುತ್ತದೆ. ಆದುದರಿಂದ ಈ ಕಾರ್ಖಾನೆಯಲ್ಲಿ ತಯಾರಾಗುವ ಸಕ್ಕರೆಯು ಸ್ಥಳೀಕ ಅವಶ್ಯಕತೆಗಳಿಗೇನೇ ಸಾಕಾಗಲಾರದು. ಈ ದೆಶೆಯಿಂದ ಮಾರಾಟದ ತೊಂದರೆಗಳೂ ಇರಲಾರವು.

ಯಂತ್ರಸಾಮಗ್ರಿಗಳ ಮೇಲೆ ನ್ಯಾಯವಾದ ಡಿಪ್ರಿಸಿಯೇಶನನ್ನೂ ಇತರ ಖರ್ಚುಗಳನ್ನೂ ಕಳೆದು ಕಾರ್ಖಾನೆಯು ಒಂದು ಟನ್ನು ಸಕ್ಕರೆಯ ಮೇಲೆ ರೂಪಾಯಿ 30ನ್ನು ಐನ್ ಮುನಾಫೆಯಾಗಿ ಹುಟ್ಟಿಸಬಹುದಾಗಿ ನಿರೀಕ್ಷಿಸಲಾಗಿದೆ. ಪ್ರಥಮ ವರ್ಷದಲ್ಲಿ 1½ ಲಕ್ಷದ ಮೂಲಧನದ ಫೋಲೆ, ಸಕ್ಕರೆ ತಯಾರಿಯು 600 ಟನ್ನೆಂದು ತೆಗೆದುಕೊಂಡಲ್ಲಿ 18,000 ಐನ್ ಮುನಾಫೆಯನ್ನು ನಿರೀಕ್ಷಿಸಬಹುದು. ಈ ಪೈಕಿ ರಿಜರ್ವ್ ಫಂಡಿನ ಬಗ್ಗೆ ಶೇಕಡಾ 25ನ್ನು ಪ್ರತ್ಯೇಕಿಸಿ, ಶೇಕಡಾ 9ರ ಡಿವಿಡೆಂಡನ್ನು ಪಾಲುದಾರರಿಗೆ ಹಂಚಬಹುದು. ಇದು ಬರೆ 50 ಟನ್ನು ಕಬ್ಬನ್ನು ಗಾಣ ಹಾಕುವ ಆಧಾರದ ಮೇಲೆ ಲೆಕ್ಕ ಮಾಡಿದ್ದಾಗಿದೆ. ಇನ್ನೂ ಹೆಚ್ಚು ಕಬ್ಬನ್ನು ಗಾಣ ಹಾಕಿದಲ್ಲಿ ಸಕ್ಕರೆತಯಾರಿಯಲ್ಲಿ ಖರ್ಚಿನ ದಾಮಾಶಾಯಿಯಲ್ಲಿ ಉಳಿತಾಯವಾಗಿ, ಮೂಲಧನದ ಮೇಲಿನ ಲಾಭವು ಇನ್ನೂ ಹೆಚ್ಚಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಮಳೆಗಾಲದಲ್ಲಿ ಸಕ್ಕರೆ ಕಾರ್ಖಾನೆಯು ಕೆಲಸವಿಲ್ಲದಿದ್ದಾಗ, ಧೂಪದ ಕಾಯಿಗಳನ್ನು ಒಣಗಿಸುವ ಅಲೋಚನೆಯಿದೆ. ಈ ಬಗ್ಗೆ, ನಾವು ತೆಗೆದುಕೊಳ್ಳಬೇಕೆಂದಿರುವ ಕಾರ್ಖಾನೆಯಲ್ಲಿ ಒಂದು ದೊಡ್ಡ Bronwell Dryer ಎಂಬ ಒಣಗಿಸುವ ಯಂತ್ರವೂ, Chulla Dryer ಎಂಬ ಇನ್ನೊಂದು ಒಣಗಿಸುವ ಯಂತ್ರವೂ ಇದೆ. ಒಣಗಿಸಿದ ಕಾಯಿಗಳ ಬಗ್ಗೆ ಗಿರಾಕಿಗಳಿವೆ ಮತ್ತು ಹೆಚ್ಚಿನ ಲಾಭದಲ್ಲಿ ಒಣಗಿಸಿದ ಕಾಯಿಗಳನ್ನು ಮಾರಬಹುದಾಗಿದೆ.

ಅಲ್ಲದೆ ಶರಾಬು, ಸ್ಪಿರಿಟು ಮತ್ತು ಮೋಟರ್ ಕಾರಿಗೆ ಅಗುವ ಪೆಟ್ರೋಲಿನಂತಹ ದ್ರವವನ್ನು ತಯಾರಿಸಲು ಸರಕಾರದಿಂದ ಲ್ಯಾಸೆನ್ಸ್ ಪಡೆಯುವ ಸಂಭವದ ವಿಷಯವನ್ನು ಸಹ ನಾವು ಪರಿಗಣಿಸಿಲ್ಲ. ಇವುಗಳಲ್ಲಿ ಯಾವುದಾದರೊಂದರ ತಯಾರಿಯ ಬಗ್ಗೆ ಲ್ಯಾಸೆನ್ಸು ಹೊಂದುವುದರಲ್ಲಿ ನಮ್ಮ ಪ್ರಯತ್ನಗಳು ಸಫಲವಾದರೆ ಸಕ್ಕರೆ ತಯಾರಿಯಲ್ಲಿ ನಮಗೆ ಬೆಲೆ ಇಲ್ಲದೆ ಸಿಕ್ಕುವ Molasses ಎಂಬ ದ್ರವವನ್ನು ಬಹಳ ಲಾಭಕರವಾದ ರೀತಿಯಲ್ಲಿ ಉಪಯೋಗಿಸಬಹುದು.

ಕಾರ್ಖಾನೆಯ ಸ್ಥಾನವಿಶೇಷದಿಂದ ಕಾರ್ಖಾನೆಗೆ ಹಲವು ಕೈಗಾರಿಕೆಗಳ ಅನುಕೂಲವಾದ ಸಾಮಾನುಗಳು ದೊರಕಲನುಕೂಲವಾಗಿ, ಭತ್ತದಿಂದ ಅಕ್ಕಿ ತಯಾರಿಸುವುದು, ತೆಂಗಿನೆಣ್ಣೆ ತಯಾರಿಸುವುದು, ಹುರಿಹಗ್ಗದ ಕೈಗಾರಿಕೆಯನ್ನೇರ್ಪಡಿಸುವುದು ಮೊದಲಾದ ಹಲವು ತರದ ಕೈಗಾರಿಕೆಗಳಿಂದ ಕಾರ್ಖಾನೆಯಲ್ಲಿ ಕೆಲಸಗಳನ್ನು ಹೆಚ್ಚಿಸಬಹುದು.

ಎಲ್ಲೊಟ್‌ಮೆಂಟ್

ಕಂಪೆನಿಯ ಆರ್ಟಿಕಲ್ಸ್ ಒಫ್ ಎಸೋಶಿಯೇಶನ್ ಪ್ರಕಾರ, ಒಂದು ಲಕ್ಷ ರೂಪಾಯಿ ಮೌಲ್ಯದ ೧೦,೦೦೦ ಪಾಲುಗಳು ಭರ್ತಿಯಾಗುವ ಮುಂಚೆ ಪಾಲುಗಳನ್ನು ಎಲ್ಲೊಟ್ ಮಾಡೋಣಾಗುವುದಿಲ್ಲ.

ಸ್ಥಾಪಕರಿಗೆ ಪ್ರತಿಫಲ

ಕಂಪೆನಿಯನ್ನು ಸ್ಥಾಪಿಸುವ ಬಗ್ಗೆ ಹಣ ಕೊಟ್ಟಿರುವುದಾಗಲಿ ಕೊಡುವುದಾಗಲಿ ಇರುವುದಿಲ್ಲ.

ಆರಂಭದ ಖರ್ಚು

ಕಂಪೆನಿಗೆ ತಗಲುವ ಆರಂಭದ ಖರ್ಚು ರೂಪಾ ೨೫,೦೦೦ನ್ನು ವಿೂರಲಾರದೆಂದು ಅಂದಾಜು ಮಾಡಲಾಗಿದೆ.

ಡ್ಯಾರೆಕ್ಟರರು

ಡ್ಯಾರೆಕ್ಟರರಾಗಲಿಕ್ಕೆ ಮತ್ತು ಡ್ಯಾರೆಕ್ಟರರು ಹೊಂದತಕ್ಕ ಪ್ರತಿಫಲದ ಬಗ್ಗೆ, ಆರ್ಟಿಕಲ್ಸ್ ಒಫ್ ಎಸೋಶಿಯೇಶನಿನಲ್ಲಿ ಕೆಳಗೆ ಕಾಣಿಸಿದ ಕ್ರಮಗಳಿರುತ್ತವೆ.

(ಅ) ೩೦೦೦ ರೂಪ್ಯಾ ಮೌಲ್ಯ ತೆತ್ತು ೩೦೦ ಪಾಲುಗಳನ್ನು ಪಡೆಕೊಂಡಿರುವ ಪ್ರತಿಯೊಬ್ಬ ಪಾಲುದಾರನೂ ಡ್ಯಾರೆಕ್ಟರನಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರುತ್ತಾನೆ.

(ಆ) ಡ್ಯಾರೆಕ್ಟರರು ವಿೂಟಿಂಗಿನಲ್ಲಿ ಹಾಜರಾದ ಬಗ್ಗೆ, ಪ್ರತಿ ವಿೂಟಿಂಗಿಗೆ ರೂಪ್ಯಾ ೫೦ಕ್ಕೆ ವಿೂರದ ಡ್ಯಾರೆಕ್ಟರರು ನಿರ್ಣಯಿಸಬಹುದಾದ ವೊಬಲಗನ್ನು ಪಡೆಯಲಿಕ್ಕೂ ಅಥವಾ ಆಗಾಗ್ಯೆ ಜನರಲ್ ವಿೂಟಿಂಗಿನಲ್ಲಿ ಕಂಪೆನಿಯು ನಿರ್ಣಯಿಸಬಹುದಾದ ಪ್ರತಿಫಲವನ್ನು ಹೊಂದಲಿಕ್ಕೂ ಪ್ರತಿ ಡ್ಯಾರೆಕ್ಟರನು ಅರ್ಹನಾಗಿರತಕ್ಕದ್ದು.

(ಇ) ಬೋರ್ಡಿನಲ್ಲಿ ನಿರ್ಣಯಿಸಬಹುದಾದ ದರದ ಪ್ರಕಾರ ಪ್ರಯಾಣದ ಭತ್ತೆಯನ್ನು ಹೊಂದಲು ಡ್ಯಾರೆಕ್ಟರರು ಅರ್ಹರಾಗಿರುತ್ತಾರೆ.

ಡ್ಯಾರೆಕ್ಟರರ ಸಂಬಂಧ.

೧. ಮಹಾರಾಜೇಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತ್, ಬಿ. ವೈಕುಂಠ ಬಾಳಿಗ ಮತ್ತು ವಾಮನ್ ಕುಡುವ (ಡ್ಯಾರೆಕ್ಟರರು) ಮತ್ತು ಎಮ್. ಶ್ರೀಧರ ಕುಡುವ ಇವರು ಕೂಡಿ, ಕಲ್ಯಾಣಪುರ ಧೂಪದ ಕಾರ್ಖಾನೆ ಎಂದು ಕರೆಯಲ್ಪಡುತ್ತಿದ್ದ ಕಾರ್ಖಾನೆಯನ್ನು ರೂಪ್ಯಾ ೪,೭೫೦ಕ್ಕೆ ಉಡುಪಿ ಸಬ್ ರಿಜಿಸ್ಟ್ರಾರ ಆಫೀಸಿನಲ್ಲಿ ತಾ. ೨೨—೧೦—೧೩ರ ನಂಬ್ರ ೧೫೪೬ನೇಗೆ ರಿಜಿಸ್ಟರಾದ ಕ್ರಯಚೀಟಿನ ಪ್ರಕಾರ ಕ್ರಯಕ್ಕೆ ಪಡೆದಿರುತ್ತಾರೆ. ಆ ಮೇಲೆ ಅದಕ್ಕೆ ರೂಪ್ಯಾ ೭೫೦—೦—೦ರಷ್ಟು ದುರಸ್ತಿ ವೊದಲಾದ ಬಗ್ಗೆ ಅವರಿಗೆ ಖರ್ಚು ತಗಲಿರುತ್ತದೆ. ಕ್ರಯಚೀಟು ಎಚ್. ಲಕ್ಷ್ಮೀನಾರಾಯಣ ಕಾಮತರ ಹೆಸರಿನಲ್ಲಿರುತ್ತದೆ. ಆರ್ಟಿಕಲ್ ೪ ಹೀಗೆ ಇದೆ—ಮಾ। ರಾ। ರಾ। ಎಚ್. ಲಕ್ಷ್ಮೀನಾರಾಯಣ ಕಾಮತರು ಇತ್ತೀಚೆಗೆ ಕ್ರಯಕ್ಕೆ ಪಡೆದಿರುವ, ಕಲ್ಯಾಣಪುರದಲ್ಲಿರುವ ಕಾರ್ಖಾನೆ ಮತ್ತು ಸ್ಥಳ ಕಟ್ಟೋಣಗಳನ್ನು ಅವರಿಂದ ಕ್ರಯಕ್ಕಾಗಲಿ, ಮೂಲಗೇಣಿಗಾಗಲಿ ಪಡೆಕೊಳ್ಳಲು ಕಂಪೆನಿಯು ಕೂಡಲೇ ಅವರೊಡನೆ ಕರಾರನ್ನು ಮಾಡತಕ್ಕದ್ದು.

೨. ಮೇಲಿನ ಹೊರತು ಮತ್ತು ಆರ್ಟಿಕಲ್ಸ್ ಒಫ್ ಎಸೋಶಿಯೇಶನಿನ ಕ್ರಮಗಳಿಗನುಗುಣವಾಗಿ ಅವರಿಗೆ ಹಕ್ಕಿರುವ ವಿೂಟಿಂಗ್ ಹಾಜರಿಯ ಪ್ರತಿಫಲ ಮತ್ತು ಇತರ ಏನೊಂದು ಭತ್ತೆಯ ಹೊರತು ಡ್ಯಾರೆಕ್ಟರರಿಗೆ ಕಂಪೆನಿಯಲ್ಲಿ ಬೇರಾವ ತರದ ಲಾಭವು ಇರುವುದಿಲ್ಲ.

ಕಂಪೆನಿಯ ಮೆಮೊರಾಂಡಮ್ ಮತ್ತು ಆರ್ಟಿಕಲ್ಸ್ ಒಫ್ ಎಸೋಶಿಯೇಶನ್ ಮತ್ತು ಎಚ್. ಲಕ್ಷ್ಮೀನಾರಾಯಣ ಕಾಮತರ ಹೆಸರಿನ ಮೇಲೆ ಕಾಣಿಸಿದ ಕ್ರಯಚೀಟು ಇವುಗಳನ್ನು ತಾ. ೩೧-೧೦-೧೯೩೬ರ ವರೆಗೆ ಬೆಳಿಗ್ಗೆ ಘಂಟೆ ೮ರಿಂದ ೧೩ರ ವರೆಗೂ ಮಧ್ಯಾಹ್ನ ಘಂಟೆ ೨ರಿಂದ ೫ರ ವರೆಗೂ ಕೊಡಿಯಾಲಬೈಲಿನಲ್ಲಿರುವ ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿ ನೋಡಬಹುದು.

ಕಮಿಶನ್ನು

ಕಂಪೆನಿಯು ಪಾಲು ಮಾರಾಟದ ಬಗ್ಗೆ ಕಂಪೆನಿಯಿಂದ ಅಧಿಕಾರ ಹೊಂದಿದ ಏಜಂಟರಿಗೆ ಅಥವಾ ದಲಾಲರಿಗೆ ಶೇಕಡಾ ೫ರ ಕಮಿಶನ್ನು ಕೊಡುವುದು.

ಪಾಲುಗಳ ಅರ್ಜಿಯ ಫೋರ್ಮುಗಳು (೧) ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿಯೂ (೨) ಕೆನರಾ ಬೇಂಕ್ ಲಿಮಿಟೆಡ್ ಮತ್ತು ಕೆನರಾ ಬೇಂಕಿಂಗ್ ಕೊಪೊರೇಶನ್ ಲಿಮಿಟೆಡ್ ಇವರ ಎಲ್ಲಾ ಶಾಖೆಗಳಲ್ಲಿಯೂ ದೊರಕುವುವು. ಶೇರುಗಳು ಅರ್ಜಿಯ ಸಂಬಂಧದ ಐವೇಜುಗಳನ್ನು ಕಂಪೆನಿಯ ಪರವಾಗಿ ಮೇಲೆ ಕಾಣಿಸಿದ ಬೇಂಕುಗಳು ಇತರ ಯಾವ ಖರ್ಚನ್ನೂ ಕೇಳದೆ ಸ್ವೀಕರಿಸುವುವು. ಎಲ್ಲೊಟ್‌ಮೆಂಟ್ ಆಗದೆ ಇದ್ದರೆ ಕೊಟ್ಟ ಡಿಪೊಜಿಟ್ ಐವೇಜನ್ನು ಪೂರಾ ವಾಪಾಸು ಕೊಡೋಣಾಗುವುದು ಮತ್ತು ಅರ್ಜಿ ಮಾಡಿದ ಶೇರು ಸಂಖ್ಯೆಗಿಂತ ಎಲ್ಲೊಟ್ ಆದ ಶೇರು ಸಂಖ್ಯೆಯು ಕಡಿಮೆಯಾದರೆ, ಆ ಸಂಬಂಧ ಕಂಪೆನಿಯೊಡನೆ ಉಳಿಯುವ ಡಿಪೊಜಿಟ್ ಐವೇಜನ್ನು ಎಲ್ಲೊಟ್ ಆದ ಶೇರುಗಳ ಬಗ್ಗೆ ಬರಬೇಕಾದ ಐವೇಜಿನ ಬಗ್ಗೆ ವಜಾ ತೆಗೆದು, ಇನ್ನೂ ಬಾಕಿ ಉಳಿದಲ್ಲ ಅರ್ಜಿಮಾಡಿದವರಿಗೇನೆ ವಾಪಾಸು ಕೊಡೋಣಾಗುವುದು. ಕೇಳಿದ ತಾರೀಕಿಗೆ ಶೇರಿನ ಬರಬೇಕಾದ ಐವೇಜನ್ನು ಕೊಡದೆ ಇದ್ದಲ್ಲಿ ಮೊದಲು ಕೊಟ್ಟ ಐವೇಜನ್ನು ವಜಾ (forfeit) ಮಾಡೋಣಾಗುವುದಲ್ಲದೆ ಎಲ್ಲೊಟ್‌ಮೆಂಟನ್ನೂ ವಜಾ (cancel) ಮಾಡೋಣಾಗುವುದು.

ತಾರೀಕು 7ನೇ ಜನವರಿ 1936.

ಯಾವದು ಮಾಡತಕ್ಕದೋ ಅದನ್ನು ಬಿಟ್ಟು, ಮಾಡಬಾರದ್ದನ್ನು ಯಾರು ಮಾಡುತ್ತಿರುವರೋ, ಮೇರೆದಪ್ಪಿ ಮದಿಸಿರುವ ಅಂಥವರ ಅಸ್ರವಗಳು ಹೆಚ್ಚುವವು.

ಧಮ್ಮಪದ.

XVII] ಮಂಗಳೂರು, ತಾ. ೨೧—೧—೧೯೪೬ [೪೨
೧೪೫೭ ಯುವ ಸಂ। ಪುಷ್ಯ ಬ। ೧೨ ಕುಜವಾರ

ನಮ್ಮ ಡಿಸ್ಟ್ರಿಕ್ಟ್ ಬೋರ್ಡು ಎರಡಾಗಬೇಕು.

ನಮ್ಮ ಆಧಿಪತ್ಯದಲ್ಲಿರುವ ಡಿ॥ ಬೋರ್ಡುಗಳನ್ನು, ಅಲ್ಲಲ್ಲಿನ ವಿದ್ಯಮಾನಗಳನ್ನು ನೋಡಿಕೊಂಡು, ಅದಕ್ಕೆ ತಕ್ಕಂತೆ, ಅವುಗಳನ್ನು ವಿಭಜಿಸಿ, ಪ್ರತ್ಯೇಕಿಸಬೇಕೆಂಬುದರ ಕುರಿತು ಈಗಾಗಲೇ ಪ್ರಸ್ತಾವವೆದ್ದು ಅದು ಸದ್ಯದಲ್ಲಿಯೇ ಒಂದು ಆಕಾರಕ್ಕೆ ಬರುವ ಲಕ್ಷಣಗಳು ತೋರುತ್ತವೆ. ತಾಲೂಕು ಬೋರ್ಡುಗಳು ಡಿ॥ ಬೋರ್ಡಿನಲ್ಲಿ ಸಮಾವೇಶವಾದ ಬಳಿಕ, ಹಲವು ಬಗೆಯ ಸಂದಿಗ್ಧಗಳೊದಗಿ, ಒಬ್ಬ ಪ್ರೆಸಿಡೆಂಟ್, ಒಂದು ಬೋರ್ಡ್, ಒಂದು ಸಿಬಂದಿಗಳಿಂದ ಇಡೀ ಜಿಲ್ಲೆಯ ಕಾರ್ಯವನ್ನು ತೃಪ್ತಿಕರವಾಗಿ ನೆರವೇರಿಸುವುದು ಹಲವು ಜಿಲ್ಲೆಗಳಲ್ಲಿ ಕಷ್ಟವಾಗಿರುವುದೆಂಬುದೇ ಈ ವಿಂಗಡಿಸಿಹಾಕುವ ಯೋಚನೆಗೆ ಒಂದು ಕಾರಣವಾಯಿತೆಂದರೆ ತಪ್ಪಲ್ಲ.

ಈ ಸಂದರ್ಭದಲ್ಲಿ ಮದ್ರಾಸ್ ಸರಕಾರದ ಲೋಕಲ್ ಸೆಲ್ಫ್ ಗವರ್ನ್‌ಮೆಂಟ್ ಶಾಖೆಯವರು, ಡಿಸ್ಟ್ರಿಕ್ಟ್ ಬೋರ್ಡುಗಳನ್ನು ವಿಭಜಿಸುವ ಕುರಿತು ಒಂದು ಚಿಕ್ಕ ಪ್ರಕಟಣಾ ಪತ್ರವನ್ನು ಪ್ರಕಾಶಗೊಳಿಸಿದ್ದಾರೆ; ಹಾಗೂ ಬೊಬ್ಬಿಲಿಯ ರಾಜರೂ ಇದೇ ಕಾರಣ ಒಂದು ಸ್ಟೇಟ್‌ಮೆಂಟನ್ನೂ ಪ್ರಸಿದ್ಧಗೊಳಿಸಿರುತ್ತಾರೆ. ಆಧಿಪತ್ಯದ ಯಾವತ್ತು ಡಿ॥ ಬೋರ್ಡುಗಳ ಹಣಕಾಸಿನ ಸ್ಥಿತಿಗತಿಗಳನ್ನು ಒಂದು ಸ್ವತಂತ್ರ ವಿಚಾರಣಾ ಸಮಿತಿಗೇ ಒಪ್ಪಿಸಬೇಕೆಂದಿರುವ ಈ ಸೂಚನೆಯು, ಹಲವು ಕಾರಣಗಳಿಂದ, ಸೂಕ್ತವೆನ್ನಿಸಿದೆ. ಆದರೆ ಒಂದು ಡಿ॥ ಬೋರ್ಡನ್ನು ಎರಡಾಗಿ ವಿಂಗಡಿಸಬೇಕೇ, ಬೇಡವೇ ಎಂದು ನಿರ್ಣೈಸುವ ಮೊದಲು, ಬರೇ ಆ ಜಿಲ್ಲೆಯ ಆರ್ಥಿಕ ಪರಿಸ್ಥಿತಿಯನ್ನೇ ಅಲ್ಲದೆ, ಆ ಜಿಲ್ಲೆಯ ವಿಸ್ತಾರ, ಜನಸಂಖ್ಯೆ, ಆಡಳಿತದ ಸೌಕರ್ಯ ಇವೇ ಮೊದಲಾದ ಪ್ರಾಮುಖ್ಯವಾದ ಇತರ ಹಲವು ಸಂಗತಿಗಳನ್ನೂ ಪರ್ಯಾಲೋಚನೆಗೆ ತೆಗೆದು ಕೊಳ್ಳುವುದೂ ವಿಹಿತವೆನ್ನಿಸಿದೆ.

ಈಗ ನಮ್ಮ ಜಿಲ್ಲೆಯನ್ನು ಏನು ಮಾಡಬೇಕು? ಈಗಿನಂತೆ ಒಂದೇ ಡಿ॥ ಬೋರ್ಡಾಗಿ ಇರಗೊಡಿಸಬೇಕೇ? ಎರಡಾಗಿ ಮಾಡಬೇಕೇ? ನಮ್ಮ ಅಭಿಪ್ರಾಯದಲ್ಲಿ ಇಷ್ಟು ದೊಡ್ಡ ಜಿಲ್ಲೆಗೆ ಒಂದು ಬೋರ್ಡ್ ಸಾಲದೆಂದೂ, ಎರಡಿದ್ದರೆ ಕ್ಷೇಮವೆಂದೂ ತೋರುತ್ತದೆ. ನಾವು ಒಂದೇ ಬೋರ್ಡ್ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಇಷ್ಟು ಕಾಲ ನೋಡಿದ್ದಾಯಿತು. ಧರ್ಮದ ಚಾಕರಿಯ, ಹಲವು ಕೆಲಸಗಳ, ಕೆಲವು ಗಂಟೆ ಆಫೀಸಿನ ಕಾರ್ಯ ನಿರ್ವಾಹಕ್ಕದ ಬೋರ್ಡ್ ಪ್ರೆಸಿಡೆಂಟರಿಂದ, ಈ ಬೋರ್ಡಿನ ಕೆಲಸ ಕಾರ್ಯಗಳು ಸುಸೂತ್ರವಾಗಿ, ಸಕಾಲದಲ್ಲಿ, ಸಮರ್ಪಕವಾಗಿ ನಡೆಯುತ್ತಿಲ್ಲ. ಅನ್ನುವಾಗ ನಮ್ಮ ಜಿಲ್ಲೆಗೆ ಎರಡು ಬೋರ್ಡುಗಳೇ ಅಗತ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಒಂದು ವೇಳೆ, ಈ ಜಿಲ್ಲೆಯಲ್ಲಿ ಎರಡು ಬೋರ್ಡುಗಳನ್ನು ಸ್ಥಾಪಿಸಲು ಹಣದ ಅಡಚಣಿ ಇರಬಹುದೇನೋ ಎಂಬ ಸಂದೇಹವು ಕೆಲವರಿಗೆ ಬರಬಹುದು; ನಿಜ; ಪ್ರಕೃತ ಈ ಜಿಲ್ಲಾ ಬೋರ್ಡಿನ ಹಣಕಾಸಿನ ಸ್ಥಿತಿಗತಿಯೂ ಚೆನ್ನಾಗಿಲ್ಲವೆಂಬುದೂ ನಿಜ. ಆದರೆ ನಮ್ಮ ಈಗಿನ ಪ್ರೆಸಿಡೆಂಟ್ ಕಲೆಕ್ಟರರು, ಇಂದಿನ ಬೋರ್ಡಿನ ಆರ್ಥಿಕ ಪರಿಸ್ಥಿತಿಯನ್ನು ಬೇಗನೇ ಉತ್ತಮಗೊಳಿಸುವರೆಂಬ ನಂಬಿಕೆ ನಮ್ಮಲ್ಲಿಯೂ ಉಂಟು; ನಮ್ಮ ಜಿಲ್ಲೆಯಲ್ಲಿ ಹಲವರೂ ಹಾಗೆಂದೇ ತಿಳಿದಿರುತ್ತಾರೆ. ಹೀಗಿರುವಲ್ಲಿ ದುಡ್ಡು ಕಾಸಿನ ಅಡಚಣೆಯು ನಮ್ಮ ಜಿಲ್ಲೆಯನ್ನು ಎರಡಾಗಿ ಭಾಗಿಸುವ ಕೆಲಸಕ್ಕೆ ಅಡ್ಡ ಬರಲಾರದು. ಮುಖ್ಯ ಕಡಿವೆ ಖರ್ಚಿನ ಆಡಳಿತವನ್ನು ಸುಲಭದಲ್ಲಿ ಏರ್ಪಡಿಸಿಕೊಳ್ಳಬಹುದು. ಇದರಲ್ಲಿ ದೊಡ್ಡ ಸಂಬಳದ ಅಧಿಕಾರಿಗಳ ತಲೆಗಳೇ ಅಗತ್ಯವಲ್ಲ. ಲೋವರ್ ಗ್ರೇಡಿನ ದೊಡ್ಡ ಅಧಿಕಾರಿಗಳ ಸಮಾವೇಶವಿದ್ದಲ್ಲಿ ಈ ಯೋಜನೆಯು ಸಫಲವಾಗುವುದು ಖಂಡಿತ.

ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿದಲ್ಲಿ,—ಒಬ್ಬ ಪ್ರೆಸಿಡೆಂಟನಿಂದ ಒಂದು ಬೋರ್ಡಿನಿಂದ ಜಿಲ್ಲೆಯ ಯಾವತ್ತು ಕಾರ್ಯಭಾರಗಳನ್ನು ನಿರ್ವಹಿಸುವುದು ಸುಲಭಸಾಧ್ಯವಲ್ಲವೆಂಬುದಕ್ಕೆ ಇನ್ನೂ ಅನೇಕ ದೃಷ್ಟಾಂತಗಳನ್ನು ಕೊಡಬಹುದು. ನಮ್ಮ ಜಿಲ್ಲೆಯಲ್ಲಿ ರೈಲ್ವೆ ಸೌಕರ್ಯವು ಚೆನ್ನಾಗಿಲ್ಲ; ಹೊಳೆ-ನದಿಗಳೋ ಹಲವು; ಮಳೆಗಾಲದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣ ಮಾಡುವುದೆಂದರೆ ಬಹಳ ಕಷ್ಟದ ಮಾತು. ಒಳಪ್ರಾಂತದಲ್ಲಿ ಒಳ್ಳೆಯ ರಸ್ತೆಗಳಿಲ್ಲ. ನಮ್ಮ ಜಿಲ್ಲೆಯಲ್ಲಿರುವ ಸುಮಾರು ೭೦೦ ಬೋರ್ಡ್ ಶಾಲೆಗಳನ್ನೂ, ಇತರ ಸಂಸ್ಥೆಗಳನ್ನೂ ಈಗಿರುವಂತೆ ಸಂದರ್ಶಿಸಿ ಮೇಲ್ವಿಚಾರ ನಡೆಸಬೇಕೆಂದರೆ ಆಗಹೋಗದ ಸಂಗತಿ. ಡಿ॥ ಬೋರ್ಡಿನ ಆಡಳಿತಕ್ಕೆ ಈಗ ಬಂದಿರುವ ಅಪಕೀರ್ತಿಗೆ ಇದೂ ಒಂದು ಪ್ರಬಲ ಕಾರಣವೆನ್ನಬೇಕು. ಹಾಗೂ ಹಿಂದುಮುಂದಿನ ಯೋಚನೆ ಇಲ್ಲದೆ, ಒಂದೇ ಸಮನೆ ಬೀಸುತ್ತಿರುವ ಪಾರ್ಟಿಗಳ ಸ್ಫೂರ್ತಿಯ ಬಿರುಗಾಳಿಯೂ ಬೋರ್ಡನ್ನು ಬುಡದ ವರೆಗೆ ಅಲ್ಲಾಡಿಸುತ್ತಿದೆ ಎಂದೂ ಎನ್ನಬೇಕು.

ಪ್ರತ್ಯೇಕಿಸಿ ವಿಭಾಗಿಸುವಲ್ಲಿ, ನಮ್ಮ ಜಿಲ್ಲೆಯೇ ಪ್ರಥಮ ದ್ದಾಗಬೇಕು. ಹೀಗೆ ವಿಭಾಗಿಸಲ್ಪಟ್ಟ ಆಡಳಿತವು ಇದೇ ಏಪ್ರಿಲ್ ತಾ. ೧ರಿಂದ ನಮ್ಮಲ್ಲಿ ಜ್ಯಾರಿಗೆ ಬರುವಂತಾಗಬೇಕು. ಕುಂದಾಪುರ, ಉಡ್ಪಿ ಮತ್ತೂ ಕಾರ್ಕಳವು ಒಂದು ಡಿ॥ ಬೋರ್ಡಾಗಬೇಕು; ಉಡುಪಿಯೇ ಇದರ ಹೆಡ್ ಕ್ವಾರ್ಟರ್ಸ್. ಇನ್ನು ಉಳಿದ ಮೂರು ತಾಲೂಕುಗಳನ್ನೂ ಸೇರಿಸಿ ಮತ್ತೊಂದು ಡಿ॥ ಬೋರ್ಡಿನ ರಚನೆಯಾಗಬೇಕು; ಮಂಗಳೂರೇ ಇದರ ಹೆಡ್ ಕ್ವಾರ್ಟರ್ಸ್!

ಈ ರೀತಿಯಲ್ಲಿ ಈ ಸೂಚನೆಯು ಆಚರಣೆಗೆ ಬರುವ ಪಕ್ಷದಲ್ಲಿ, ಇಷ್ಟು ದಿನಗಳಿಂದಲೂ ಈಗಲೂ ಮಾತಿಗೆ ಅವಕಾಶ ಕೊಟ್ಟಿರುವ, ಚರ್ವಿತಚರ್ವಣವಾಗುತ್ತಿರುವ ಈ ಬೋರ್ಡಿನ ಅಧ್ಯಕ್ಷರ ಚುನಾವಣೆ ಈಗಲೇ ನಡೆಯಬೇಕಾದುದು ಅಗತ್ಯವಲ್ಲ. ಈ ಚುನಾವಣೆಯು ನಮ್ಮ ಜಿಲ್ಲೆಯಲ್ಲಿ ಎರಡು ಬೋರ್ಡುಗಳು ಏರ್ಪಾಡಾಗುವ ವರೆಗೆ ಕಾಯಬಹುದಾಗಿದೆ. ಅನಾವಶ್ಯಕವಾದ ಕೆಲಸವೂ, ಪಾರ್ಟಿಗಳ ಜಗಳವೂ ಏಕೆ ಬೇಕು?

ಈ ಜಿಲ್ಲೆಯಲ್ಲಿ ವಿಭಜನೆಯುಂಟಾಗಿ, ಎರಡು ಬೋರ್ಡುಗಳು ಸ್ಥಾಪನೆಯಾದ ಬಳಿಕ, ಒಂದು ಮತ್ತೊಂದನ್ನು ವಿೂರಿಸಬೇಕೆಂದು ಉತ್ಸಾಹದಿಂದ ಕೆಲಸ ಸಾಗಿಸುವುದು ಖಂಡಿತ. ನ್ಯಾಯವಿಹಿತವಾದ ಸ್ಪರ್ಧೆಯು ಇಲ್ಲಿಯೂ ಅಪೇಕ್ಷಣೀಯವಾದುದೇ. ಆದುದರಿಂದ ನಮ್ಮ ಕಲೆಕ್ಟರರು ಈ ಹಿತ ಸೂಚನೆಯನ್ನು ತಮ್ಮ ವಿಚಾರಕ್ಕೆ ತಂದುಕೊಂಡು ಈ ಯೋಜನೆಯ ಸಾರ್ಥಿಕ್ಯತೆಗಾಗಿ ಕೆಲಸ ಮಾಡವೆ ಇರಲಾರರೆಂದು ಹಾರೈಸುತ್ತೇವೆ.

ಶ್ರೀ. ಸತ್ಯಮೂರ್ತಿಗಳ ತತ್ತ್ವೋಪದೇಶ.

ಬೋರ್ಡ್ ಅಥವಾ ಮುನಿಸಿಪಾಲಿಟಿಗಳಲ್ಲಿ ಕಂಟ್ರಾಕ್ಟು ಪಡೆಯಲೂ, ಇತರ ನವುಕರಿಗಳನ್ನು ನಿರ್ವಹಿಸಲೂ ಮುಂದೆ ಬರುವವರಲ್ಲಿ, ಯಾರು ದೇಶಕ್ಕಾಗಿ ಕಷ್ಟ ಪಟ್ಟಿರುವರೋ, ಅಂತಹವರಿಗೇ ಮೊದಲು ಮಣೆಯ ಮರ್ಯಾದೆಯನ್ನು ಕಾಂಗ್ರೆಸ್ ಪಕ್ಷವು ಕೊಡುವಂತೆ ಏರ್ಪಡಿಸುವುದು-ಹೀಗೆಂಬ ಅರ್ಥದ ವೊಳಕೈಬಿಣ್ಣೆಯನ್ನು ಈ ಮಹನೀಯರು ಹಚ್ಚಿರುವರು. ಇವರ ಈ ಮಾತೇನೋ ಸಹಜವಾಗಿದೆ. ದೇಶಕ್ಕಾಗಿ ಕಷ್ಟಪಟ್ಟವರಿಗೆ ಕಾಂಗ್ರೆಸಿನವರು ಕೆಲಸ ಕೊಡಬೇಕು; ಕಂಟ್ರಾಕ್ಟ್ ಕೊಡಬೇಕು ಎಂಬುದು ಕಾಂಗ್ರೆಸಿನ ದೃಷ್ಟಿಯಿಂದ ವಿಹಿತವೇ. ಆದರೆ ಬೋರ್ಡಿನ ಮತ್ತೂ ಮುನಿಸಿಪಾಲಿಟಿಗಳ ಕಾಂಗ್ರೆಸಿನ ಸದಸ್ಯರೂ ಹಾಗೆಯೇ 'ದೇಶಕ್ಕಾಗಿ ಕಷ್ಟಪಟ್ಟವರೇ ಆಗಿರಬೇಕು' ಎಂಬ ತತ್ವವನ್ನು ಸತ್ಯಮೂರ್ತಿಗಳೇಕೆ ಬಿಗಿಹಿಡಿದಿಲ್ಲ? ಲಾತಿ ಪೆಟ್ಟು ತಿಂದವರು, ಜೈಲಿಗೆ ಹೋದವರು ಇವರೇ ಬೇರೆ. ಈಗ ಸ್ಥಳೀಯ ಸಂಸ್ಥೆಗಳ ಮೆಂಬರುಗಳಾಗಿ ಒಳನುಗ್ಗಿರುವ 'ಕಾಂಗ್ರೆಸ್ ಮೆಂಬರ್'ರೆಂಬವರೇ ಬೇರೆ. ಒಂದೇ ತತ್ವದಲ್ಲಿ ಆಕಾಶ-ಪಾತಾಳದಷ್ಟು ಭೇದವಿರಲು ಕಾರಣವೇನು?

ಏ ಕಲ್ಯಾಣಪುರ ಶುಗರ್ ಮಿಲ್ಸ್, ಲಿಮಿಟೆಡ್.

ಈ ಸಂಸ್ಥೆಯ ಮಾಹಿತಿಯ ಹಸ್ತಪತ್ರವು ಈ ಸಂಚಿಕೆಯ ಇನ್ನೊಂದೆಡೆಯಲ್ಲಿ ಪ್ರಕಟವಾಗಿರುವದರ ಕಡೆಗೆ ನಾವು ವಾಚಕರ ಗಮನವನ್ನು ಸೆಳೆಯಲೆಳಸುತ್ತೇವೆ. ಪಶ್ಚಿಮ ಕರಾವಳಿಯಲ್ಲಿ, ಇದು ಪ್ರಥಮವಾದ, ಒಂದೇ ಒಂದು ಸಕ್ಕರೆ ಕಾರ್ಖಾನೆಯಾಗಿದ್ದು, ನಮ್ಮ ಜಿಲ್ಲೆಯ ಕಬ್ಬಿನ ವ್ಯವಸಾಯಕ್ಕೆ ಇದರಿಂದ ತುಂಬಾ ಲಾಭವೂ ಪ್ರಯೋಜನವೂ ಉಂಟು. ಸಕ್ಕರೆಯನ್ನು ಇವರು ಆದಷ್ಟು ಬೇಗ ತಯಾರಿಸಿ ನಮ್ಮ ಜಿಲ್ಲೆಗೆ ಒದಗಿಸುವರೆಂದು ನಾವು ಭಾವಿಸುತ್ತೇವೆ. ಮಳೆಗಾಲದಲ್ಲಿ, ಧೂಪದ ಕಾಯಿಯ ಎಣ್ಣೆಯನ್ನು ತೆಗೆಯುವ ಯೋಜನೆಯೂ ಈ ಸಂಸ್ಥೆಗಿದೆ. ಕ್ರಮೇಣ, ಸ್ಪಿರಿಟನ್ನೂ ಇವರೇ ತಯಾರಿಸಬಹುದು. ಅದಕ್ಕೂ ಅನುಕೂಲಗಳುಂಟು. ಅಲ್ಲದೆ ಮೊಲಾಸಸ್‌ಗಳಿಂದ ಗೊಬ್ಬರವನ್ನು ತಯಾರಿಸಬಹುದೆಂದೂ ಇತ್ತೀಚೆಗೆ ಕಂಡುಹಿಡಿಯಲಾಗಿದೆ. ಅಂತೂ ಈ ಸಂಸ್ಥೆಯು ಹಲವು ಬಗೆಯ ವ್ಯಾಪಾರೋದ್ಯಮಗಳನ್ನು ಕೈಕೊಂಡು ಲಾಭದಾಯಕವಾಗುವುದು ನಿಸ್ಸಂದೇಹವು. ಡೈರೆಕ್ಟರ್ ಮಂಡಳಿಯಲ್ಲಿ ನಮ್ಮ ಜಿಲ್ಲೆಯ ಪ್ರಮುಖರೂ ಆಢ್ಯರೂ ಆದ ಮಹನೀಯರಿರುವರು. ನಮ್ಮ ವಾಚಕರು ಈ ಸಂಸ್ಥೆಯನ್ನು ಅಗತ್ಯವಾಗಿ ಸ್ವಹಸ್ತ ಪರಹಸ್ತಗಳಿಂದ ಪ್ರೋತ್ಸಾಹಿಸಲೆಂದು ನಮ್ಮ ಅರಿಕೆ.

ಮಂಗಳೂರು

'ಬಾಂಧವ ಬಳಗ'ದ ವರ್ಷಾವಧಿ ಮಹಾಸಭೆಯು ತಾ. ೨೬ರಲ್ಲಿ ಘಂಟೆ ೪-೩೦ಕ್ಕೆ ಕೆನರಾ ಹೈಸ್ಕೂಲಿನ 'ಭುವನೇಂದ್ರ' ಸಭಾಸದನದಲ್ಲಿ ಶ್ರೀ। ಕಡೆಂಗೋಡ್ಲು ಶಂಕರ ಭಟ್ಟ್, ವಿದ್ವಾನ್‌ರವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಇಲ್ಲಿಯ ಕೆಥೊಲಿಕ್ ಬ್ಯಾಂಕಿನ ಶಾಖೆಯೊಂದು ಸದ್ಯದಲ್ಲಿಯೇ ಉಡುಪಿಯಲ್ಲಿ ತೆರೆಯಲ್ಪಡುವದೆಂದು ತಿಳಿದುಬರುತ್ತದೆ.

'ಪುತ್ತೂರಿನ ಬಾಲವನ'ದ ಪ್ರವೇಶೋತ್ಸವವು ತಾ. ೧೩ರಲ್ಲು ಮಂಗಳೂರು ಗವರ್ನ್‌ಮೆಂಟ್ ಟ್ರೈನಿಂಗ್ ಶಾಲೆಯ ಹೆಡ್ಮಾಸ್ಟರರಾದ ಶ್ರೀ। ಕೆ. ಗೋಪಾಲರಾಯರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರುಗಿತು. ಪುತ್ತೂರು ತಾಲೂಕಿನ ಅನೇಕ ಉಪಾಧ್ಯಾಯರು ಸೇರಿದ್ದರು. ಈ ಬಾಲವನದಲ್ಲಿ ಎರಡು ವರ್ಷಗಳಲ್ಲಿ ಕೋಳಿ ಇತ್ಯಾದಿ ಸಾಕುವದು, ಅಟದ ಗೊಂಬೆಗಳನ್ನು ತಯಾರಿಸುವದು, ಕೃಷಿ ವೊದಲಾದವನ್ನು ಶಾಸ್ತ್ರೀಯವಾಗಿ ಕಲಿಯಬಹುದು. ಸಂಗೀತ, ಕಲೆ, ನೃತ್ಯ, ಹಾಡುಗಾರಿಕೆ, ಅಭಿನಯ ಇವೂ ಕಲಿಸಲ್ಪಡುವುವು. ಈ ಬಾಲವನವು, ಶ್ರೀ. ಶಿವರಾಮು ಕಾರಂತರ ಪರಿಶ್ರಮದ ಫಲವಾಗಿದೆ.

ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಪುರುಷೋತ್ತಮ ತಲವಾರ್ ರವರಿಗೆ ಕೆಲಸ ಕಾಯಂ ಆಗಿ ಪಯ್ಯನೂರು (ಮಲಬಾರ್)ನಿಂದ ವಿಟ್ಲಕ್ಕೆ ವರ್ಗವಾಗಿದೆ.

ಮದ್ರಾಸು ರಿಜಿಸ್ಟ್ರೇಶನ್ ಇಲಾಖೆಯ ಇನ್ಸ್‌ಪೆಕ್ಟರ್ ಜನರಲರಾದ ದಿವಾನ ಬಹದೂರ್ ಬಿ. ವಿ. ಶ್ರೀಹರಿರಾವ್ ನಾಯಿಡುರವರು ತಾರೀಕು ೧೬ರಲ್ಲು ಇಲ್ಲಿಗೆ ಬಂದಿದ್ದು ಉಡುಪಿಯತ್ತ ಕಡೆಗೆ ಸರ್ಕಿಟು ಜೆಳಿಸಿರುವರು. ನಿನ್ನೆ ಮಂಗಳೂರಿಗೆ ಪುನಃ ಮರಳಿರುವರು.

ಎಂ. ಕೆ. ಗುಲಾಮ್ ಮಹಮ್ಮದ್, ಬಿ. ಎ.ಯವರು ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರರಾಗಿ ವರ್ಗಾಯಿಸಲ್ಪಟ್ಟಿರುವರು.

ಇಲ್ಲಿಯ ಅಸಿಸ್ಟಾಂಟ್ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರರಾದ ಡಾ. ಕೆ. ಮಾಧವ ನಾಯಕ್‌ರವರು ರಜೆಯನ್ನು ಪಡೆದಿರುವದರಿಂದ ಅವರ ಸ್ಥಾನಕ್ಕೆ ಡಾ. ಕೆ. ಎಸ್. ವೆಂಕಟಾಚಲ ಅಯ್ಯರ್‌ರವರು ವರ್ಗಾಯಿಸಲ್ಪಟ್ಟಿರುವರು.

ಉಡುಪಿಯ ಪರ್ಯಾಯವು ಕಳೆದ ಶನಿವಾರ ತಾ. ೧೯ರಲ್ಲಿ ಜರುಗಿತು. ಪೇಜಾವರ ಶ್ರೀಶ್ರೀಗಳು ಪರ್ಯಾಯಪಟ್ಟವೇರಿದರು. ಆದರೆ ಈ ಸಲ ಒಂದು ವಿಚಿತ್ರ ಸಂಗತಿಯು ನಡೆಯಿತು. ಪರ್ಯಾಯ ಮಠದ ಕಡೆಯಿಂದ, ಬಡಗ ಮಾಳಿಗೆಯ ಪರ್ಯಾಯ ಸಭೆಯ ಪ್ರವೇಶಕ್ಕಾಗಿ, ನೂರಾರು ಟಿಕೇಟುಗಳನ್ನು ಧಾರಳವಾಗಿ ಹಂಚಿದ್ದರು. ಆದರೆ ಟಿಕೆಟ್ ಪಡೆದವರು ಮಠದ ಬಾಗಿಲ ಬಳಿಗೆ ಬಂದ ಕೂಡಲೇ ಪೋಲೀಸರು 'ಟಿಕೆಟ್ ಇದಲ್ಲ; ಸ್ಪೆಶಲ್ ಟಿಕೇಟ್ ತೋರಿಸಿ' ಎನ್ನುತ್ತಿದ್ದರು. ಅಂದರೆ ಸ್ಪೆಶಲ್ ಟಿಕೆಟಿನವರನ್ನು ಮಾತ್ರ ಒಳ ಬಿಡುವಂತೆ ಆಜ್ಞೆ. ಇದರಿಂದ ಆತ್ಮಾಭಿಮಾನವುಳ್ಳ ಅನೇಕ ಮಂದಿ ಯೋಗ್ಯ ಗೃಹಸ್ಥರು ಈ ಟಿಕೇಟುಗಳ ಗುಟ್ಟನ್ನು ತಿಳಿಯಲಾರದೆ, 'ಸ್ಪೆಶಲ್ ಟಿಕೇಟಿನ' ಹಂಚಿಕೆಯನ್ನು ಆರಿಯದೆ, ಈ ಟಿಕೇಟಿನಿಂದ ಒಳಗೆ ಪ್ರವೇಶಿಸಲಾರದೆ, ಕಡು ನೊಂದುಕೊಂಡು ಹಾಗೇ ಹಿಂದಿರುಗಿದರು. ಪರ್ಯಾಯದ ಆರಂಭದಲ್ಲಿಯೇ ಇಂತಹ ಅವ್ಯವಸ್ಥೆಯಿಂದ ಅನೇಕ ಮಂದಿ ಯೋಗ್ಯರನ್ನು ಅವಮಾನಿಸಲು ಹೊರಟ ಈ ಕಾರ್ಯಭಾರದ ಜವಾಬುದಾರಿ ಯಾರದು? ಸಂಬಂಧಪಟ್ಟವರು ತಿಳಿಸಲಾರರೇ? ಎಂದು ಒಂದು ಬಾತ್ಮಿ.

ಸ್ಥಳೀಯ ಶ್ರೀಕೃಷ್ಣಾ ಸಿನೆಮಾದಲ್ಲಿ ಈಗ 'ಜವಾನಿ-ಕಿ-ಹವಾ' ಎಂಬ ಅತ್ಯಾಧುನಿಕ ಹಿಂದೀ ಚಿತ್ರವು ಪ್ರದರ್ಶಿತವಾಗುತ್ತಲಿದೆ. ಇದರ ಕಥಾವಸ್ತುವೂ, ಅಭಿನಯವೂ ದೃಶ್ಯಾವಳಿಗಳೂ ಉತ್ತಮವಾಗಿವೆ.

ಪ್ರೆಸಿಡೆನ್ಸಿ ಪೋರ್ಟ್ ಆಫೀಸರರಾದ ಕೆಪ್ಟನ್ ಬಿ. ಗೋರ್ಡನ್ ರವರು ಆದಿತ್ಯವಾರ ದಿವಸ ಇಲ್ಲಿಗೆ ಬಂದಿರುತ್ತಾರೆ.

ಕಳೆದ ಸೋಮವಾರ ಸಂಜೆ ಕಾಂಗ್ರೆಸ್ ಆಫೀಸಿನಲ್ಲಿ ಸೇರಿದ ಕಾಂಗ್ರೆಸ್ ಪಕ್ಷದ ಡಿ॥ ಬೋ॥ ಮೆಂಬರರ ಸಭೆಯಲ್ಲಿ ಈ ಕೆಳಗಿನ ಠರಾವುಗಳು ಮಂಜೂರಾದುವು. (೧) ಶ್ರೀ.ಗಳಾದ ಎಂ. ಶಿವರಾಯರು ಲೀಡರು; ಡಾ. ವಿಟ್ಠಲ ಶೆಟ್ಟರು ಡೆಪ್ಯುಟಿ ಲೀಡರು; ಬಿ. ವೈಕುಂಠ ಬಾಳಿಗರು ವಿಪ್; ಶಿವರಾಯರು ಬೋರ್ಡ್ ಪ್ರೆಸಿಡೆಂಟರಾಗಕೂಡದು; ವೈಸ್ ಪ್ರೆಸಿಡೆಂಟರಾಗಬಹುದು ಎಂದೂ; ಬೋರ್ಡ್ ಪ್ರೆಸಿಡೆಂಟರನ್ನು ಆರಿಸಲು ಇದುವರೆಗೆ ವೋಟಿಂಗ್ ಕರೆಯದ ಸಂಬಂಧ ಇಂದಿನ ಬೋರ್ಡ್ ವೋಟಿಂಗಿನಲ್ಲಿ ಆಕ್ಷೇಪಿಸಬೇಕೆಂದೂ; ವೋಟಿಂಗಿನ ಕಾರ್ಯಗಳನ್ನು ಮುಂದುವರಿಸಬೇಕೆಂದೂ; ಕೂಡಲೇ ಆಧ್ಯಕ್ಷರ ಚುನಾವಣೆಗೆ ವೋಟಿಂಗನ್ನು ಕರೆಯಬೇಕೆಂದೂ, ಈ ಮೂರು ಸೂಚನೆಗಳಿಗೂ ಪ್ರೆಸಿಡೆಂಟರೊಪ್ಪದಿದ್ದರೆ ಇಂದಿನ ಕಾರ್ಯಕ್ರಮಗಳನ್ನು ಎದುರಿಸಬೇಕೆಂದೂ, ಈ ಠರಾವುಗಳನ್ನು ಡಾ॥ ವಿಠಲ ಶೆಟ್ಟರು ಮುಂದೆ ತರಬೇಕೆಂದೂ ನಿರ್ಣಯವಾಯಿತ.

ಮಂಗಳೂರು ಬಂದರಿನಲ್ಲಿ ಸ್ಟೀಮರುಗಳು.

ಬಿ. ಎಸ್. ಎನ್. ಕಂಪೆನಿಯವರ ಎಸ್. ಎಸ್. ದಯಾವತಿಯು ಸೋಮವಾರ ಪ್ರಾತಃಕಾಲ ಮುಂಬಾಯಿಯಿಂದ ಬಂದು ಇಂದು ಪ್ರಾತಃಕಾಲ ೯ ಗಂಟೆಗೆ ಹಿಂತಿರಳಿತು. ಎಸ್. ಎಸ್. ಪಾರ್ವತಿಯು ಗುರುವಾರ ಪ್ರಾತಃಕಾಲ ಬಂದು, ಅದೇ ರಾತ್ರಿ ಕಲ್ಲಿಕೋಟೆಗೆ ತೆರಳಿ, ಶುಕ್ರವಾರ ರಾತ್ರಿ ಅಲ್ಲಿಂದ ಮರಳಿ ಶನಿವಾರ ಪ್ರಾತಃಕಾಲ ೧೦ ಘಂಟೆಗೆ ಮುಂಬಾಯಿಗೆ ಹಿಂತಿರುಗುವದು.

ಹಿಂದೂದೇಶ

ರಿಜರ್ವ್ ಬ್ಯಾಂಕಿನ ಬರ್ಮಾ ಬೋರ್ಡಿನ ಅಧ್ಯಕ್ಷರಾಗಿ ಮಿ. ಎಸ್. ಟಿ. ಸದಾಶಿವನ್, ಎಮ್. ಏ. ಯವರು ಸರ್ವಾನುಮತದಿಂದ ಆರಿಸಲ್ಪಟ್ಟಿರುವರು.

ಶ್ರೀರಂಗದ ವೈಕುಂಠ ಏಕಾದಶಿ ಉತ್ಸವಕ್ಕೆ ಹಿಂದೂಸ್ಥಾನದ ನಾನಾ ಭಾಗಗಳಿಂದ ಅನೇಕ ಯಾತ್ರಿಕರು ಬಂದಿದ್ದರು. ರೈಲ್ವೆಯವರ ವ್ಯವಸ್ಥೆಯು ಅತ್ಯುತ್ತಮವಾಗಿತ್ತು.

ಬೆಜವಾಡದ ಕಾಂಗ್ರೆಸು ಕಮಿಟಿಯ ಕಚೇರಿಯಲ್ಲಿ ಶ್ರೀ.ಗಳಾದ ಕೆ. ನಾಗೇಶ್ವರರಾಯರ ಮತ್ತು ಏ. ಕಾಲೇಶ್ವರರಾಯರ ಭಾವಚಿತ್ರಗಳು ದೇಶಭಕ್ತ ಕೊಂಡ ವೆಂಕಟಪ್ಪಯ್ಯನವರಿಂದ ಅನಾವರಣ ಮಾಡಲ್ಪಟ್ಟುವು.

ಕೊಚ್ಚಿನ್ ಕೆಥೊಲಿಕರ ಕಾನ್ಫರೆನ್ಸಿನ ಅಧ್ಯಕ್ಷತೆಯನ್ನು ರಾಜ ಕಾರ್ಯಪ್ರವೀಣ ಪಿ. ಜಿ. ಡಿ'ಸೋಜರವರು ವಹಿಸಿದ್ದರು.

ಮದ್ರಾಸಿನ ವ್ಯಾ. ಡಬ್ಲ್ಯು. ಸಿ. ಏ.ಯ ನೇತೃತ್ವದಲ್ಲಿ ಶ್ರೀ. ಬಿ. ಎಸ್. ನಿರೋಡಿಯವರು ಗಿಡಗಳ ಬೆಳವಣಿಗೆಯ ಆಧುನಿಕ ಕ್ರಮಗಳ ಮೇಲೆ ಭಾಷಣವನ್ನಿತ್ತರು.

ಚಂದ್ರಗ್ರಹಣದ ದಿನ ಬನಾರಸಿನಲ್ಲಿ ತುಂಬಾ ಯಾತ್ರಿಕರು ನೆರೆದಿದ್ದರು.

ನಾಗ್ಪೂರಿನ ಹೊಸ ಹೈ ಕೋರ್ಟು ಅಲ್ಲಿಯ ಗವರ್ನರರವರಿಂದ ತೆರೆಯಲ್ಪಟ್ಟಿತು.

ಮದ್ರಾಸು ವಾಶರ್‌ಮ್ಯಾನ್‌ಪೇಟೆಯ ಗವರ್ನಮೆಂಟ್ ಇಂಡಸ್ಟ್ರಿಯಲ್ ಇಂಜಿನಿಯರಿಂಗ್ ವರ್ಕ್‌ಶಾಪಿನ ಕೆಲಸಗಾರರು ತಾ. ೯ರಲ್ಲು ಸತ್ಯಾಗ್ರಹವನ್ನಾಚರಿಸಿ ಮರುದಿನ ಕೆಲಸಕ್ಕೆ ಹಿಂತಿರುಗಿದರು.

ಲಾಹೋರಿನಲ್ಲಿ ನಡೆದ ಮೂರನೇ ಟೆಸ್ಟ್ ಮ್ಯಾಚಿನಲ್ಲಿ ಮೇಜರ್ ಸಿ. ಕೆ. ನಾಯಿಡುರವರು ಭಾಗ ವಹಿಸಿರುವುದಿಲ್ಲ. ಇದರಲ್ಲಿ ಭಾರತೀಯರು ಗೆದ್ದಿರುವರು.

ಲಿಂಬ್ಡಿ ಸಂಸ್ಥಾನದ ಶ್ರೀ ದೌಲತ್ ಸಿಂಹ್ಜಿ ಸೇತುವೆಯನ್ನು ವ್ಯಾಸರಾಯರವರು ತೆರೆದರು.

ನೈಜಾಂರವರ ರೌಪ್ಯೋತ್ಸವದ ಸಂಬಂಧವಾಗಿ ಪಬ್ಲಿಕ್ ಗಾರ್ಡನ್ಸ್‌ನಲ್ಲಿ ಒಂದು ಪ್ರದರ್ಶನದ ಏರ್ಪಾಡಾಗಿದೆ. ಇದು ಫೆಬ್ರವರಿ ತಾ. ೨೪ರಿಂದ ಒಂದು ತಿಂಗಳ ವರೆಗೆ ನಡೆಯುವುದು.

ಮುಂಬಾಯಿ ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ಫೆಬ್ರವರಿ ತಾ. ೧೭ರಲ್ಲು ಆರಂಭವಾಗುವದು. ಈ ಅಧಿವೇಶನದ ಮುಂಬಾಯಿ ಪ್ರಾಂತ್ಯದ ಹಾಗೂ ಹೊಸತಾಗಿ ಮಾಡಲ್ಪಡುವ ಸಿಂಧ ಪ್ರಾಂತ್ಯದ ಹೀಗೆ ಎರಡು ಬಜೆಟುಗಳು ಚರ್ಚಿಸಲ್ಪಡುವವು.

ಲಕ್ನೊ ಕಾಂಗ್ರೆಸ್ ಅಧಿವೇಶನದ ಸಂಬಂಧವಾಗಿ ಸ್ವಯಂಸೇವಕರ ತರಬೇತಿಯ ಏರ್ಪಾಡು ಅಲ್ಲಿಯ ಕಾಂಗ್ರೆಸ್ ನಗರದಲ್ಲಿ ನಡೆಯುತ್ತಿದೆ. ಡಾ. ಹರ್ಡಿಕರರು ಇತರ ೫ ಮಂದಿ ಶಿಕ್ಷಕರೊಡನೆ ಈ ತರಬೇತಿಯನ್ನು ನಡಿಸುವರು.

ಮನ್ನಾರಗುಡಿ ತಾಲೂಕಿನಲ್ಲಿ ಕಾಲರಾ ರೋಗವು ತಲೆದೋರಿದೆ.

ಬಜೆಟು ಅಂದಾಜಿನಲ್ಲಿ ಊಹಿಸಿದುದಕ್ಕಿಂತಲೂ ಹೆಚ್ಚಾಗಿ ರೈಲ್ವೆ ಬಜೆಟಿನಲ್ಲಿ ಕಡಿಮೆಯು ಕಂಡುಬರಬಹುದಾಗಿ ಎಣಿಸಲ್ಪಟ್ಟಿದೆ.

ಲಾಹೋರಿನ ಹಳ್ಳಿಯೊಂದರ ಧರ್ಮಶಾಲೆಯ ಮಹಂತನು ಖೂನಿ ಮಾಡಲ್ಪಟ್ಟಿರುವನು. ಇದಕ್ಕೆ ಮೂವರು ಸಿಕ್ಖರು ಕಾರಣರಂತೆ.

ಮುಂಬಾಯಿಯಲ್ಲಿ ಪ್ರೊಗ್ರೆಸಿವ್ ಯುರೋಪಿಯನ್ ಗ್ರೂಪಿನವರ ಮುಂದೆ ಭಾಷಣನೀಯುತ್ತಾ ಸರ್ ಹೋಮಿ ಮೋದಿಯವರು ಭಾರತದಲ್ಲಿರುವ ಐರೋಪ್ಯರ ರಾಜಕೀಯ ದೃಷ್ಟಿಯಲ್ಲಿ ತುಂಬಾ ಬದಲಾವಣೆಯಾಗಬೇಕೆಂದು ನುಡಿದರು.

ಬಂಗಾಲ ನ್ಯಾಯವಿಧಾಯಕ ಸಭೆಯು ಮುಂದಿನ ಬಜೆಟ್ ಅಧಿವೇಶನವು ೧೨—೨—'೩೬ರಲ್ಲು ಕೂಡುವದು.

ಕಾಂಗ್ರೆಸ್ ಪಕ್ಷದವರಾದ ಚೌಧುರಿ ಕಾಲಿಕಾ ಉಜ್ಜಮಾನ್‌ರವರು ಲಕ್ನೊ ಮುನ್ಸಿಪಲ್ ಬೋರ್ಡಿನ ಅಧ್ಯಕ್ಷರಾಗಿ ಮೂರನೆಯ ಬಾರಿ ಆರಿಸಲ್ಪಟ್ಟಿರುವರು.

ಮುಂಬಾಯಿಯಲ್ಲಿ ಇಸ್ಟರಿನಲ್ಲಿ ಜರುಗತಕ್ಕ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧಿವೇಶನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಆರ್. ಎಸ್. ಖಂಬ್ಕರ್‌ರವರು ಆರಿಸಲ್ಪಟ್ಟಿರುವರು.

ಮುಂಬಾಯಿ ಪ್ರಾಂತಿಕ ಸಹಕಾರಿ ಬ್ಯಾಂಕ್ ಲಿಮಿಟೆಡ್ ಬ್ಯಾಂಕಿನ ಆರಂಭೋತ್ಸವವು ಅಲ್ಲಿಯ ಗವರ್ನರರಿಂದ ನೆರವೇರಿಸಲ್ಪಟ್ಟಿತು.

ಮಹಾತ್ಮಾಜಿಯವರು ಮುಂಬಾಯಿಗೆ ತೆರಳಿ ಅಲ್ಲಿ ಸ್ವಲ್ಪ ದಿನಗಳಿದ್ದ ಮೇಲೆ ಅಹಮದಾಬಾದಿಗೆ ಹೋಗಬಹುದಾಗಿ ತಿಳಿದುಬಂದಿದೆ. ಅವರ ಇನ್ನೂ ಕೆಲವು ಹಲ್ಲುಗಳನ್ನು ತೆಗೆಯಬೇಕಾಗಿ ಡಾಕ್ಟರರ ಅಭಿಪ್ರಾಯವಿದ್ದು ಇದನ್ನು ಪ್ರಾಯಶಃ ಮುಂಬಾಯಿಯಲ್ಲಿ ತೆಗೆಯಬಹುದು.

ಗುರುದ್ವಾರದೊಳಗೆ ಪ್ರವೇಶಿಸಿದುದಕ್ಕಾಗಿ ಲಾಹೋರಿನ ಮ್ಯಾಜಿಸ್ಟ್ರೇಟರು ೫೦ ವರ್ಷ ಪ್ರಾಯದ ಒಬ್ಬ ಮುಹಮ್ಮದೀಯನಿಗೆ ೬ ತಿಂಗಳ ಶಿಕ್ಷೆಯನ್ನು ವಿಧಿಸಿರುವರು.

ಲಾಹೋರಿನ ಒಬ್ಬ ಪೋಲೀಸ್ ಕಾನ್‌ಸ್ಟೇಬಲನು ಕಳವಿನ ಅಪಾದನೆಯ ಮೇಲೆ ಕೈದಿಗೊಳಗಾಗಿರುವನು.

ಸಿಕಂದರಾಬಾದಿನ ಕೆಲವು ಕಡೆಗಳಲ್ಲಿ ಹೆಳದಿ ವರ್ಣದ ಮಳೆಯು ಹನಿಗಳು ಬೀಳುತ್ತಿವೆಯಂತೆ.

ಮದ್ರಾಸು ಅಧಿಪತ್ಯದ ಜಿಲ್ಲಾ ಬೋರ್ಡು ಅಧ್ಯಕ್ಷರುಗಳ ಮತ್ತು ಉಪಾಧ್ಯಕ್ಷರುಗಳ ಪರಿಷತ್ತು ಮುಂದರಿಸಲಾಗಿದೆ.

ಲೇಡಿ ವಿಲ್ಲಿಂಗ್‌ಡನ್‌ರವರಿಗೆ, ಅವರು ಮಾಡಿರುವ ಸೇವೆಯ ಸ್ಮರಣಾರ್ಥವಾಗಿ ಥೈಲಿಯನ್ನು ಸಮರ್ಪಿಸಬೇಕೆಂದು ಲೇಡಿ ಸರಕಾರ ಮೊದಲಾದ ಮಹಿಳೆಯರಿಂದ ಒಂದು ವಿನಂತಿಪತ್ರವು ಪ್ರಸಿದ್ಧ ಮಹಿಳೆಯರಿಗೆಲ್ಲಾ ಕಳುಹಲ್ಪಟ್ಟಿದೆ.

ಎರ್ನಾಕುಳಮಿನ ವಿದ್ಯುಚ್ಛಕ್ತಿಯ ಪವರ್ ಹೌಸಿನ ಶಂಕುಸ್ಥಾಪನೆಯು ದಿವಾನರಾದ ಸರ್ ಆರ್. ಕೆ. ಷಣ್ಮುಖಂ ಚೆಟ್ಟಿಯವರಿಂದ ಮಾಡಲ್ಪಟ್ಟಿತು.

ಕೊಚ್ಚಿನ್ ಕೋ-ಓಪರೇಟಿವ್ ಲ್ಯಾಂಡ್ ಮೊರ್ಗೆಜ್ ಬ್ಯಾಂಕಿನ ಆರಂಭೋತ್ಸವವು ಮಹಾರಾಜರಾದ ಸರ್ ಶ್ರೀ ರಾಮವರ್ಮರವರಿಂದ ಎರ್ನಾಕುಳಂ ಕಾಲೆಜ್ ಹಾಲಿನಲ್ಲಿ ನಡೆಸಲ್ಪಟ್ಟಿತು.

ಮೊರ್ವಿಯ 'ವಿಲಿಂಗ್ಡನ್ ಸೆಕ್ರಿಟರಿಯೆಟ್' ಎಂಬ ಹೊಸ ಕಟ್ಟಡವನ್ನು ವ್ಯಾಸರಾಯಿಯವರು ತೆರೆದರು.

ಫೆಬ್ರವರಿ ತಾ. ೧೫ಂದ, ಡೆವಾಸ್ ಜೂನಿಯರ್ ಮಹಾರಾಜರ ಸರಕಾರದವರು, ಕೈಗಾರಿಕೆ, ಔದ್ಯೋಗಿಕ ಮತ್ತು ಕಲಾ ಪ್ರದರ್ಶನವೊಂದನ್ನು ೧೪ ದಿನಗಳ ವರೆಗೆ ಜರಗಿಸುವರು.

ರಿಜರ್ವ್ ಬ್ಯಾಂಕಿನ ಸೆಂಟ್ರಲ್ ಬೋರ್ಡು ತಾ. ೧೭ರಲ್ಲು ಕಲ್ಕತ್ತೆಯಲ್ಲಿ ಕೂಡಿತು.

ಮದ್ರಾಸು ಸರಕಾರದವರು ಜಿಲ್ಲಾ ಬೋರ್ಡುಗಳ ವಿಭಾಗವನ್ನು ನಿರ್ಧರಿಸುವದಕ್ಕಾಗಿ ಎಲ್ಲಾ ಬೋರ್ಡುಗಳ ಆರ್ಥಿಕ ಸ್ಥಿತಿಯ ಪರಿಶೋಧನೆಯನ್ನು ಮಾಡಲಿರುವರು.

ಕಳೆದ ಆದಿತ್ಯವಾರ ತಾ. ೧೯ನೇ ರಾತ್ರಿ ಗಂಟೆ ೧೧-೫೫ಕ್ಕೆ ನಮ್ಮ ಸಾರ್ವಭೌಮ ಚಕ್ರವರ್ತಿಗಳು ದಿವಂಗತರಾದರೆಂದು ವಾರ್ತೆ ಬಂದಿದೆ.

ಲಂಡನಿನ ಮಿ. ಫ್ರೆಡ್ರಿಕ್ ವಿಲಿಯಂ ಜಂಟಲ್, ಬ್ಯಾರಿಸ್ಟರ್—ಎಟ್—ಲೊರವರು ಮದ್ರಾಸು ಹೈ ಕೋರ್ಟಿನ ಜಡ್ಜರಾಗಿ ನೇಮಕ ಹೊಂದಿರುವರು.

ಮುಂಬಾಯಿ ಕಾರ್ಪೊರೇಶನಿನವರು ಹೊಸ ವ್ಯಾಸರಾಯಿಯವರಿಗೂ ಒಂದು ಮಾನಪತ್ರವನ್ನರ್ಪಿಸಬೇಕೆಂದು ಬಹುಮತದಿಂದ ನಿರ್ಣಯಿಸಿರುವರು.

ಫ್ಯಾನಾನ್ಸಿಯಲ್ ಎಕ್ಸ್‌ಪರ್ಟರಾದ ಸರ್ ಒಟ್ಟೊ ನೆಯಿಮೇಯರ್‌ರವರು ತಮ್ಮ ಪ್ರೈವೇಟ್ ಸೆಕ್ರಿಟರಿ ಕೆ. ಅಂಡರ್‌ಸನ್‌ರೊಡನೆ ಮುಂಬಾಯಿಯಲ್ಲಿ ಬಂದಿಳಿದಿರುವರು.

ಅಖಿಲ ಭಾರತ ಸ್ಥಳೀಯ ಸಂಸ್ಥೆಗಳ ಪ್ರಥಮ ಸಮ್ಮೇಳನವು ಮಾರ್ಚ್ ತಾ. ೨೮ರಿಂದ ೩೦ ವರೆಗೆ ಢಿಲ್ಲಿಯಲ್ಲಿ ಜರಗುವದು.

ಕಲ್ಕತ್ತೆಯ ನೇಶನಲ್ ಆಯರ್ನ್ ಅಂಡ್ ಸ್ಟೀಲ್ ವರ್ಕ್ಸ್‌ನವರು ಹೊಸ ಸ್ಟೀಲ್ ರೋಲಿಂಗ್ ಮಿಲ್ಲನ್ನು ಬೇಲೂರಿನಲ್ಲಿ ತೆರೆದಿರುತ್ತಾರೆ.

ಪಾರ್ಲಿಮೆಂಟಿನ ಮಾಜಿ ಮೆಂಬರರಾದ ಶಾಪೂರ್ಜಿ ಸಕ್ಲಾತ್ವಾಲಾರವರು ಲಂಡನಿನ ತಮ್ಮ ಗೃಹದಲ್ಲಿ ಹೃದ್ರೋಗದಿಂದ ಮೃತರಾದರು.

ಕ್ವೆಟ್ಟಾದಲ್ಲಿ ತಾ. ೧೬ನೇ ಪ್ರಾತಃಕಾಲ ಸುಮಾರು ಆರು ಸೆಕುಂಡುಗಳ ಕಾಲ ಭೂಕಂಪವಿದ್ದಿತು. ಆದರೆ ವಿಶೇಷವೇನೂ ಹಾನಿಯಾಗಿಲ್ಲ.

ಮದ್ರಾಸು ನ್ಯಾಯವಿಧಾಯಕ ಸಭೆಯ ಅಧಿವೇಶನವು ಇದೇ ತಾ. ೨೭ರಲ್ಲು ಆರಂಭವಾಗುವದು. ಸುಮಾರು ಹತ್ತು ದಿನಗಳ ವರೆಗೆ ನಡೆಯುವದು. ಜನವರಿ ತಾ. ೨೯ರಲ್ಲು ಮತ್ತು ಫೆಬ್ರವರಿ ತಾ. ೫ರಲ್ಲು ಬಿನ್ ಸರಕಾರೀ ಪ್ರಶ್ನೆಗಳು ಇತ್ಯರ್ಥಿಸಲ್ಪಡುವುವು.

ಕರಾಚಿ ಜೈಲಿನೊಳಗೆ ವಾರ್ಡರುಗಳೊಳಗೆ ನಡೆದ ಕಾದಾಟದಲ್ಲಿ ಒಬ್ಬ ಹಿಂದೂ ಪೋಲೀಸಿನವನು ಆಸ್ಪತ್ರೆಯಲ್ಲಿ ಮೃತನಾಗಿರುವನು.

ಮಹಾತ್ಮಾ ಗಾಂಧಿಯವರು ತಾ. ೧೬ನೇ ಮಧ್ಯಾಹ್ನ ಮುಂಬಾಯಿಗೆ ಬಂದು ತಲ್ಪಿರುವರು. ಅವರು ವಾರ್ಡನ್ ರೋಡಿನಲ್ಲಿರುವ ಭೂಲಾಭಾಯಿ ದೇಸಾಯಿಯವರಲ್ಲಿ ಉಳಕೊಂಡಿರುವರು.

ಫೋರ್ಡ್ ಮೋಟರ್ ಕಂಪೆನಿ ಒಫ್ ಇಂಡಿಯಾದವರ ವರದಿ ಪ್ರಕಾರ ೧೯೩೫ರಲ್ಲಿ ಈ ವರೆಗೆ ವಿಕ್ರಿತವಾದುದಕ್ಕಿಂತ ಹೆಚ್ಚಾಗಿ ಫೋರ್ಡ್ ಕಾರುಗಳೂ ಟ್ರಕ್ಕುಗಳೂ ವಿಕ್ರಿತವಾದುವೆಂದು ತಿಳಿದು ಬರುತ್ತದೆ.

ಶ್ರೀ. ಸಿ. ವಿಜಯರಾಘವಾಚಾರಿಯವರು ಗುಣವನ್ನು ಹೊಂದಿದ್ದು ಈಗ ವಿಶ್ರಾಂತಿಯನ್ನು ಪಡೆಯುತ್ತಿದ್ದಾರೆ.

ಕಲ್ಕತ್ತೆಯ ಎರಡು ಜೂಟ್ ಪ್ರೆಸ್ಸುಗಳಲ್ಲಿ ಭಯಂಕರ ಬೆಂಕಿ ಎದ್ದು ಬಹಳವಾದ ಹಾನಿಯುಂಟಾಗಿದೆ.

ಸೇರಾಂಪೂರಿನ ಹೇಸ್ಟಿಂಗ್ಸ್ ಜೂಟ್ ಮಿಲ್ಲಿನ ಸುಮಾರು ೪,೦೦೦ ಮಂದಿ ಕೆಲಸಗಾರರು ಮುಷ್ಕರ ಹಿಡಿದಿದ್ದಾರೆ.

ಗಂಜಾಂ ಜಿಲ್ಲಾ ಬೋರ್ಡಿನ ವಿಭಾಗವು ಇದೇ ತಾ. ೩೦ರಿಂದ ಜಾರಿಗೆ ಬರುವದು.

ಸಿಲೋನಿನ ಅಧಿಕಾರಿಗಳೊಬ್ಬರು ಗುಂಟೂರನ್ನು ಸಂದರ್ಶಿಸಿ ಹೊಗೆಸೊಪ್ಪಿನ ವ್ಯವಸಾಯವನ್ನು ಪರಿಶೀಲಿಸಿ ತೆರಳಿದರು.

ಜೀವವಿದ್ದ ಮಿಸಸ್ಸನ್ನು ನುಂಗಿ ರಂಗೂನ್ ಆಸ್ಪತ್ರೆಯಲ್ಲಿ ೪ ವರ್ಷ ಪ್ರಾಯದ ಒಬ್ಬ ಹುಡುಗನು ಮೃತನಾದನು.

ಕಲ್ಲಿಕೋಟೆಯ ಗೌಡಸಾರಸ್ವತ ಯುವಜನ ಸಂಘದ ೫ನೇ ವಾರ್ಷಿಕೋತ್ಸವವು ಗಣಪತಿ ಹೈ ಸ್ಕೂಲಿನಲ್ಲಿ ಶ್ರೀ. ಎಮ್. ಎಸ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರುಗಿತು.

ಕೆಲಸದ ಫರಿಮಿತಿಯು ಕಡಿಮೆಯಾಗಿರುವುದರಿಂದ ಮುಂಬಾಯಿ ಜಿ. ಐ. ಪಿ. ರೈಲ್ವೆ ಫೌಂಡ್ರಿ ಶಾಪಿನ ೬೦೦ ಮಂದಿ ಕೆಲಸಗಾರರು ಒಂದು ತಿಂಗಳ ರಜೆಯ ಮೇಲೆ ಹೋಗಬೇಕಾಗಿದೆ.

ತಾ. ೧೧ಕ್ಕೆ ಅಂತ್ಯವಾದ ವಾರಕ್ಕೆ ಮುಂಬಾಯಿಯಿಂದ ರೂ. ೮೯,೦೯,೬೦೯ ಮೌಲ್ಯದ ಭಂಗಾರವು ಯುರೋಪ್ ಮತ್ತು ಅಮೇರಿಕಾಕ್ಕೆ ಕಳುಹಿಸಲ್ಪಟ್ಟಿತು. ಈ ವರೆಗೆ ಕಳುಹಿಸಲಾದ ಭಂಗಾರದ ಮೌಲ್ಯ ರೂ. ೨,೫೮,೯೯,೬೪೪.

ಕರ್ಫಾಣ ಸಂಬಂಧದಿಂದ ಈ ವರೆಗೆ ಸುಮಾರು ೯೦ ಮಂದಿ ಸಿಕ್ಖರು ಕೈದು ಮಾಡಲ್ಪಟ್ಟಿರುವರು.

ಭವಾಲ್ಪೂರಿನಲ್ಲಿ ೬ ಹಿಂದೂ ಮುಖಂಡರನ್ನು ಕೈದು ಮಾಡಿದುದರಿಂದಾಗಿ ಅಲ್ಲಿಯ ಹಿಂದೂಗಳು ಹರತಾಳವನ್ನಾಚರಿಸಿದರು.

ಲಾಹೋರಿನಲ್ಲಿ ಒಬ್ಬ ಮುಸ್ಲಿಂ ಯುವಕನನ್ನು ತಿವಿದುದಕ್ಕಾಗಿ ಒಬ್ಬ ಹಿಂದೂವನ್ನು ಕೈದುಮಾಡಿರುವರು.

ಜಪಾನಿನ ಪ್ರಸಿದ್ಧ ಪಿಟೀಲು ಬಾರಿಸುವವನಾದ ಟಿ. ಮಾಸುವು ಹಿಂದೀ ಸಂಗೀತವನ್ನು ಕಲಿಯುವುದಕ್ಕಾಗಿ ವಿಶ್ವ ಭಾರತಿಗೆ ಸೇರಿರುವನು.

ಡಾ. ಕೈಲಾಸನಾಥ ಕಾಟ್ಜುರವರು ಅಲಹಾಬಾದ್ ಮುನಿಸಿಪಲ್ ಬೋರ್ಡಿನ ಚೆಯರ್‌ಮ್ಯಾನರಾಗಿ ಬಹುಮತದಿಂದ ಆರಿಸಲ್ಪಟ್ಟಿರುವರು.

ಅಸೆಂಬ್ಲಿ ಮೆಂಬರರಾದ ಮಿ. ಅತುಲೇಂದ್ರನಾಥ ಚಾಟರ್ಜಿಯವರು ಮಿಡ್ನಾಪುರ ಜಿಲ್ಲೆಯಲ್ಲಿ ಸಾರ್ವಜನಿಕ ಭಾಷಣಗಳನ್ನು ಕೊಡಬಾರದಾಗಿ ಅಲ್ಲಿಯ ಜಿಲ್ಲಾ ಮ್ಯಾಜಿಸ್ಟ್ರೇಟರು ಅವರಿಗೆ ನೋಟೀಸು ಕೊಟ್ಟಿರುವರು.

ಮದ್ರಾಸಿನ ಯುನ್ಯಾಟೆಡ್ ನ್ಯಾಶನಲಿಸ್ಟ್ ಪಾರ್ಟಿಯವರು ಕಾಂಗ್ರೆಸ್ ಪಾರ್ಟಿಯೊಡನೆ ಬೆರೆಯಲ್ಲು ನಿಶ್ಚೈಸಿರುವರು.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ.

O. S. No. 26/1936.

ಲಕ್ಷ್ಮಣ ರಾಜಾ, ಕೃಷ್ಣ ರಾಜರ ಮಗ, ಬೇಡಡ್ಕ ಗ್ರಾಮದಲ್ಲಿರುವವ } **ವಾದಿ.**

ಮತ್ತು

ಕೋಡೋತ್ತ ವಾಳಿಯಕ್ಕಾಲ್ ಕಂಣನ್ನಾರ್, ಕೋರ ನಾಯರ ಅಳಿಯ ಕೋಡೋತ್ತ ತರವಾಡಿನ ಕಾರ್ನವ ಮತ್ತು ಆಡಳ್ತೆದಾರ, ಬಲ್ಲ ಗ್ರಾಮದ ಕೋಟಚ್ಚೇರಿಯಲ್ಲಿರುವವ } **ಪ್ರತಿವಾದಿ.**

ಇವರೊಳಗೆ

ವಾದಿಯು ಪ್ರತಿವಾದಿಯ ತರವಾಡಿನ ಆಗಿನ ಕಾರ್ನವ ಕಣ್ಣ ನಾಯರರಿಗೆ ತಾ. 2—3—'32ರಲ್ಲು ರಿಜಿಸ್ಟ್ರಿ ನಿಶಿಂ ಬರ ಕೊಟ್ಟ ಕ್ರಯಚೀಟಿನಲ್ಲಿ ಹೊಗಳಿಸಿ ಅಮಾನತು ಇಟ್ಟ ಐವೆಜುಗಳನ್ನು ವಾದಿಯು ಸಾಲಗಾರರಿಗೆ ಪ್ರತಿವಾದಿಯ ತರವಾಡಿನಿಂದ ಸಲಕ್ಕಾಯಿಸದಿದ್ದದ್ದರಿಂದ ಅಂಥಾ ಸಾಲದ ಹಣವನ್ನು ನಷ್ಟ ರೂಪವಾಗಿ ವಸೂಲು ಪಡಿಯುವರೆ ವಾದಿಯು ಪ್ರತಿವಾದಿಯ ತರವಾಡಿನ ಮೇಲೆ ದಾಖಲು ಮಾಡಿದ ಸದರಿ ದಾವೆಯು ತಾ. 30—1—1936ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟಿದೆ. ಸದರಿ ದಾವೆಯನ್ನು ಆಕ್ಷೇಪಿಸುವ ಪ್ರತಿವಾದಿಯು ತರವಾಡಿನ ಮೆಂಬರರು ಸದರಿ ದಾವೆಯಲ್ಲಿ ಕಕ್ಷಿಯಲ್ಲಿ ಸೇರಿ ವ್ಯವಹರಿಸಬಹುದಾಗಿ ಈ ಮೂಲಕ ತಿಳಿಸೋಣವಾಗುತ್ತದೆ.

ಕಾಸರಗೋಡು, ತಾ. 20—1—1936. } **C. Rama Rao,** ವಾದಿ ಕಡೆ ವಕೀಲ.

FOR SALE.

One Engine of 15 B. H. P. Horizontal, Ruston Hornsby Semi Diesel Type and a Dynamo D. C. 110 Volts—9 KW., both in good working order.

Intending purchasers may put in their tenders quoting the price for either of them or both to M. R. Ry. M. Annappa Nayak Avl., Managing Trustee, Sri Venkatramana Temple, Mangalore, by the 5th Feb. 1936. The full price money is payable immediately after settlement.

(*By order*)

N. N. Rao.

Manager, Sri Venkatramana Temple, Mangalore.

ತಾಲೂಕು ವರ್ತಮಾನ

ಉಳ್ಳಾಲ:—ಇಲ್ಲಿಯ ಮೊಗವೀರ ಆರ್ಯ ಯುವಜನ ವ್ಯಾಯಾಮ ಸಂಘದ ಪ್ರಥಮ ವಾರ್ಷಿಕೋತ್ಸವವು ಇಲ್ಲಿಯ ಸಮುದ್ರ ಕರೆಯಲ್ಲಿ ಹಾಯಿಗಳಿಂದಲೇ ತಯಾರಿಸಿದ ವಿಶಾಲವಾದ ಚಪ್ಪರದಲ್ಲಿ ಶ್ರೀಮಾನ್ ಬಿ. ಮೋಹನಪ್ಪ ತಿಂಗಳಾಯರ ಅಧ್ಯಕ್ಷತೆಯಲ್ಲಿ ಜರಗಿತು. ಒಂದು ಸಾವಿರಕ್ಕೆಂತ ಹೆಚ್ಚು ಜನಸ್ತೋಮವು ನೆರೆದಿದ್ದ ಈ ಸಭೆಯು ದೇವರ ಪ್ರಾರ್ಥನೆಯಿಂದ ಆರಂಭವಾಗಿ ಸಂಘದ ಸದಸ್ಯರು ವ್ಯಾಯಾಮದಿಂದ ಸಿದ್ಧಿಗೊಳಿಸಿದ ತನ್ನ ವಿವಿಧ ಶಕ್ತಿ ಪ್ರದರ್ಶನಗಳನ್ನು ಮಾಡಿದರು. ತ್ಯಾಂಪ ಪುತ್ರನ್ ಎಂಬ ಯುವಕನ ತನ್ನ ತಲೆ ಕೂದಲಿನಿಂದ ಭಾರವುಳ್ಳ ಒಬ್ಬ ಮನುಷ್ಯನನ್ನು ಎತ್ತುವಿಕೆ, ಕುತ್ತಿಗೆಯ ಸ್ನಾಯುವಿನಿಂದ ಕಬ್ಬಿಣದ ಸರಳನ್ನು ಬಗ್ಗಿಸುವಿಕೆ ಮೊದಲಾದ ಆಟಗಳು ಪ್ರೇಕ್ಷಣೀಯವಾಗಿದ್ದವು. ಈ ಸಂಘದ ಸದಸ್ಯರನ್ನು ತರಬೇತುಗೊಳಿಸಿದ ಶ್ರೀಯುತ ಬೋಳೂರು ಲಕ್ಷ್ಮಣ ಪುತ್ರನ್‌ನವರಿಗೆ ಸಂಘದವರು ಅಧ್ಯಕ್ಷರ ಮೂಲಕ ಒಂದು ಸುವರ್ಣ ಪದಕವನ್ನು ಕೊಡಿಸಿದರು. ಕೆಲವರು ಕಾಲೋಚಿತ ಭಾಷಣಗಳನ್ನು ಕೊಟ್ಟರು. ಅಧ್ಯಕ್ಷರು ದೇಶೀಯ ವ್ಯಾಯಾಮದ ಮಹತ್ವವನ್ನು ಹೇಳಿದರು. ಸಂಘದವರು ಯೋಗ್ಯವಾದ ಒಂದು ವ್ಯಾಯಾಮ ಮಂದಿರವನ್ನು ನಿರ್ಮಿಸಿ ಊರಿನ ಯುವಕರಿಗೆಲ್ಲಾ ವ್ಯಾಯಾಮ ಶಿಕ್ಷಣ ಕೊಡಿಸಬೇಕೆಂದೂ ಊರವರು ಸಂಘದ ಈ ಕಾರ್ಯಕ್ಕೆ ತಮ್ಮ ಶಕ್ತಿ ಮೀರಿ ಸಹಾಯ ಮಾಡಬೇಕೆಂದೂ ಸೂಚಿಸಿದರು.

ಕಾಸರಗೋಡು:—ಸ್ಥಳೀಯ ಪೋಸ್ಟಾಫೀಸಿನ ಬಳಿಯ ಮಾಳಿಗೆಯೊಂದರಲ್ಲಿ ತಾರೀಕು ೧೫ರಲ್ಲು 'ಶ್ರೀ ರಾಮಭಜನಾ ಮಂದಿರ' ಒಂದನ್ನು ತೆರೆದಿರುತರು. ಕೀರ್ತನೆಯು ನವವಿಧ ಭಕ್ತಿಗಳಲ್ಲಿ ಒಂದಾಗಿದ್ದರೂ ಅದರ ಗಲಭೆಯಿಂದ ಅಸುಪಾಸಿನ ನಿವಾಸಿಕರಿಗೆ ನಿದ್ರಾಭಂಗ ವಾಗುತ್ತದೆಂದೂ ಕೆಲವರ ದೂರು.

ಪರ್ಪೆಯ ಮಿಲ್ಲಿನಲ್ಲಿರುವ ಅನೆಯೊಂದು ಅದರ ಮಾಹುತನನ್ನು ಕೊಂದಿರುತ್ತದೆ. ತನ್ನ ಮರಿಗೆ ತೊಂದರೆಯನ್ನು ಕೊಟ್ಟನೆಂಬ ಭಾವನೆಯಿಂದ ಅವನನ್ನು ಮೆಟ್ಟಿ ಕೊಂದಿರುತ್ತದೆಂಬುದಾಗಿಯೂ ನಂತರ ಪಶ್ಚಾತ್ತಾಪ ಪಟ್ಟಂತೆ ಬಹಳ ಹೊತ್ತು ಘೀಳಿಟ್ಟಂತೆಯೂ ತಿಳಿದುಬರುತ್ತದೆ.

ಸುರತ್ಕಲ್:—ಇಲ್ಲಿಯ ಗ್ರಾಮಪಂಚಾಯತ ಕೋರ್ಟು ಅಧ್ಯಕ್ಷರಾದ ಶ್ರೀ. ಯು. ವಾಸುದೇವ ಭಟ್ಟರು ರಾಜೀನಾಮೆ ಕೊಟ್ಟಿರುವುದರಿಂದ ೩ ಮಂದಿ ಉಮೇದುವಾರರುಗಳ ಸ್ಪರ್ಧೆಗಳಲ್ಲಿ ಮಿ|| ಸೈಯದ್ ಅಬ್ದುಲ್ ರಹಿಮಾನ್ ಬ್ಯಾರಿಗಳವರು ಬಹುಮತದಿಂದ ಸದಸ್ಯರಾಗಿ ಚುನಾವಣೆಗೊಂಡಿರುವರು. ಈ ಕೋರ್ಟಿನ ಸದಸ್ಯರಾಗಿ ಮುಂದೆ ಬಂದ ಮುಸಲ್ಮಾನ ಬಂಧುಗಳಲ್ಲಿ ಇವರೇ ಮೊದಲಿಗರು.

ವಾರದ ಭವಿಷ್ಯ

(ನಮ್ಮ ಜ್ಯೋತಿಷಿಗಳಿಂದ)

ಅಕ್ಕಿ:—ತಾ. ೨೨ರ ನಂತರ ಬೆಲೆ ಸ್ವಲ್ಪ ಮಟ್ಟಿಗೆ ಏರಿ ವಾತಾವರಣವು ಆಶಾಜನಕವಾಗಿರುವುದು. **ಬೆಳ್ಳಿ:**—ತಾ. ೨೪ರ ನಂತರ ಸ್ವಲ್ಪ ಮಟ್ಟಿಗೆ ಕುಸಿದು ದುರ್ಬಲತೆಯೂ ನಿರಾಶೆಯೂ ಹುಟ್ಟುವುದು. **ಚಿನ್ನ:**—ಇದರ ಮಾರ್ಕೆಟಿನಲ್ಲಿ ಸ್ವಲ್ಪ ಮಟ್ಟಿಗೆ ಮಂದಿಯು ಬರುವುದು. **ಕಾಫಿ:**—ತಾ. ೨೬ರ ನಂತರ ಆಶಾಜನಕವಾದ ತೇಜಿ ಸಂಭವವು ಉಂಟಾಗುವುದು. **ಏಲಕ್ಕಿ:**—ಸ್ಥಿರವಾದ ಮತ್ತು ಬಲವತ್ತಾದ ಧೋರಣೆಯಿಂದ ತೇಜಿ ಸಂಭವ. **ತೆಂಗಿನೆಣ್ಣೆ:**— ಈ ವಾರದಲ್ಲಿ ಬೆಲೆಯು ಕುಸಿಯುವ ಸಂಭವ. **ಗೇರುಬೀಜ:**—ಪರದೇಶಗಳ ವಾತಾವರಣಗಳಿಂದ ತೇಜಿಯು ಆನಂದಕರವಾಗುವುದು. **ಹತ್ತಿ:**—ತಾ. ೨೨ರ ನಂತರ ಮಂದಿಯು ಸ್ಪಷ್ಟವಾಗಿ ತೋರುತ್ತದೆ. **ಸಾಮಾನ್ಯ ವಿಚಾರ:**—ನಮ್ಮ ಜಿಲ್ಲಾ ಆರೋಗ್ಯವು ದಕ್ಷಿಣ ಭಾಗದಲ್ಲಿ ಸ್ವಲ್ಪ ಮಟ್ಟಿಗೆ ಹಾಳಾಗುವ ಸಂಭವ. ಉತ್ತರ ಭಾಗದಲ್ಲಿ ಜೋರ, ಅಗ್ನಿ ಇವುಗಳ ಭಯ. ಯಾರ ಚಾಂದ್ರಮಾನ ಜನ್ಮತಿಥಿಯು ತಾ. ೨೪ರಲ್ಲಿ ಬರುವುದೋ, ಅಂಥವರಿಗೆ ಬರುವ ವರ್ಷವು ಶ್ರೇಯಸ್ಸನ್ನೂ ಅಭಿವೃದ್ಧಿಯನ್ನೂ ಕೊಡುವುದು.

ಮಾ|| ರಾ|| ಮೂಡಬಿದ್ರೆ ಸರ್ಕಲಿನ ಜಿಲ್ಲಾ ಬೋರ್ಡು ಓಟರರ ಪರಾಂಬರಿಕೆ ಬಗ್ಗೆ.

ಈ ಸಲ ನಡೆದ ಜಿಲ್ಲಾ ಬೋರ್ಡು ಮೆಂಬರರ ಚುನಾವಣೆಯಲ್ಲಿ ನಾನು ನಿಮ್ಮೆಲ್ಲರ ಸಹಾನುಭೂತಿಯಿಂದ ಬಹುಮತ ಪಡೆದು ಜಯಶೀಲನಾಗಿರುವ ಸಂಗತಿ ನಿಮಗೆ ಈ ಮೊದಲೇ ಗೊತ್ತಿರಬಹುದು. ಜಿಲ್ಲಾ ಬೋರ್ಡಿನ ಚುನಾವಣೆ ಸಂಬಂಧ ಜನ್ಮವೆತ್ತಿದ ಕೊಂಗ್ರೆಸ್ ಬೋರ್ಡಿನಿಂದ ಕಾರ್ಕಳ ಸರ್ಕಲಿಗೆ ಆರಿಸಲ್ಪಟ್ಟ ಕಾರ್ಕಳ ವಕೀಲರ ಸಂದಣಿಯಲ್ಲಿ ಅಗ್ರಗಣ್ಯರೆನಿಸಿದ, ಈ ವರ್ಷ ಕಾಂಗ್ರೆಸಿಗೆ ಸೇರಿದ ಮತ್ತು ರಾಷ್ಟ್ರ ಸೇವಾದೀಕ್ಷೆ ಹಿಡಿದ ಮಾ|| ರಾ|| ಕೆ. ಸದಾಶಿವ ಭಟ್ಟರ ಹಿತೋಪದೇಶವನ್ನು ಮನ್ನಿಸದೆಯೂ; ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರಾದ, ಬಂಟರ ವ ನಾಡವರ ಶ್ರೇಯೋಭಿವೃದ್ಧಿಯ ಆಳಿಯ ಸಂತಾನ ಬೀಳಿನ ಜನಕರಾದ, ಜಿಲ್ಲಾ ಬೋರ್ಡಿನ ಚುನಾವಣೆಯಲ್ಲಿ ಕೊಂಗ್ರೆಸಿನ ಪಕ್ಷಪಾತಿಯಾದ ಮಾ|| ರಾ|| ಅತ್ತಾವರ ಬಾಲಕೃಷ್ಣ ಶೆಟ್ಟರ ಪ್ರಚಾರಕಾರ್ಯವನ್ನು ಲಕ್ಷಿಸದೆಯೂ; ಈ ಇಲೆಕ್ಷನಿನ ಸಂಬಂಧ ಮದ್ರಾಸಿನಿಂದ ಆಮಂತ್ರಿಸಿದ ರಾಷ್ಟ್ರೀಯ ಕೂಟದ ಪ್ರಮುಖ ಮೆಂಬರರಾದ ರಾ|| ಸತ್ಯಮೂರ್ತಿಯವರನ್ನು ಮೂಡಬಿದ್ರಿ ಪ್ರಯಾಣಿಕರ ಬಂಗ್ಲೆಯಿಂದ ಬೇಂಡು ವಾಲಗ, ಪೆಟ್ರೊಮೆಕ್ಸ್ ಲೈಟು ವಗೈರೆ ಸರ್ವ ಬಿರುದಾವಳಿಯಿಂದಲೂ, ನಮ್ಮ ಊರ ದೇಶಭಕ್ತರು ಮಾ|| ರಾ||ಗಳಾದ ರಾಮಕೃಷ್ಣ ಪೂಂಜರು, ಸ್ವರಾಜ್ಯ ಪಕ್ಷದ ಉಮೇದ್ವಾರಿ ಪುತ್ತಿಗೆ ಗುತ್ತಿನ ಕಡಂದಲೆ ಪರಾರಿ ಕರಿಯಂಗಳ ಮುತ್ತಯ್ಯ ಶೆಟ್ಟರು, ನಾರಾಯಣ ಕಿಲ್ಲೆಯರು ಮುಂತಾದ ರಾಷ್ಟ್ರ ಕೂಟದ ಪ್ರಮುಖರನ್ನು ಹೊತ್ತು ಎಡೆಬಿಡದೆ ಸಾಲುಸಾಲಾಗಿ ಚಲಿಸುವ ಮೋಟ್ಟಾರು ವಾಹನಗಳ ತುತೂರಿಯ ಧ್ವನಿಯ ರಭಸದಿಂದಲೂ, ಒಂದೆಡೆ ಗಾಂಧಿ ಕೀ ಜೈ ಎಂತಲೂ ಮಗದೊಂದು ಪಾರ್ಶ್ವ ಇಂಕಿಲಾಬ್ ಜಿಂದಾ ಬಾದ್ ಎಂಬ ಜಯಘೋಷದಿಂದಲೂ ಮೂಡಬಿದ್ರೆ ಚೌಟರ ಅರಮನೆಯ ಎದುರಿನ ಮೈದಾನವು ಕಿಕ್ಕಿರಿದ ಜನಸ್ತೋಮದ ಮುಂದೆ ಅಗ್ರಾಸನವನ್ನು ಅಲಂಕರಿಸಿದ ದೇಶಭಕ್ತ ಶ್ರೀಯುತ ಸತ್ಯಮೂರ್ತಿಯವರು ಎದ್ದು ನಿಂತು ರಾಷ್ಟ್ರ ಕೂಟದ ಕಡೆಯ ಉಮೇದ್ವಾರಿ ಶ್ರೀ. ಮುತ್ತಯ್ಯ ಶೆಟ್ಟರಿಗೆ ಎಡುರು ನಿಂತ ಆ ಹಳ್ಳಿಯ ಪಟೇಲನಿಗೆ ನೀವು ಓಟು ಕೊಡಕೂಡದಾಗಿಯೂ, ಕೊಂಗ್ರೆಸಿನ ಉಮೇದ್ವಾರಿಯ ಸಮಸ್ತವೂ ನಿಲ್ಲಲಿಕ್ಕೆ ಮನಸ್ಸು ಮಾಡಿದ್ದು ಶುದ್ಧ ಮೂರ್ಖತನವೆಂತಲೂ ನೀವೆಲ್ಲರೂ ಒಮ್ಮನಸ್ಸಿನಿಂದ ಭಾರತ ಮಾತೆಗಾಗಿ ಕೊಂಗ್ರೆಸಿನ ಜಯಶ್ರೀಯ ಸಲುವಾಗಿ ಜಸ್ಟೀಸು ಪಾರ್ಟಿಯವನಿಗೆ ಎಂದೂ ಮರೆತು ಹೋಗದ ಒಂದು ಕಠಿಣವಾದ ಪಾಠವನ್ನು ಕಲಿಸಬೇಕಾಗಿಯೂ, ನಿಮ್ಮನ್ನು ಶರಗೊಡ್ಡಿ ಬೇಡಿದರೂ ಅಂಥವರ ಮಾತನ್ನು ತೃಣೀಕರಿಸಿಯೂ ನನ್ನನ್ನು ಪ್ರೋತ್ಸಾಹಿಸಿ ಜಯಶೀಲನಾಗಿ ಮಾಡಿದ್ದಕ್ಕೆ ನಾನು ನಿಮಗೆ ಈ ಕೂಲಕ ನನ್ನ ಹೃತ್ಪೂರ್ವಕ ವಂದನೆಯನ್ನರ್ಪಿಸುತ್ತೇನೆ.

15—1—'36. K. Deju Shetty.

ವಿದೇಶ

ಈಜಿಪ್ತ್ ಮಂತ್ರಿಮಂಡಲವು ೫೦ ಮೈಲುಗಳ ಹೊಸ ರೈಲ್ವೆ ನಿರ್ಮಾಣವನ್ನು ನಿರ್ಧರಿಸಿರುವದು.

ನ್ಯೂಜೀಲ್ಯಾಂಡ್ ಸರಕಾರದವರು ೭೨೦,೦೦೦ ಪವನು ಮೌಲ್ಯದ ರೈಲ್ವೆ ಸಾಮಾನುಗಳ ಕಂಟ್ರಾಕ್ಟನ್ನು ಬ್ರಿಟಿಷರಿಗೆ ಕೊಟ್ಟಿರುವರು.

ಜಪಾನು ನೌಕಾ ಪರಿಷತ್ತಿನಿಂದ ಹಿಂದೆ ಬಂದಿದೆ.

ಸ್ವಿಂಡನ್‌ನಲ್ಲಿ ಎಕ್ಸ್‌ಪ್ರೆಸ್ ಟ್ರೈನೊಂದು ಗೂಡ್ಸ್ ಟ್ರೈನಿಗೆ ಧಕ್ಕೆ ಬಡಿದುದರಿಂದಾಗಿ ಅನೇಕರ ಪ್ರಾಣಹಾನಿಯಾಗಿಯದೆ.

ನಾಜಿ ಪಂಗಡದವರು ಜರ್ಮನಿಯ ಮುಂದಿನ ಆಡಳಿತದ ಕುರಿತು ಬಹಳವಾಗಿ ಆಲೋಚಿಸುತ್ತಿರುವರು.

ಅರ್ಕಾನ್ಸಾಸಿನಲ್ಲಿ ನಡೆದ ಅಮೆರಿಕನ್ ವಿಯರ್ ಲ್ಯಾನರಿ ನವರ ವಿಮಾನ ಅನಾಹುತದಲ್ಲಿ ೧೭ ಮಂದಿ ಮೃತರಾದರು.

ಸೂಯೇಜ್ ಕಾಲುವೆಯಲ್ಲಿ ೧೯೩೫ರಲ್ಲಿ ೪೯೨೨ ಹಡಗುಗಳು ಚಲಾವಣೆಯಾಗಿದ್ದು ಇದರಿಂದಾಗಿ ವಸೂಲಾದ ಮೊಬಲಗು ೧೧,೪೩೬,೦೦೦ ಪವನುಗಳು. ೧೯೨೯ರ ನಂತರ ಇದೇ ಅತಿ ಹೆಚ್ಚಿಗಿನ ವಸೂಲಿಯಾಗಿದ್ದು ಇಟೆಲಿ ಹಡಗುಗಳ ಚಲಾವಣೆಯೇ ಇದಕ್ಕೆ ಕಾರಣವಾಗಿರುತ್ತದೆ.

ದಕ್ಷಿಣ ಆಫ್ರಿಕಾದ ಇಂಡಿಯನ್ ಏಜೆಂಟ್ ಜನರಲರಾದ ಸರ್ ರಾಝಾ ಅಲಿಯವರು ಕೆಂಬರ್ಲಿಯ ಹಿಂದೂ ಯುವತಿಯಾದ ಮಿಸ್ ವಿ. ಸಾಮ್ಮಿಯನ್ನು ವಿವಾಹ ಮಾಡಿಕೊಳ್ಳಲಿರುವರು. ಈಕೆಯು ಇಸ್ಲಾಂ ಮತವನ್ನವಲಂಬಿಸಿ, ವಿವಾಹವು ಜೋಹಾನ್ಸೆಸ್‌ಬರ್ಗಿನಲ್ಲಿ ನಡೆಯುವಹು. ಈ ವಿವಾಹವು ಜರಗಕೂಡದಾಗಿ ದಕ್ಷಿಣ ಆಫ್ರಿಕದ ಭಾರತೀಯ ಕಾಂಗ್ರೆಸಿನವರು ಇಂಡಿಯಾ ಸರಕಾರಕ್ಕೂ ಇತರರಿಗೂ ಮನವಿಯನ್ನಿತ್ತಿರುವರು.

ನ್ಯೂ ಯೋರ್ಕ್ ನಗರದಲ್ಲೆಲ್ಲಾ ವಿದ್ಯುಚ್ಛಕ್ತಿಯ ದೋಷದಿಂದಾಗಿ ತಾ. ೧೬ನೇ ರಾತ್ರಿ ಮುಕ್ಕಾಲು ಘಂಟೆಯ ಕಾಲ ಕತ್ತಲು. ಮೇಯರರು ಶಾಂತಿರಕ್ಷಣೆಗಾಗಿ ೧೪,೦೦೦ ಪೋಲೀಸರನ್ನು ಕರೆದರು.

ಕರ್ನಾಟಕ.

ಆಸ್ಟ್ರೇಲಿಯದವರ ಮತ್ತು ಮೈಸೂರವರ ಕ್ರಿಕೆಟ್ ಮೇಚು ಇದೇ ತಾ. ೨೯, ೩೦ರಲ್ಲು ಬೆಂಗಳೂರು ಜಮಖಾನಾ ಮೈದಾನಿನಲ್ಲಿ ಜರಗುವದು.

ಮಂಡ್ಯದ ಸಕ್ಕರೆ ಕಾರ್ಖಾನೆಯ ಕಳೆದ ವರ್ಷದ ಲೆಕ್ಕವು ಪರಿಶೋಧಿತವಾಗಿ ಲಾಭದಾಯಕವಾಗಿದೆಯೆಂದು ತಿಳಿದುಬರುತ್ತದೆ. ಸಂಬಳಗಾರರಿಗೆ ಒಂದು ತಿಂಗಳ ಸಂಬಳವೂ, ಕೂಲಿಗಾರರಿಗೆ ಒಂದು ಹೊತ್ತಿನ ಊಟವೂ ಕೊಡುವರಂತೆ.

ರೆಡ್ ಕ್ರಾಸ್ ಸಂಘದ ಕೊಡಗು ಶಾಖೆಯ ಶಿಶು ಪ್ರದರ್ಶನವು ತಾ. ೨೯—೨—'೩೬ ಮತ್ತು ೧—೩—'೩೬ರಲ್ಲು ನಡೆಯಲಿರುವದು.

ಚಕ್ರವರ್ತಿಯವರ ಸಿಲ್ವರ್ ಜುಬಿಲಿ ಫಂಡಿನಿಂದ ೪,೬೭೨ ರೂಪಾಯಿ ಕೊಡಗಿನ ರೆಡ್ ಕ್ರಾಸ್ ಸಂಸ್ಥೆಗೆ ಕೊಡಲ್ಪಟ್ಟಿದೆಯಂತೆ.

೧೯೩೬—'೩೭ನೇ ಸಾಲಿನ ಬಜೆಟಿನಲ್ಲಿ ಉತ್ಪತ್ತಿಗಿಂತ ಸುಮಾರು ೩ ಲಕ್ಷ ರೂಪಾಯಿ ಖರ್ಚು ಹೆಚ್ಚಾಗುತ್ತಿದೆಯಾಗಿ ಅಂದಾಜು ಮಾಡಲಾಗಿದ್ದು ಈ ವರೆಗೆ ಆಗಿರುವ ಸಾಲ ಸೇರಿ ಆಡಳಿತಕ್ಕಾಗಿ ೧೯೩೭ನೇ ಮಾರ್ಚ್ ವರೆಗೆ ಕೊಡಗು ಸರಕಾರಕ್ಕೆ ಸುಮಾರು ೬ ಲಕ್ಷ ರೂಪಾಯಿ ಸಾಲವಾಗಬಹುದಾಗಿ ವಾರ್ತೆ.

ಗೋಕರ್ಣ ಕ್ಷೇತ್ರದಲ್ಲಿ ಬಿನ್ ಶೇತಕಿಯ ಚೌಕಶಿ ನಡೆಯುತ್ತಿದೆ.

ಕುಮುತೆಯ ಅಘನಾಶಿನಿ ನದಿಗೆ ಮಣಿಕೆ—ದೀವಿಗಿ ತಾರಿಗೆ ಸಂಕ ಕಟ್ಟಲು ನಿರ್ಧಾರವಾಗಿಯದೆ.

ಹೊಸಪೇಟೆಯ ಒಬ್ಬ ಕೂಲಿ ಹೆಂಗಸಿಗೆ ಆಕಸ್ಮಾತ್ತಾಗಿ ಬಂದೂಕಿನ ಪೆಟ್ಟು ತಗಲಿದ್ದು ಆಕೆಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾಳೆ. ಪೊಲೀಸು ತನಿಖೆಯು ನಡೆಯುತ್ತಿದೆ.

ಡಾ. ಮಿಸ್. ರೊಸೆಂತಾಲ್‌ರವರು ತುಂಕೂರು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನ ಹಾಲಿನಲ್ಲಿ ಗರ್ಭಿಣಿಯರ ಸಂರಕ್ಷಣೆಯ ಕುರಿತು ಭಾಷಣವನ್ನಿತ್ತರು. ಅನೇಕ ಹಿಂದೂ ಮುಸಲ್ಮಾನ್ ಸ್ತ್ರೀಯರು ನೆರೆದಿದ್ದರು. ಮಹಿಳಾ ಸಮಾಜದ ಅಧ್ಯಕ್ಷೆ ಮಿಸೆಸ್ ಹೆಡ್. ವೆಂಕಟ್ರಾಮಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯದರ್ಶಿಯಾದ ಮಿಸೆಸ್ ಅಂಬಾಬಾಯಿಯವರು ಭಾಷಣವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದರು.

ಇಟೆಲಿ—ಅಬಿಸೀನಿಯಾ ಪ್ರಕರಣ.

ಇಟೆಲಿಯ ೪ ಯುದ್ಧದ ವಿಮಾನಗಳು ಡೇಸಿಯ ಸಮೀಪದಲ್ಲಿ, ಬಾಂಬು ಹಾರಿಸಿ, ಮೇಜರ್ ಬರ್ಗಾಯಿನ್ ಎಂಬ ಒಬ್ಬ ಬ್ರಿಟಿಶನಿಂದ ನಡೆಯಿಸಲ್ಪಡುತ್ತಿದ್ದ ಒಂದು ರೆಡ್ ಕ್ರಾಸ್ ಎಂಬುಲೆನ್ಸಿಗೆ ಸಂಬಂಧಿಸಿದ ೧೪ ಜನರನ್ನು ಕೊಂದಿವೆ ಎಂದೂ, ೪೫ ಮಂದಿಗೆ ಗಾಯಮಾಡಿವೆ ಎಂದೂ ಸುದ್ದಿ.

ಮೇಜರ್ ಬರ್ಗಾಯಿನರವರಿಗೆ ಗಾಯವಾಗಿಲ್ಲ. ಅವರ ಡೇರೆಯೂ, ಶಸ್ತ್ರಚಿಕಿತ್ಸೆಯ ಸಾಧನಗಳೂ ಸುಟ್ಟುಹೋಗಿವೆ. ಸತ್ತವರಲ್ಲಿ ಹೆಚ್ಚಾಗಿ ದೊರಕಿದ ಶವಗಳೆಂದರೆ, ಹೆಂಗಸರದು; ಮಕ್ಕಳದು; ಮುದುಕರದು.

ಈ ರೀತಿ ಎಂಬುಲೆನ್ಸಿನ ಮೇಲೆ ಬಾಂಬ್ ಬಿಸಾಡಿದುದರ ಕುರಿತು ಲೀಗ್ ಕೌನ್ಸಿಲಿನಲ್ಲಿ ವಿಚಾರಣೆ ನಡೆಯಲಿದೆ. ಆದರೆ ಈ ತಪ್ಪು ತಮ್ಮದಲ್ಲ, ಎಂಬುಲೆನ್ಸಿನ ಜತೆಯಲ್ಲಿ ಸೈನ್ಯವನ್ನಿರಿಸಿದುದು ಅಬಿಸೀನಿಯದವರ ತಪ್ಪೆಂದು ಇಟೆಲಿಯವರು ತಪ್ಪಿಸಿಕೊಳ್ಳಲು ನೋಡುತ್ತಿದ್ದಾರೆ.

ಮೇಜರ್ ಬರ್ಗೋಯನ್‌ರ ರೆಡ್ ಕ್ರಾಸ್ ಎಂಬುಲೆನ್ಸಿನ ಮೇಲೆ ಬೋಂಬು ಬಿದ್ದ ಸಂಬಂಧ ಬ್ರಿಟಿಶರ ಕಡೆಯಿಂದ ದೂರೇನೂ ಇಲ್ಲ. ಅದು ಇತಿಯೋಪಿಯದವರ ಕೆಲಸವೆಂದು ಬ್ರಿಟಿಶರ ಹೇಳಿಕೆ.

ಕಳೆದ ವಾರದ ದೊಡ್ಡ ಯುದ್ಧವೆಂದರೆ ಡೋಲೋ ಬಳಿಯಲ್ಲಿ ನಡೆದುದು. ತಮಗೆ ಸಂಪೂರ್ಣ ವಿಜಯವಾಯಿತೆಂದು ಇಟೆಲಿಯವರ ಹೇಳಿಕೆ.

ಈ ಯುದ್ಧದಲ್ಲಿ ಅಬಿಸೀನಿಯದವರ ದೊಡ್ಡ ದಳವೊಂದು ಭಾಗ ವಹಿಸಿದ್ದಿತು. ಇದರಲ್ಲಿ ಅಬಿಸೀನಿಯದವರು ಇಟೆಲಿಯವರ ಬಾಂಬು ಮತ್ತೂ ಗುಂಡುಗಳಿದುರಿಗೆ ನಿಲ್ಲಲಾರದೆ ಸಂಪೂರ್ಣವಾಗಿ ಪರಾಜಯ ಹೊಂದಿ ಓಡಿಹೋದರು. ಅಬಿಸೀನಿಯದವರ ಕಡೆಯ ೪ ಸಾವಿರ ಮಂದಿ ಮೃತರಾದರು—ಹೀಗೆಂದು ವಾರ್ತೆ.

ರಾಸ್ ಡೆಸ್ಟಾರವರು ತಮ್ಮ ಮುಖ್ಯ ಸೈನ್ಯವನ್ನು ಸಿದ್ಧಮಾಡಿಕೊಂಡು ಇನ್ನೊಂದು ಸುಸಂದರ್ಭವನ್ನು ಕಾಯುತ್ತಿದ್ದಾರೆ. ಆಗ ನಮ್ಮ ಪರಾಕ್ರಮ ನೋಡಿ—ಎನ್ನುತ್ತಿದ್ದಾರೆ.

ಅಬಿಸೀನಿಯದ ಚಕ್ರವರ್ತಿಗಳು ತಮ್ಮ ಸೈನ್ಯದ ಭಕ್ತಿ ವಿಶ್ವಾಸ; ಸಾಹಸಪರಾಕ್ರಮಗಳ ಕುರಿತು ಹೆಚ್ಚಿನ ನಂಬಿಕೆಯುಳ್ಳವರಾಗಿದ್ದಾರೆ. ತಮ್ಮ ಸೈನಿಕರು ಇಟೆಲಿಯವರಿಂದಲೂ ಶ್ರೇಷ್ಠರೆಂದು ಅವರ ಅಭಿಮತ. ಈ ಕಾರಣದಿಂದ ತಮಗೆ ವಿಜಯವೇ ಸಿದ್ಧವೆಂದು ಸಿದ್ಧಾಂತ ಮಾಡಿ, ರಾಜಿಯ ವಿಷಯ ಅಗತ್ಯವಲ್ಲ ಎನ್ನುತ್ತಿದ್ದಾರೆ.

ಇಟೆಲಿಯವರು ಸುಟ್ಟು ಹಾಕಿರುವ ಇಗರ್ಜಿಗಳನ್ನು ಶಾಂತಿ ನೆಲಸಿದ ಬಳಿಕ ಹೊಸದಾಗಿ ಕಟ್ಟಿಸಿಕೊಡುವುದಾಗಿ ಹೇಳುತ್ತಿದ್ದಾರೆ.

ಎಣ್ಣೆಯ ಸ್ಯಾಂಕ್ಶನಿನ ಕುರಿತು ಇನ್ನೂ ಯಾವುದೂ ಜ್ಯಾರಿಗೆ ಬಂದಿಲ್ಲ. ಬರಬೇಕೆನ್ನುವ ಲಕ್ಷಣಗಳು ಕಾಣುತ್ತಿದ್ದರೂ ಬಂಡೆ ಮೇಲೆ ಗೊತ್ತು. ಅಮೆರಿಕದ ಪ್ರೆಸಿಡೆಂಟರೊಂದು ಕಡೆ 'ಅದು ಬರಲಿ' ಎನ್ನುತ್ತಾರೆ. ಬ್ರಿಟಿಶರು ಹಾಗಾಗಬೇಕು ಎನ್ನುತ್ತಾರೆ. ಎಲ್ಲವೂ ಇಷ್ಟರ ವರೆಗೆ ಬಾಯಲ್ಲಿಯೇ.

ಮೇಕಲೆಯ ಕಡೆಗೆ ಮುಂದುವರಿಯುತ್ತಿರುವ ಅಬಿಸೀನಿಯದ ಸೈನ್ಯವನ್ನು ಹಿಡಿದು ನಿಲ್ಲಿಸಲು ಇಟೆಲಿಯವರಿಂದ ಆಗಿಲ್ಲ.

ಅಬಿಸೀನಿಯದವರ ಅದೊಂದು ಮಹೋತ್ಸವದ ಆಚರಣೆಯ ಸಂಬಂಧ ಎಡಿಸ್ ಅಬಾಬದಲ್ಲಿ ವಿಶೇಷವಾದ ಜನಸಂದಣಿಯು ನೆರೆಯಲಿದೆ. ಆದರೆ ತಾ. ೨೦—೨೨ರಲ್ಲಿ ಇಟೆಲಿಯವರು ಅಲ್ಲಿ ಬಾಂಬ್ ಹಾರಿಸುವುದರಲ್ಲಿರುವರೆಂದು ಅಬಿಸೀನಿಯಾ ಸರಕಾರವು ಜನಗಳಿಗೆ ಎಚ್ಚರಿಕೆ ಕೊಟ್ಟಿದೆ.

ಅಬಿಸೀನಿಯದವರ ಸಹಾಯಕ್ಕಾಗಿ ಕೈರೋವಿನ ಸಾಹುಕಾರರ ಸಂಘವು ಆಗಲೇ ೪ ಸಾವಿರ ಪೌಂಡುಗಳ ವಂತಿಗೆಯನ್ನು ಕೂಡಿಸಿದೆ.

ಕಳೆದ ತಿಂಗಳಲ್ಲಿ ಅಬಿಸೀನಿಯದವರು ಶತ್ರುಪಕ್ಷದವರಿಂದ ೨೦ ಟ್ಯಾಂಕುಗಳನ್ನು ಹಿಡಿದಿರುವುದಾಗಿ ತಿಳಿದುಬರುತ್ತದೆ.

ಮುಸಲೋನಿಯವರ ಮಗನಾದ ವಿಟ್ಟೋರಿಯೋ ಎಂಬಾತನು ಅಂಬಾರಾದಮ್ ಎಂಬಲ್ಲಿ ಒಂದು ವಿಮಾನ ದಾಳಿಯಲ್ಲಿ ಭಾಗವಹಿಸಿದ್ದಾಗ ಶತ್ರುಪಕ್ಷದವರು ಹೊಡೆದ ಒಂದು ಶೆಲ್ ವಿಮಾನದೊಳಗೆ ಬಿದ್ದು ಒಡೆಯಿತು. ಯಾರಿಗೂ ಪ್ರಾಣಾಪಾಯವಾಗಲಿಲ್ಲ. ವೆಪನ್ ಗನ್ ಮಾತ್ರ ನಾಶವಾಯಿತು.

ಡೋಲೋ ಪ್ರಾಂತದ ಯುದ್ಧದಲ್ಲಿ ಎರಡು ದಿನ ಇಟೆಲಿಯವರ ಕಡೆಯಿಂದಲೇ ವಿಶೇಷ ಪ್ರಾಣನಷ್ಟವಾಗಿದೆ ಎಂದೂ ತಮ್ಮ ಪ್ರಾಣ ನಷ್ಟವು ವಿಶೇಷವಾಗಿಲ್ಲವೆಂದೂ ಇತಿಯೋಪಿಯದವರ ಹೇಳಿಕೆ. ಹೇಗೂ ಇಟೆಲಿಯವರಿಗೆ ಬ

ಶಿಕ್ಷಣ ಪರಿಷತ್ತು.

'ಈ ದೇಶದಲ್ಲಿ ಶಿಕ್ಷಣವು ವ್ಯರ್ಥವಾಗಿದೆ, ಇರಬೇಕಾಗಿರುವಂತೆ ಇಲ್ಲ,' ಎಂದೊಂದು ದೂರು ಕೇಳಿಸುತ್ತಲಿದೆ. ಪ್ರಚಲಿತ ಕ್ರಮದಲ್ಲಿ ಊನನ್ಯೂನಗಳಿಲ್ಲವೆಂದಿಲ್ಲ, ಆದರೆ ಇಷ್ಟು ಅತಿಶಯವಾಗಿ ಅವನ್ನು ಕುರಿತು ಘೋಷಿಸಿ ಫಲವಿಲ್ಲ. ನಮ್ಮ ಹಿರಿಯರೂ ನಾವೂ ಪಡೆದ ವಿದ್ಯಾಭ್ಯಾಸದ ಫಲವಾಗಿ, ನಾವೀಗ ಮುಂದಿರುವಷ್ಟಕ್ಕಿಂತ ಮುಂದೆ ನಡೆಯಲು ನಮಗೆ ಸಾಧ್ಯವಾಗದೆ ಹೋದುದಿರಬಹುದು. ಪ್ರಗತಿಪರವಾದ ರಾಷ್ಟ್ರಗಳಲ್ಲಿನ ವಿಚಾರಗಳನ್ನು ನಮಗೆ ಬೋಧಿಸಿ ಅಥವಾ ಪರಿಚಯಗೊಳಿಸಿ ನಮ್ಮನ್ನೆ ಇಷ್ಟು ಚೆನ್ನಾಗಿಯಾದರೂ ನಾವು ಪಡೆದಿರುವ ವಿದ್ಯಾಭ್ಯಾಸವೇ ಮುಂದರಿಸಿ ತಂದಿದೆ; ಸಂವನ್ನರಾಗಿ ಮಾಡಿಯದೆ. 'ಸುಖವಾಗಿ' ವಿಶೇಷ ವಿಚಾರಗಳಿಲ್ಲದೆ ಜಡವಾಗಿ ಬಿದ್ದುಕೊಂಡಿರುವವರಲ್ಲಿ ಹೆಚ್ಚಿನ ಆಸಕ್ತಿಯನ್ನೂ ಹಿಂದಣ ನಂಬಿಕೆಗಳನ್ನು ಕಿತ್ತೊಗೆಯಲು ಹೊಸ ವಿಚಾರಗಳನ್ನೂ ಈ ವಿದ್ಯಾಭ್ಯಾಸವೇ ನಮ್ಮಲ್ಲಿ ಹುಟ್ಟಿಸಿಯದೆ. ಬೇರೆ ಏನೂ ಅಲ್ಲದಿದ್ದರೂ, ಮುಂದೆ ನಾವು ಮಾಡಬೇಕಾಗಿರುವ ಸುಧಾರಣೆಗಳಾವುವೆಂಬುದನ್ನಾದರೂ ಗೊತ್ತು ಹಚ್ಚುವಷ್ಟು ವಿವೇಕವನ್ನು ನಮ್ಮಲ್ಲಿ ಉಂಟುಮಾಡಿರುವುದು ಇದೇ ಶಿಕ್ಷಣವಲ್ಲವೆ?

* * * * *

ಶಿಕ್ಷಣದ ಭಾಷೆಯಾಗಿ ಇಂಗ್ಲಿಷನ್ನು ಬೇಕೆಂದು ಆರಿಸಿದ ಕಾರಣ, ದೇಶೀಯ ಶಿಕ್ಷಣ ಸಂಸ್ಥೆಗಳೂ ದೇಶೀಯ ಭಾಷೆಗಳೂ ಕುಂದುತ್ತ ಬರುವಂತಾಯಿತು. ಈ ಬಗೆಯ ಏರ್ಪಾಡನ್ನು ಪ್ರಾರಂಭಿಸುವಾಗ, ನವಶಿಕ್ಷಿತರ ಒಂದು ಪಂಗಡವೇ ಉಂಟಾಗಿ, ಇವರು ಆಣ್ಮರ ಎಲ್ಲ ರೀತಿನೀತಿಗಳನ್ನು ಅನುಸರಿಸುತ್ತ, ಅವರಂತೆ ಸುಧಾರಣೆ ಹೊಂದಿ, ಮುಂದೆ ತುಂಬ ರಾಜಭಕ್ತಿಯಿಂದ ಇಂಗ್ಲಿಷರ ಮತ್ತು ಇಂಗ್ಲಿಷ ಭಾಷೆಯ ಕೊಂಡಾಟವನ್ನು ಮಾಡುತ್ತಿರಬಹುದಾಗಿ ಭಾವಿಸಲಾಗಿದ್ದಿತು. ಆದರೆ ಈಗ? ದೇಶ ಭಾಷೆಗಳನ್ನು ಇನ್ನಷ್ಟು ಉದ್ಧರಿಸಬೇಕಾಗಿಯೂ ಅವುಗಳಿಗೆ ಸಾಕಷ್ಟು ಮಹತ್ವವನ್ನು ಕೊಡಬೇಕಾಗಿಯೂ ಈಗ ಜಳವಳಗಳು ಉಂಟಾಗಿವೆ. ಆದರೆ, ನಮ್ಮ ನಾಗರಿಕ ಸಾಂಪತ್ತಿಕ ಹಾಗೂ ರಾಜಕೀಯ ಪ್ರಗತಿಯೆಲ್ಲವು ಇಂಗ್ಲಿಷ ಭಾಷೆಯ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಅರಿವಿನ ಮೇಲೆ ಆಧರಿಸಿಕೊಂಡಿದೆ ಎಂಬುದನ್ನು ಈಗ ಮರೆಯಲಿಕ್ಕಾಗದು. ಇವೆರಡು ವಿಚಾರಗಳನ್ನು ಒಂದುಕೂಡಿಸುವ ಪ್ರಯತ್ನಗಳು ನಡೆದರೆ, ಶಿಕ್ಷಣದ ಕ್ರಮವೂ ಪ್ರಗತಿಯೂ ಸರಿಯಾಗಬಹುದು.

* * * * *

ಮೂಲ ವಿದ್ಯಾಭ್ಯಾಸವು ಇತ್ತೀಚೆಯ ವರೆಗೆ ಮೂಲೆ ಪಾಲಾಗಿದ್ದಿತು. ಪ್ರೌಢ ತರಗತಿಗಳಲ್ಲೇ ಉತ್ತಮ ವಿದ್ಯಾಪ್ರಚಾರವನ್ನು ಮಾಡುವ ಮೂಲಕ, ಇತರರಲ್ಲಿ ಮೂಲ ವಿದ್ಯಾಭ್ಯಾಸವು ತಾನಾಗಿ ಹರಡುವ ಹಾಗೆ ಅವರೇ ಸ್ವಯಂ ಪ್ರಯತ್ನ ಪಡುವರಾಗಿಯೂ ನಿರ್ಧಾರವಾಗಿದ್ದಿತು. ಈ ನಿರ್ಧಾರವು ಮಾತ್ರ ಯಾವ ರೀತಿಯಲ್ಲೂ ಉಂಟಾಗಲಾರದೆ ಉಳಿಯಿತು. ಈಗ ಧರ್ಮಾರ್ಥವಾಗಿಯೂ ಕಡ್ಡಾಯವಾಗಿಯೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹರಡಿಸಿದರೆ ಮಾತ್ರವೇ ಜನತೆಗೆ ಸುಖವುಂಟೆಂದು, ಅದಕ್ಕಾಗಿಯೆ ಹಲವು ಪ್ರಾಂತ್ಯಗಳಲ್ಲಿ ಸರಕಾರಗಳು ಹಣ ಕೂಡಿಸಲೂ ವಿದ್ಯಾಪ್ರಚಾರ ಮಾಡಲೂ ಆಲೋಚನೆ ಮಾಡುತ್ತಿವೆ. ಸರಕಾರದ ಮೇಲೆ ಅತಿ ಮುಖ್ಯ ಜವಾಬುದಾರಿಯಾಗಿರುವ ಈ ವಿದ್ಯಾಪ್ರಚಾರಕ್ಕೆ ಹಣವಿಲ್ಲ ಎಂಬ ಆಕ್ಷೇಪವೂ ನೆವವಾಗಿ ಪ್ರಕಟವಾಗುತ್ತಲಿದೆ. ೧೫೦ ವರ್ಷ ಬ್ರಿಟಿಷರ ಆಳಿಕೆಯಲ್ಲಿ ಸೇಕಡಾ ೯ರಷ್ಟು ಜನರಿಗೆ ಮಾತ್ರ ವಿದ್ಯಾಬಲ ದೊರೆತಿದೆ ಎಂಬ ಅವಹೇಳನವನ್ನು ನಿರ್ನಾಮಗೊಳಿಸಲು ಸರಕಾರವು ಇನ್ನಾದರೂ ಪ್ರಯತ್ನಪಡಲೇ ಬೇಕಾಗಿದೆ.

* * * * *

ಪುಸ್ತಕವಿದ್ಯೆಗೆ ವಿಶೇಷ ಮಹತ್ವವನ್ನು ಕೊಡುವ ಶಿಕ್ಷಣ ಕ್ರಮವು ದೂರಿಗೆ ಒಳಪಡದೆ ಹೇಗಿರಬಹುದು? ನಮ್ಮ ಜನಾಂಗದ ಜೀವನಕ್ಕೆ ಅಗತ್ಯ ತೋರುವ ವಿಷಯಗಳಲ್ಲಿ ವಿದ್ಯಾರ್ಥಿಯು ಮುಂದರಿಯಲು ಅವಕಾಶ ಹೊಂದುವಂತೆ ಪುಸ್ತಕವಿದ್ಯೆಯೂ ವ್ಯವಹಾರಜ್ಞಾನವೂ ಬೇಕಾಗಿವೆ. ಇದರಿಂದ, ನಾನಾ ವೃತ್ತಿ ಉದ್ಯೋಗಗಳನ್ನು ಕಲಿಸಿ ತರಬೇತನ್ನು ಕೊಡುವ ಸಮಿತಿಗಳನ್ನು ಈಗ ಸರಕಾರಗಳೂ ಇತರ ಮುಖಂಡರೂ ನಿರ್ಮಾಣ ಮಾಡುತ್ತಲಿದ್ದಾರೆ. ಮಧ್ಯಮ ತರಗತಿಯ ಶಿಕ್ಷಿತರಿಗೆ ಅಗತ್ಯವಾಗಿರುವ ಔದ್ಯೋಗಿಕ ಶಿಕ್ಷಣದ ಪ್ರಚಾರವು ಈಗ ಅತ್ಯಾವಶ್ಯಕವಾಗಿದೆ. ಹಾಗೆಂದು ಸರ್ವಾಂಗಪರಿಣತಿಯನ್ನು ಉಂಟುಮಾಡುವ ವಿದ್ಯಾಭ್ಯಾಸವೂ ನಮಗೆ ಅನಶ್ಯಕವೇ ಆಗಿದೆ. ವಿಜ್ಞಾನಶಾಸ್ತ್ರವು ಸಹಸರ್ವವಿದಿತವಾಗುವ ಹಾಗೆ ಬಳಕೆಗೆ ಬರಬೇಕಾಗಿದೆ. ಇವುಗಳಲ್ಲಿ ಯಾವುದಾದರೊಂದರ ಕಡೆಗೆ ವಿದ್ಯಾರ್ಥಿಯ ಮನಸ್ಸು ಹೆಚ್ಚಾಗಿ ಒಲಿಯಬಹುದು; ಆದರೆ ಇದೆಲ್ಲವು ತಿಳಿದಿರುವ ಹಾಗೆ ಪಾಠಕ್ರಮ ನಡೆಯಬೇಕಾಗಿದೆ.

* * * * *

ತರಬೇತಾದ ಯುವಕರು ಶಾಲೆಗಳಿಂದ ಹೊರಬಿದ್ದ ಕೂಡಲೆ ನಿರುದ್ಯೋಗತೆಯು ಮಾಯವಾಗಬಹುದೆಂಬುದೂ ಸುಳ್ಳು. ಇಂಥವರಿಗೆ ಉದ್ಯೋಗ ಕೊಡುವ ಸಂಸ್ಥೆಗಳೂ ಇರಬೇಕು; ಅವುಗಳಲ್ಲಿ ಇವರಿಗೆ ಉದ್ಯೋಗವೂ ದೊರೆವಂತಾಗಬೇಕು.

* * * * *

ವಿಶ್ವವಿದ್ಯಾಲಯಗಳಿಗೆ ಸೇರಿಸಿಕೊಳ್ಳುವುದನ್ನೆ ಕಡಮೆ ಮಾಡುತ್ತ ಬರುವಂತೆ ಆತಂಕಿಸಬೇಕಾಗಿ ಸಹ ಪ್ರಯತ್ನಗಳಾಗಿವೆ; ಹೀಗೆ ಮಾಡಿದರೆ, ಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಇಳಿಸಬರುವುದೆಂದೂ ನಿರೀಕ್ಷೆಯಿದೆ! ಜನರಲ್ಲಿ ವಿದ್ಯಾಪ್ರಚಾರ ಮಾಡುವ ಕರ್ತವ್ಯವು ಸರಕಾರದ್ದಾಗಿರುವಾಗ, ಇಂಥ ಪ್ರವೃತ್ತಿಯು ಹಾಳೆಂದೇ ಎನ್ನಬೇಕಲ್ಲವೆ? ನಮ್ಮ ಜನಸಂಖ್ಯೆಗೂ ಶಿಕ್ಷಿತರಿಗೂ ದಾಮಾಶಾಯ ಎಲ್ಲಿದೆ? ಇನ್ನೂ ಈ ದಾಮಾಶಾಯವನ್ನು ಕಡಿಮೆ ಮಾಡಿದರೆ, ನಮ್ಮಲ್ಲಿನ ಶಿಕ್ಷಿತರ ಸಂಖ್ಯೆ ಇಳಿಯದೆ? ಜನಾಂಗದ ಪ್ರಗತಿಗೆ ಕಠಿನವಾದ ಆತಂಕವಾಗದೆ? ಇಲೆಕ್ಟ್ರಿಕ್ ಯಂತ್ರಗಳು, ಆಕಾಶವಾಣಿ, ಸಿನೇಮಾ ಮೊದಲಾದವುಗಳ ಮೂಲಕ ಜನರಲ್ಲಿ ಅತ್ಯಾಧುನಿಕ ವಿಚಾರಗಳನ್ನು ತುಂಬಿಸುವುದು ಅಗತ್ಯ ಹೊರತು, ಇನ್ನೂ ಜನರಲ್ಲಿ ವಿಚಾರಿಗಳನ್ನು ಕಡಿಮೆ ಮಾಡುತ್ತ ಬರುವುದರಿಂದ ಉಪಯೋಗವಿಲ್ಲ.

* * * * *

ವರ್ಷಕ್ಕೆ ಒಂದು ಕೋಟಿ ರೂಪ್ಯಾಗಳನ್ನು ಸರಕಾರವು ಇನ್ನೂ ಕೆಲ ವರ್ಷಗಳ ತನಕ ವಿದ್ಯಾಪ್ರಚಾರಕ್ಕಾಗಿ ವ್ಯಯಿಸಲು ನಿರ್ಧಾರ ಮಾಡಬೇಕಾಗಿದೆ. ಗ್ರಾಮದ ಅಭ್ಯುದಯಕ್ಕಾಗಿ ಒಂದು ಕೋಟಿ ರೂಪ್ಯಾಗಳನ್ನು ಇತ್ತೀಚೆಗೆ ಪ್ರತ್ಯೇಕಿಸಿಟ್ಟಂತೆ, ಇದೂ ಒಂದು ಅಗತ್ಯ ಖರ್ಚಾಗಿದೆ. ಇದು ಜನಾಂಗಿಕ ಉದ್ಧಾರದ ಮಾತು. ಪ್ರತಿ ಪ್ರಾಂತ್ಯವು ಎಷ್ಟು ಧನವನ್ನು ವಿದ್ಯಾಪ್ರಚಾರಕ್ಕೆ ವ್ಯಯಿಸುವುದೋ ಅಷ್ಟನ್ನು ಕೇಂದ್ರ ಸರಕಾರವು ಆ ಪ್ರಾಂತ್ಯಕ್ಕೆ ಸಹಾಯಧನವಾಗಿ ಕೊಡಬೇಕು. ಆಗ ತಾನೆ ಪ್ರಾಯ್ಮೆರಿ, ಸೆಕೆಂಡರಿ ಶಿಕ್ಷಣವೆಲ್ಲವು ಉತ್ತಮವಾಗಲು ಅನುಕೂಲತೆ ಉಂಟಾಗಬಹುದು.

* * * * *

ಸ್ತ್ರೀವಿದ್ಯಾಭ್ಯಾಸದ ಕಡೆಗೆ ನಮ್ಮ ಜನಾಬುದಾರಿಯು ಇನ್ನಷ್ಟು ಅಧಿಕವೇ ಆಗಿದೆ. ಸ್ತ್ರೀಯರ ವಿದ್ಯಾಭ್ಯಾಸವನ್ನು ನಾವು ಪುರುಷರು ಒದಗಿಸಿಕೊಡಬೇಕಾಗಿ ಬಂದಿರುವ ಪ್ರಯುಕ್ತ, ಪುರುಷರ ಮೇಲೆ ಇದು ಹೆಚ್ಚಿನ ಜವಾಬುದಾರಿಯಾಗಿದೆ. ಗಂಡುಮಕ್ಕಳ ಶಿಕ್ಷಣದಂತೆ ಹೆಮ್ಮಕ್ಕಳ ಶಿಕ್ಷಣವೂ ಇದ್ದು ಪ್ರಯೋಜನವಿಲ್ಲ. ಸಮಾನತೆ ಬೇಕು, ಆದರೆ ವೈವಿಧ್ಯಕ್ಕೂ ಎಡೆಗೊಡಬೇಕು.

ಸಮಾಜಗಳೊಳಗೆ ವೈಮನಸ್ಸು ಬೆಳೆಯುತ್ತ ಬರುವುದಕ್ಕೆ ಚಿಕಿತ್ಸೆಯೇನೂ ಇಲ್ಲವೆ? ಸಾಂಪತ್ತಿಕ ಮತ್ತು ರಾಜಕೀಯ ಕಾರಣಗಳಿಂದಾಗಿ ಹೀಗಾಗಿದೆ ಎಂದು ಧೈರ್ಯವಾಗಿ ಹೇಳಬಹುದಾದರೂ, ಶಿಕ್ಷಕರು ಅನುದಿನವೂ ಅನುಕೂಲತೆ ತೋರಿದಂತೆಲ್ಲ ವಿದ್ಯಾರ್ಥಿಗಳು ಆಗುವಷ್ಟು ಐಕ್ಯತೆಯಿಂದ ನಡೆದುಕೊಳ್ಳುವ ಹಾಗೆ ಬೋಧಿಸುವುದುತ್ತಮ.

* * * * *

ಇವೆಲ್ಲ ಉಪಾಯಗಳಿಂದಾಗಿ ಮಾನವನ ಮಾನಸಿಕ ಮುಕ್ತಿಗೆ ಉತ್ತಮೋಪಾಯಗಳನ್ನು ಸೂಚಿಸುವಂತೆ ಭಗವಂತನು ಶಿಕ್ಷಣ ಪರಿಷತ್ತನ್ನು ಕರುಣಿಸಲಿ.

ಶಿಕ್ಷಣ ವಿಚಾರ

STRAW BOARDS

(Dutch unlined) all weights offered at competitive rates. Special rates for seasonal supply Ask for quotations.

Basel Mission Book Depot,
MANGALORE, S. K.

NOTICE.

Is hereby given that the property bearing T. S. No. 744½, 744-2/2 and 744 1/1 paying a mulgeni rent of Rs. 14—8—0 and Rs. 12—14—0 for Municipal Tax, situated near Bethany Girl School, Bendur is for sale. Good situation. A few yards from the public road. Further enquiries may be made either at the office of the undersigned or of the owner Mrs. Lucy Dean, Lower Bendur, Mangalore.

J. M. Sequeira,
Vakil.

TR. 215.

ಆಸೇತುಹಿಮಾ ಚಲ ಪರ್ಯಂತವೂ

ಅತ್ಯಲ್ಪ ಬೆಲೆಗೆ ಅಪಮಂದಾನಂದವನ್ನು ಕೊಡುವ

"ಟ್ವಿನ್" ರಿಕಾರ್ಡುಗಳನ್ನೇ ಕೊಳ್ಳಿರಿ!

ಕೆಳಗೆ ಕಾಣಬರುವ ಕನ್ನಡ "ಟ್ವಿನ್" ಡ್ರಾಮಾ ರಿಕಾರ್ಡುಗಳಿಂದ ನಿಮ್ಮ ಗೃಹಗಳನ್ನು ಅಲಂಕರಿಸುವಿರಿ!

ಕೃಷ್ಣಪಾರಿಜಾತ	FT. 3578-83	ಬೆಲೆ ರೂ.	9/-
ಭಕ್ತ ತುಕಾರಾಂ	FT. 3632-37	,, ,,	9/-
ವಿಚಿತ್ರ ಶಾಸನ	FT. 3746-49	,, ,,	6/-
ದಾಮಾಜಿ ಪಂತ್	FT. 6055-60	,, ,,	9/-
ತುಲಸೀದಾಸ್	FT. 6118-23	,, ,,	9/-
ದ್ರೌಪದೀ ಸ್ವಯಂವರ	FT. 6157-62	,, ,,	9/-
ರುಕ್ಮಾಂಗದ	FT. 6274-79	,, ,,	9/-
ದಾನಶೂರ ಕರ್ಣ	FT. 6260-67	,, ,,	12/-

1936 ಫೆಬ್ರುವರಿ ತಿಂಗಳಲ್ಲಿ ಪ್ರಕಟಿಸಲ್ಪಡುವ ನಾಟಕರಾಜ

ವೀರ ಅಭಿಮನ್ಯು 14 ಭಾಗಗಳು

ನಿರೀಕ್ಷಿಸುವಿರಿ!

ಇವುಗಳನ್ನೀಗಲೇ ನಮ್ಮ ವ್ಯಾಪಾರಿಗಳಲ್ಲಿ ಕೇಳಿಕೊಂಡು, ಆನಂದಿಸುವಿರಿ!

ದಿ ಟ್ವಿನ್ ರಿಕಾರ್ಡ್ ಕಂಪೆನಿ, ಲಿಮಿಟೆಡ್

45, ಸೌತ್‌ಪೆರೇಡು, ಬೆ

ಯಕೃತ್ತಿನ ರೋಗಗಳಿಗೆ ಔಷಧಗಳು ಅನೇಕ ಇವೆ; ಆದರೆ ಅವೆಲ್ಲ ರೋಗಗಳನ್ನು ಗುಣಪಡಿಸಬಲ್ಲ ಔಷಧವು ಒಂದೇ

ಈ ಔಷಧವನ್ನು 'ಸಂಜೀವಿನಿ'ಗೆ ಸಮಾನವೆಂತಲೂ, ಈ ಔಷಧವನ್ನು ಕಂಡುಹಿಡಿದವರನ್ನು ಪ್ರತ್ಯಕ್ಷ 'ಮೃತ್ಯುಂಜಯ'ನೆಂತಲೂ ಜನರು ಕರೆಯುತ್ತಾರೆ.

ಈ ಔಷಧವು 'ಸ್ವರ್ಗೀಯ'ವೆಂತಲೂ, ಅದು ತನ್ನ ಒಳ್ಳೆಯ ಹೆಸರನ್ನು ನ್ಯಾಯವಾಗಿ ಸಂಪಾದಿಸಿದೆ ಎಂತಲೂ ಜನರು ಆಡುತ್ತಾರೆ. ಗುಣಪಡಿಸುವಲ್ಲಿ ಅದು ಯಶಸ್ವಿಯಾಗಿದೆ. ಅದರಿಂದ ಗುಣವಾಗುವುದು ಖಂಡಿತ.

ಆ ಔಷಧವು,— **ಲಿವರ್‌ಕ್ಯೂರ್** (ರಿಜಿಸ್ಟರ್ಡ್)

ಮತ್ತೂ ಯಕೃತ್ತು ಹಾಗೂ ಪ್ಲೀಹಗಳ 'ಸ್ಪೆಶಲಿಸ್ಟ್' ಜಮ್ಮಿ ವೆಂಕಟರಮಣಯ್ಯನವರ ಸುಪ್ರಸಿದ್ಧವಾದ ಗುಣಕಾರಿ ಔಷಧ.

ಮೈಲಾಪುರ, ಮದ್ರಾಸು. } ಆರ್ಕಾಟ್ ಶ್ರೀನಿವಾಸಾಚಾರಿ ಸ್ಟ್ರೀಟ್, ಬೆಂಗಳೂರು ಸಿಟಿ. { ಹ್ಯಾರಿಸನ್ ರೋಡ್, ಕಲ್ಕತ್ತಾ.

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ ?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

Hail and Co

70/4, Chickpet, BANGALORE CITY.

Illustrate Your Announcements and Double Their Effectiveness.

THE LEADING BLOCK MAKERS

FOR OVER 18 YEARS' EXPERIENCE ARE NOW AT YOUR SERVICE.

Line and Half-tone Blocks on Zinc or Copper for

BOOK ILLUSTRATIONS, MAGAZINES & NEWSPAPERS,

ART LABELS, ETC., ETC.

We specialize in designing and Cinema Slides.

The Zandu Pharmaceutical Works, Ltd., Bombay.

ದಿ ಝಾಂಡೂ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಯಿ.

ಇವರ

ಕೇಸರೀ ಜೀವನ

ಆಬಾಲವೃದ್ಧರಲ್ಲಿ ನವಜೀವನವನ್ನುಂಟುಮಾಡುವ ಶಕ್ತಿವರ್ಧಕ 'ಟಾನಿಕ್'.

ಈ ಔಷಧವು ಶ್ರೇಷ್ಠವಾದ ಹಸಿಯ ನೆಲ್ಲಿಕಾಯಿ, ರಸಸಿಂಧೂರ, ಅಭ್ರಕ ಭಸ್ಮ, ಕುಂಕುಮಕೇಸರ, ಕಸ್ತೂರಿ ಮೊದಲಾದ ಅತ್ಯಮೂಲ್ಯ ಪದಾರ್ಥಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿದೆ.

ಕೆಮ್ಮು ಶೀತಗಳನ್ನು ನಿವಾರಿಸಿ, ಸ್ವರದ ಕಾಠಿಣ್ಯವನ್ನು ಹೋಗಲಾಡಿಸುವುದಕ್ಕೂ, ಜೀರ್ಣಶಕ್ತಿಯನ್ನು ಹೆಚ್ಚಿಸಲಿಕ್ಕೂ ಇದಕ್ಕೆ ಸಮಾನವಾದ ಔಷಧಿಯು ಬೇರೊಂದಿಲ್ಲ. ಕ್ಷಯರೋಗಕ್ಕಿದು ರಾಮಬಾಣ. ಕ್ರಮವಾಗಿ ಇದನ್ನು ಸೇವಿಸುವುದರಿಂದ ಅಕಾಲದಲ್ಲಿ ಬರುವ ವೃದ್ಧಾಪ್ಯವೂ, ನರಗಳ ನಿಶ್ಶಕ್ತಿಯೂ ಸಂಪೂರ್ಣವಾಗಿ ಗುಣವಾಗುವುದು. ನಿತ್ರಾಣಕ್ಕೂ, ಎದೆಯ ರೋಗಗಳಿಗೂ, ಮೆದುಳಿನ ಕೆಲಸದವರಿಗೂ ಇದು ಅಮೃತಪ್ರಾಯವಾದುದು. ಮುಕ್ಕಳಾದಿಯಾಗಿ ಮುದುಕರ ತನಕ ಇದನ್ನು ಸೇವಿಸಿ ಕಳೆದುಹೋದ ಆರೋಗ್ಯಭಾಗ್ಯವನ್ನು ತಿರುಗಿ ಪಡೆಯಬಹುದು. ಇಂದೇ ತರಿಸಿ ಅನುಭವ ಪಡೆಯಿರಿ. ಬೆಲೆ ಪೌಂಡಿಗೆ ರೂ. 5-0-0. ಅರ್ಧ ಪೌಂಡಿಗೆ ರೂ. 2-12-0. ಕಾಲು ಪೌಂಡಿಗೆ ರೂ. 1-9-0. ವಿಶೇಷ ಮಾಹಿತಿಯ ಬಗ್ಗೆ ಈ ಕೆಳಗಿನವರಿಂದ ತಿಳಿಯಿರಿ.

ಏಜೆಂಟ್:—**ದಾಮೋದರ್ ಎಂಡ್ ಕೋ.**, 78, ಚೈನಾ ಬಜಾರ್ ರೋಡ್, ಮದ್ರಾಸ್.

ಕಾರ್ಕಳ— ವಿ: ವಿ. ಶೆಣೈಯವರು.

ಕಾಸರಗೋಡು—ಕ್ಷೇಮಾಯತನ ಫಾರ್ಮಸಿಃ.

ಕಾರಣ ಮತ್ತು ಪರಿಣಾಮ

ಮೈಸೂರು ಗಂಧದ ಸಾಬೂನನ್ನು ನಿತ್ಯವೂ ಉಪಯೋಗಿಸುವುದರ ಪರಿಣಾಮವೇನೆಂದರೆ, ಶಾರೀರಕ ಯೋಗ್ಯತೆಯು ರಮ್ಯವಾದ ಅನುಭವವಾಗಿದೆ. ಅದು ಚರ್ಮವನ್ನು ಕೂಡ ಕಾಪಾಡುತ್ತದಲ್ಲದೆ, ಅದನ್ನು ಕೋಮಲವಾಗಿಯೂ ನುಣುಪಾಗಿಯೂ ಇರಿಸುತ್ತದೆ.

ಇದರ ಕಾರಣವೇನೆಂದರೆ, ಬಿ. ಪಿ. ಗುಣವಿಶೇಷದ ಶುದ್ಧವಾದ ಮೈಸೂರು ಗಂಧದ ಎಣ್ಣೆಯು ಈ ತಯಾರಿಯ ಸ್ವಚ್ಛ ದಿನಸುಗಳೊಡನೆ ಮಿಶ್ರವಾಗುತ್ತಿರುವುದೇ.

ಮೈಸೂರು ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

GOVT. SOAP FACTORY, BANGALORE.

ಬಾಲಾರ್ಕಮಧು

ಚಿಕ್ಕಮಕ್ಕಳಿಗೆ ಪುಷ್ಟಿಯನ್ನೂ, ಆರೋಗ್ಯವನ್ನೂ, ಆದ್ಭುತ ಶಕ್ತಿಯನ್ನೂ ಕೊಡುವುದು.

ಶೀಸೆ 1ಕ್ಕೆ 12 ಆಣೆ; ಟಿ. ಖ. 11 ಆಣೆ.

ಸ್ಪ್ಲೀನೋಫ್ಲಿವರ್

ಪ್ಲೀಹ, ಪಿತ್ತಕೋಶ, ಅಥವಾ ಮಕ್ಕಳ ಗೆಡ್ಡೆರೋಗ ಇದಕ್ಕೆ ಚಿಕ್ಕಬಿಂದು ದಿವ್ಯೌಷಧವು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು.

ಒಂದು ತಿಂಗಳ ಔಷಧದ ಕ್ರಯ ರೂ. 3-0-0; ಟಿ. ಖ. 6 ಆಣೆ.

ಯಂ. ವಿ. ಪ್ರಸಾದಿಕ ಔಷಧಾಲಯ,

ಶಿವಮೊಗ್ಗಾ, ಮೈಸೂರು ಸೀಮೆ.

M. GOPAL RAU

Prop: KANARA PHOTO STORES.

Artists, Photographers, Photo Material Dealers.

Shifted opposite Wenlock Hospital Gate.

Photos Cabinet 3 copies Rs. 2—0—0

Full Size ,, Rs. 5—0—0

Amateurs films developed free.

Awarded gold medals for High Class Enlargements.

ಮೂವರು ಪಾಲುಗಾರರು.

ಅದೊಂದು ವಿಂಗುಳಿ; ಇದೊಂದು ಬಾವಲಿ. ಇಬ್ಬರ ಸ್ಥನಲ್ಲೂ ತುಂಬ ಅತೃಪ್ತಿ. ಶ್ರೀಮಂತರಾಗಬೇಕು ಎಂದು ಒಂದೇ ಆಸೆ; ಆಸೆ ಮಾತ್ರ ಕೈಗೂಡುವಂತಹದಲ್ಲ.

ಬಂಡೆಕಲ್ಲಿನ ಮೇಲು ನಿಂತು, ಮಸಬಂಡಂತೆ ಹಾರುತ್ತ ವಿಂಗುಳಿ ಆಗ ದಿನಕಳೆಯುತಿದ್ದಿತು. ಅದರಿಂದೇನು? ಮುಂದೆ ಮುದಿಯಾದಾಗ ಬದುಕುವ ಬಗೆ ಹೇಗೆ? ವಿರಾಮವಾಗಿದ್ದು ಸುಖಜೀವನ ಮಾಡಬೇಕಲ್ಲ, ಅದಕ್ಕೇನು ಉಪಾಯ? ಎಂದೇ ಅದಕ್ಕೆ ಚಿಂತೆ,—ವೈರಾಗ್ಯ.

ಬಾವಲಿಯು ತೀರ ಗಂಭೀರ ಭಾವದ್ದಾಗಿದ್ದಿತು. ಅದರ ತಲೆ ಬಹಳ ಹಣ್ಣಾದ ತಲೆ, ಜೀವನವೂ ಹಾಗೆಯೆ ಪರಿಪಕ್ವ ಸಾಧುವಿನಂತೆ. ಅದರ ಚಿಂತೆ ಕಂಡರೆ ನಿಮಗೂ ಚಿಂತೆಯುಂಟಾಗುತಿದ್ದಿತು. ವೃದ್ಧಾಪ್ಯದಲ್ಲಿ ಗತಿಯೇನು? ಯಾವ ಉಪಾಯದಿಂದ ತಾನೆ ಆಗ ಸುಖವಾಗಿ ವಿರಾಮವಾಗಿ ಇರ ಬಹುದು? ಅದೇ ಅದಕ್ಕೆ ಚಿಂತೆ,—ಉದಾಸೀನತೆ.

ಇಬ್ಬರ ತಲೆಯಲ್ಲೂ ಒಂದೇ ಚಿಂತೆ, ಇಬ್ಬರ ಮನೋಭಾವವೂ ಒಂದೇ, ಎಂದ ಬಳಿಕ ಅವರು ಅಷ್ಟು ಸವಿೂಪದಲ್ಲಿದ್ದು ಗೆಳೆಯರಾಗದೆ ಇರಬಹುದೆ? ಒಬ್ಬನಿಗಿಂತ ಇಬ್ಬರು ಲೇಸು; ಇಬ್ಬರಿಗಿಂತ ಮೂವರು.....

ಅಲ್ಲೇ ಮುಳ್ಳುಕಂಟಿ ಬೆಳೆದಿದ್ದಿತು. ಅದೂ ಇವರಿಬ್ಬರ ಚಿಂತೆಯನ್ನು ತಿಳಿದುಕೊಂಡಿದ್ದಿತು. ಆದರೂ ಜಾಣನೆಂದು ಮಾತಿನ ಗಾಳ ಹಾಕಿ,—ಏನಯ್ಯ, ಗಬ್ಬಿಲರಾಯ? ಏನಿದು ಚಿಂತೆ? ಎಂದಿತು.

ಆಗ ಬೆಳಗ್ಗೆ. ಆದರೆ ಆ ಕಾಲದಲ್ಲಿ ಬಾವಲಿಗಳು ಹಗಲೆಲ್ಲ ಹಾರಾಡುತಿದ್ದುವು. ಅದಕ್ಕೇನೂ ಆಗ ಅಂತಹ ಅವಮಾನವಾಗಿರಲಿಲ್ಲ.

'ಅಪಹಾಸ್ಯವೆ? ವಿಂಗುಳಿಗೂ ನನಗೂ ಜೀವನದಲ್ಲಿ ಶ್ಲೇಸರ ಹುಟ್ಟಿದೆಯಣ್ಣ! ಬಲು ಬೇಸ್ತ' ಎಂದು ಕಿರಿಚಿತು.

'ಅದೇನೆಂದು ನನಗೆ ಹೇಳಬಾರದೆ? ಒಹೋ,—ವಿಂಗುಳಿ ಮಹಾರಾಜರೆ! ಏತಕ್ಕೆ ಬೇಸರವಂತೆ? ಬಾವಲಿ ಯೋಗಮುದ್ರೆ ಧರಿಸಿಯದೆ; ಅದನ್ನು ನೋಡಿಯೆ ನನ್ನ ಮುಳ್ಳುಗಳ ಮೊನೆಯೆಲ್ಲ ಮೊಂಡಾಯಿತಲ್ಲ!' ಎಂದಿತು.

ವಿಂಗುಳಿ—'ಆದದ್ದೇನೆಂದಿರಾ? ಇನ್ನಾಗುವುದೇನು ಎಂದೇ ಚಿಂತೆ. ನಾವು ಹಣನಂತರಾಗಬೇಕು, ಮುಂದೆ ಮುದುಕರಾಗುತ್ತ ಬರುವಂತೆ ಸುಖಜೀವನ ಮಾಡಲು ಸಾಕಷ್ಟು ಕೂಡಿಸಿಡಬೇಕು. ಹೇಗೆ ಸಾಧ್ಯವಾದೀತು? ಎಂದೇ ಚಿಂತೆ.'

'ಛೆ, ಛೆ! ಈ ಅಲ್ಪ ಸಾಮಾನ್ಯ ವಿಷಯಕ್ಕೆ ಇಷ್ಟು ಚಿಂತೆ, ವೈರಾಗ್ಯ, ಬೇಸರ, ಯೋಗಮುದ್ರೆ ಅಗತ್ಯವೆ? ವ್ಯಾಪಾರ ಮಾಡಿದರಾಯಿತು. ಶ್ರೀಮಂತರಾಗುವುದಕ್ಕೆ ವ್ಯಾಪಾರ ಮಾಡುವುದೇ ಉತ್ತಮೋಪಾಯ. ಪ್ರತಿ ವ್ಯಾಪಾರಿಯೂ ಸಾಹುಕಾರ, ಶ್ರೀಮಂತ, ಕುಬೇರ! ಒಂದಾಣೆಗೆ ಕೊಂಡುಕೊಳ್ಳುವುದು, ಒಂದು ರೂಪಾಯಿಗೆ ಮಾರುವುದು! ಏನು ನಫೆ! ಎಷ್ಟು ಹಣ! ಸಂಗಡಲೆ ಶ್ರೀಮಂತಿಕೆ ಬರುವುದಯ್ಯ!' ಎಂದು ಕಂಟಿ ಹೇಳಿತು.

'ನಾವು ವ್ಯಾಪಾರ ಮಾಡುವುದೆಂದರೇನು?' ಎಂದು ಇಬ್ಬರೂ ಒಮ್ಮೆಲೇ ಒಂದೇ ಸ್ವರದಲ್ಲಿ ಕೇಳಿದವು.

'ಮೂಢರೆ, ನಿನ್ನ ಮೂಢತನ ನೋಡಿದರೆ, ನನ್ನ ಮುಳ್ಳುಗಳಿಂದ ನಿನ್ನನ್ನು ಚುಚ್ಚಿ ಚೂರುಕು ಹುಟ್ಟಿಸುವೆನೋ ಎನಿಸುತ್ತಿದೆ. ಒಳ್ಳೇದು. ನಿನಗೆ ಒಪ್ಪುವುದಾದರೆ, ನಾನು ನಿನ್ನೊಡನೆ ಪಾಲುಗಾರನಾಗುತ್ತೇನೆ. ನಾವು ಉಣ್ಣೆಯನ್ನು ಇಲ್ಲಿ ಪಡೆದು, ಒಂದು ದೋಣಿಯಲ್ಲಿ ತುಂಬಿಸಿ, ಉಣ್ಣೆಯಿಲ್ಲದ ಊರಿಗೆ ಒಯ್ದು ಅಲ್ಲಿ ಮಾರಿ, ನಮ್ಮ ನಫೆ ಸಂಪಾದಿಸೋಣ,—ಆಗದೆ? ಎರಡನೇ ವರ್ಷ ಈ ವ್ಯಾಪಾರ ಮಾಡಿದರೆ, ನಾವೇ ನಗರಸೆಟ್ಟರಾದೇವು, ಬಿಲ್ಲಿರಾ? ಒಪ್ಪುವಿರಾ?' ಎಂದು ಕಂಟಿ, ಮೈದೂಗುತ್ತ, ಮುಳ್ಳು ಕೆದರಿ ನುಡಿಯಿತು.

ಈ ಉಪಾಯವು ಯಾರ ತಲೆಯಲ್ಲೂ ಇದುವರೆಗೂ ಏತಕ್ಕೆ ಮೂಡಿಲ್ಲವೆಂದೇ ಅವರು ಈಗ ಚಿಂತಿಸಿ, ನಾಚಿದರು. ಈಗಲಾದರೂ ಈ ಉಪಾಯವು ಸೂಚಿಸಿತೆಂದು ಹಿಗ್ಗಿದರು. ಹಿರಿಯ ಪಾಲುಗಾರನಾಗಿ, ಉಪಾಯ ಸೂಚಿಸಿದ ಮುಳ್ಳು ಕಂಟಿಯೇ ಪಟ್ಟಹೊಂದಿತು. ವಿಂಗುಳಿಯೂ ಬಾವಲಿಯೂ ದೋಣಿ ತರಲು ಹೋದುವು. ಮುಳ್ಳುಕಂಟಿಯು ಅಲ್ಲೇ ಮೇಯುತಿದ್ದ ಕುರಿಗಳಿಂದ ಉಣ್ಣೆಯನ್ನು ಕೊಂಡು ತರಬೇಕೆಂದಾಯಿತು.

ಕಂಟಿಯು ಕುರಿಯಲ್ಲೊಂದರ ಸವಿೂಪಕ್ಕೆ ಬಂದು, ಉಣ್ಣೆಯ ಮಾತೆತ್ತಿತು. ಕುರಿ,—ಎಂದರೆ ಕುರಿಯೇ; ಅದಕ್ಕೆ ಬೆದರಿಕೆ ಬಹಳ, ತನ್ನ ಮನಸ್ಸಿನಲ್ಲಿರುವುದೇನೆಂದು ತನಗೇ ತಿಳಿಯದ ಪ್ರಾಣಿ. ಈಗ ಈಚೆಗೆ, ಈಗ ಆಚೆಗೆ ಕಾಲಿಟ್ಟು, ಕೂನೆಗೆ ಯಾವುದೊಂದನ್ನು ಹಿಂಬಾಲಿಸಿಯೇ ನಡೆವುದು. ಸ್ವತಂತ್ರಬುದ್ಧಿಯೇ ಇಲ್ಲದ ಈ ಪ್ರಾಣಿ ಇನ್ನೇನು ಮಾಡೀತು? ಹಿಂದಿನಲ್ಲಿದ್ದ ಎಲ್ಲ ಕುರಿಗಳನ್ನು ಕರೆದರೂ ಹೀಗೆಯೆ. ಹಿರಿಯವು—'ಬಾ-ಬಾ'-ಎಂದುವು; ಕಿರಿಯವು—'ಮಾ-ಮಾ'—ಎಂದುವು. ಎಲ್ಲವೂ ಒಂದುಗೂಡಿ, ಕಂಟಿಯನ್ನು ಕಣ್ಬೆಟ್ಟು ನೋಡಿಯೆ ಸುಮ್ಮನೆ ನಿಂತುವು.

ಬಾಲವಿನೋದ

ಕಂಟಿಗೆ ಸಿಟ್ಟಾಯಿತು. ಏನು ಅನವಮಾನ? ಮಾತಿಗೆ ಮಾತಿಲ್ಲದೆ, ಎಲ್ಲವೂ ಕೂಡಿ, ಹೀಗೆ ಗೃಹಸ್ಥವಳಿಗೆಯಿಲ್ಲದೆ ಮೂಕರಾಗಿ ಅದನ್ನೆ ನೋಡುವುದೆಂದರೇನು? ಕಂಟಿಕಾಯಿಗಳು ಕೆಂಪಾದುವು; ಮುಳ್ಳುಗಳು ಮೊನೆನೀಡಿದುವು; 'ಏನು ಮಾತಿಲ್ಲ? ನಿಮ್ಮ ಉಣ್ಣೆ ನನಗೆ ಕೊಡಿರಿ; ನಾನು ದೂರ ದೇಶಕ್ಕೆ ಒಯ್ದು ಅದನ್ನು ಮಾರುವೆನು.' ಎಂದಿತು.

'ಮಾ—ಬಾ'ಗಳಲ್ಲದೆ ಬೇರೆ ಮಾತೇ ಹೊರಡಲಿಲ್ಲ; ನೆಟ್ಟ ದೃಷ್ಟಿ ಅಲ್ಲಿಂದ ತಿರುಗಲಿಲ್ಲ.

ಕಂಟಿಯು ಕುರುಬನ ಒಳಿಗೆ ಬಂದು, ತನ್ನ ಉದ್ದೇಶವನ್ನು ವಿವರಿಸಿತು.

'ಕಂಟಿರಾಯಾ, ಕೊಡುವೆ, ಬೇಕಾದ ಉಣ್ಣೆ ಕೊಡುವೆ. ಉಣ್ಣೆ ಕತ್ತರಿಸಿಲ್ಲ, ಕುರಿಗಳ ಬೆನ್ನ ಮೇಲೆಯೆ ಇದೆ. ಕತ್ತರಿಸಿದಾಗಲೆ ಮಾರುತ್ತೇನೆ,—ನಿಮಗೇ. ನೀವು ಹಣ ಗಳಿಸಿದ ಬಳಿಕ ನನಗೆ ಕ್ರಯ ತೆತ್ತರೆ ಸಾಕು. ದೇವರಿದ್ದಾನೆ, ನಿಮಗೆ ಒಳ್ಳೇ ನಫೆ, ನನಗೆ ಒಳ್ಳೇ ಕ್ರಯ,' ಎಂದು ನಗುತ್ತ ಮಾತು ಕೊಟ್ಟನು. ಸಾಟೆಯಾಯಿತು.

ದೋಣಿಗಾರನೂ ಕುರುಬನಷ್ಟೆ ಪ್ರೀತಿಯಿಂದ, ದೋಣಿ ಕೊಡಲೊಪ್ಪಿದನು. ಮೂವರು ಪಾಲುಗಾರರ ಬಳಿ ಹಣ ವಿರಲಿಲ್ಲ. ಉಣ್ಣೆ ಮಾರುತ್ತಲೆ, ದೋಣಿಯ ಮತ್ತು ಉಣ್ಣೆಯ ಕ್ರಯವನ್ನು ಅವರವರಿಗೆ ಪಾವತಿಕೊಟ್ಟು ರಸೀದಿ ಪಡೆಯುವುದೆಂದು ಎಲ್ಲರೊಳಗೆ ಖಂಡಿತ ಮಾತಾಯಿತು.

ಉಣ್ಣೆ ರಾಶಿಯನ್ನು ದೋಣಿಯಲ್ಲಿ ತುಂಬಿಸಿದರು. ದೋಣಿ ಹೊರಟಿತು. ವಿಂಗುಳಿ ರಾಯನೆ ನಾವಿಕ; ಬಾವಲಿ ಪ್ರಯಾಣಿಕ, ಮಾರಾಟದ ಕೆಲಸವೆಲ್ಲ ಅದಕ್ಕೆ; ಕಂಟಿಯು ಹಾಯಿ ಕಂಬದ ಬದಲು ತಾನೆ ನಿಂತಿತು. ವಿಂಗುಳಿಯ ಕೊಕ್ಕು ಚುಕ್ಕಾಣಿಯಂತಾಗಿದ್ದಿತು, ಬಾವಲಿಯ ರೆಕ್ಕೆ ಹಾಯಿಯಂತಾಗಿದ್ದಿತು; ಕಂಟಿ ಕೂವೆನುರ. ಸರಿ, ಇನ್ನೇನು, ದೋಣಿ ಪರಬಂದರಕ್ಕೆ ಉಣ್ಣೆ ಹೇರು ಸರಕಿನೊಡನೆ ಪ್ರಯಾಣಮಾಡಿತು.

ಎಲ್ಲರ ಮನಸ್ಸಿನಲ್ಲಿಯೂ ತುಂಬ ಸಂತೋಷ; ಇನ್ನೇನು, ಮಾರಿದರಾಯಿತು. ದೋಣಿ—ಉಣ್ಣೆ ಇವುಗಳ ಕ್ರಯ ತೆತ್ತು, ಉಳಿದೆಲ್ಲ ಅಪಾರ ಧನವು ನಫೆಯೆ! ಪ್ರತಿಯೊಬ್ಬರೂ ಶ್ರೀಮಂತರು! ವೃದ್ಧಾಪ್ಯಕ್ಕೆ ಇನ್ನು ಬೆದರುವುದೂ ಬೇಡ, ಸುಖಜೀವನಕ್ಕಾಗಿ ಇನ್ನೂ ಚಿಂತೆಯೂ ಇಲ್ಲ!

ಮನಸ್ಸಿನ ಮಂಡಿಗೆ ಎಂಬುದೊಂದುಂಟು. ತಲೆಯಲ್ಲಿಯೆ ಎಣಿಸಿ ಎಣಿಸಿ, ಮನಸ್ಸಿನಲ್ಲಿ ತಯಾರಿಸಿ, ಕನಸಿನಲ್ಲೇ ಅದನ್ನು ತಿಂದು, ತುಟಿ ಚಪ್ಪರಿಸಿ, ತೇಗಿ, ನಂತರ ಕಾರುವಾಗ ತಾನೆ ನಿದ್ದೆಯಿಂದ ಎಚ್ಚರವಾಗುವುದು! ಹಾಗೆ, ಈ ಪಾಲುಗಾರರು ಎಣಿಸಿದ್ದೊಂದು, ದೈನವು ಮಾಡಿದ್ದೊಂದು ಎಂದಾಯಿತು.

ಸಮುದ್ರದಲ್ಲಿ ಅರ್ಧ ದೂರ ಹೋಗುವ ತನಕ ಗಾಳಿಯೆ ಇವರಿಗೆ ಬೆಂಬಲವಾಗಿದ್ದಿತು. ಅನಂತರ, ಅದು ಮುಂಬಲವಾಗಿ ಬೀಸಿ, ತೆರೆಗಳನ್ನೆಬ್ಬಿಸಿ, ದೋಣಿಯನ್ನು ಆಕಾಶಕ್ಕೆತ್ತಿ ಪಾತಾಳಕ್ಕಿಳಿಸುತಿದ್ದಿತ!

ವಿಂಗುಳಿಯ ಕೊಕ್ಕಿನ ಚುಕ್ಕಾಣಿ ಸಿಕ್ಕಾಬಟ್ಟೆ ತಿರುಗಿತು. ಕಂಟೀ ಕೂವೆನುರ ಹಸುರುಗೆಟ್ಟಿತು. ಬಾವಲಿ ಹಾಯಿ ತಲೆ ಕೆಳಗಾಯಿತು. ಇನ್ನೇನು ಮಾಡಲಾದೀತು? ವಿಂಗುಳಿ ಉಳಿದಿಬ್ಬರನ್ನು ಎಷ್ಟು ಎಚ್ಚರಿಸಿ, ಗದರಿಸಿ, ಬೇಡಿ, ಕಾಡಿದರೂ, ಇಬ್ಬರೂ 'ಊಹೂಂ' ಎನ್ನಲೂ ಹೆದರಿದರು. ಅವುಗಳಿಗೆ ಕಡಲಕಾಹಿಲೆಯಾಗಿದ್ದಿತು! ಪಿತ್ತಭ್ರಮೆ.

ಗುಡುಗು ಗುಡುಗಿತು. ಸಿಡಿಲು ಎರಗಿತು. ದೋಣಿ ಮೇಲಕ್ಕೆ ಏರಿ ಕೆಳಕ್ಕೆ ಬಿತ್ತು. ಬಿಸ್ಕುದೊಂದು ಬಂಡೆಯ ತುದಿಗೆ. ತೂತೊಡೆಯಿತು. ದೋಣಿ ತುಂಬ ನೀರು; ಉಣ್ಣೆಯ ಮೇಲೆಲ್ಲ ಉಪ್ಪುನೀರು.

'ಓ' ಎಂದಿತು ಬಾವಲಿ; ಕಂಟಿ ಜಳಿಹಿಡಿದು ನಡುಗಿತು. ಕೂಗಾಟ ಕೇಳಲು ಗಾಳಿಯ ಘೋಷ ಬಲವಾಗಿ, ಒಬ್ಬರ ಮಾತು ಮತ್ತೊಬ್ಬರಿಗೆ ಕೇಳಿಸದೆ, ತಮ್ಮನ್ನು ತಾವೆ ಉಳಿಸುವ ಉಪಾಯ ತಿಳಿಯದೆ, ಏನಾಯಿತೆಂದು ಗೊತ್ತಾಗುವ ಮೊದಲೇ ದೋಣಿ ಮುಳುಗಿತು.

ವಿಂಗುಳಿ ಜಾಣ. ಬಾವಲಿಯೂ ಕಂಟಿಯೂ ಮುಳುಗಬಾರದೆಂದು ಒಂದನ್ನೊಂದು ಆಧಾರಕ್ಕಾಗಿ ಹಿಡಿದುಕೊಂಡು, ಎರಡೂ ಮುಳುಗಿದುವು.

ಒಂದನೆ ಪಾಲುಗಾರ ವಿಂಗುಳಿ. ಇವರೆಲ್ಲರ ಸಾಲ ತನ್ನ ತಲೇ ಮೇಲೆ ಎಂದು ತಿಳಿದು, ಹೇಗೂ ಮಾಡಿ, ಅವರ ಹಿಂದೆ ಹಾರಾಡುತ್ತ, ಕಂಟಿಕೋಲನ್ನು ಕೊಕ್ಕಿನಲ್ಲಿ ಕಚ್ಚಿ ಹಿಡಿಯಿತು; ಬಾವಲಿಯು ಆ ಕಂಟಿಕೋಲಿಗೆ ತೂಗಿಕೊಂಡಿತು.

ಹೇಗೂ ಮಾಡಿ, ಮೂರೂ ತೀರವನ್ನು ಸೇರಿದುವು.

ದೋಣಿ ಇಲ್ಲ, ಉಣ್ಣೆ ಇಲ್ಲ. ಇವರು ಸಾಲ ತೀರಿಸುವ ಬಗೆ ಹೇಗೆ? ಆದರೂ ಮರ್ಯಾದೆಯುಳ್ಳ ವ್ಯಾಪಾರಿಗಳು. ಸಾಲ ತೆರುವ ವರೆಗೆ ಮುಖ ತೋರಿಸುವುದಕ್ಕುಂಟೆ?

'ಆ ದೋಣಿಯನ್ನು ಹೇಗೂ ಮಾಡಿ, ನೀರಿನಿಂದ ಮೇಲಕ್ಕೆತ್ತಿ ತರುವೆನು,' ಎಂದು ವಿಂಗುಳಿ ಹೇಳಿತು.

'ದೋಣಿಯನ್ನು ಮೇಲಕ್ಕೆ ತಂದರೂ, ಉಣ್ಣೆ ಅದರಲ್ಲಿ ಉಳಿದಿದ್ದೀತೆ? ಉಣ್ಣೆಯನ್ನು ನಾನು ಕೂಡಿಸಾಕುವ ಪ್ರಯತ್ನ ಮಾಡಲೇ ಬೇಕು,' ಎಂದು ಮುಳ್ಳುಕಂಟಿ ಎಂದಿತು.

ಅಂದಿನಿಂದ ಇಂದಿನ ವರೆಗೂ ಇವೆರಡೂ ದೋಣಿಯನ್ನು ನೀರಿಂದೆತ್ತಿ ತರಲೂ ಉಣ್ಣೆಯನ್ನು ಕೂಡಿಸಿ ಹೇರು ಕಟ್ಟಲೂ ಪ್ರಯತ್ನಪಡುತ್ತ ಇವೆ. ಆದರೂ ಅದ್ರು, ಸಾಧ್ಯವಾಗಿಲ್ಲ.

ಬಾವಲಿಗೆ ಇನ್ನು ಮೋರೆ ತೋರಿಸುವುದಕ್ಕಿದೆಯೆ? ಅದು, ಹಗಲಲ್ಲಿ ಹೊರಗೆ ಕಾಣಿಸಿಕೊಳ್ಳುವುದೇ ಇಲ್ಲ. ಸಂಜೆಯ ತರುವಾಯ ತಾನೆ ಹಾರಾಡುವುದು. ಸಾಲ ತೀರಿಸದೆ ಮುಖ ತೋರಿಸುವುದು ಮರ್ಯಾದೆಯೆ?

ಕಡಲ ತಡಿಗೆ ಹೋಗಿ ನೋಡಿರಿ. ವಿಂಗುಳಿಯು ಇಂದೂ ನೀರಲ್ಲಿ ಮುಳುಗುತ್ತ ದೋಣಿಯನ್ನು ಹುಡುಕುತ್ತಿದೆ. ಮುಳುಗಿ ಎದ್ದು ಮುಳುಗಿ ಎದ್ದು, ಅದರ ಮಾತು ಇನ್ನೂ ಮುಗಿಸಲಾರದೆ ಇದೆ. ದೋಣಿ ಸಿಕ್ಕಿಲ್ಲ.

ಮುಳ್ಳುಕಂಟಿ ಯಾವಾಗಲು ಕುರಿಗಳನ್ನು ಕಾದು ನಿಂತು, ಅವು ಹತ್ತಿರ ಬರುತ್ತಲೆ ಇಷ್ಟು ಉಣ್ಣೆಯನ್ನು ಅವುಗಳ ಬೆನ್ನ ಮೇಲಿಂದ ಕಿತ್ತು ಇಟ್ಟುಕೊಳ್ಳುತ್ತಿದೆ. ನೀವೂ ಅದರ ಹತ್ತಿರ ಹೋದರೆ, ನಿಮ್ಮ ಬಟ್ಟೆಯ ಒಂದು ನೂಲನ್ನಾದರೂ ಅದು ಕಿತ್ತುಕೊಳ್ಳದೆ ಇರಲಾರದು. ಅದು ಇನ್ನೂ ಉಣ್ಣೇ ಹೇರನ್ನು ಕೂಡಿಸಲಾರದೆ ಇದೆ.

DIAMONDS! DIAMONDS!
BEST BRILLIANCY!
K. R. K. SHET,
Near Mission High School, MANGALORE.
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!
ವಜ್ರಗಳು! ಎಮ್ ಸ್ಟ್ಯಾಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.
ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.
ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಸದ್ಯದಲ್ಲೆ ಹಂಪನಕಟ್ಟೆಯಲ್ಲಿ ತೆರೆಯಲಾಗುವುದು.
ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶ್ಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಚಿತ್ರಾ ಟೊಕಿಸ್,
(ಮಾಜಿ ಹಿಂದೂಸ್ಥಾನ್ ಥಿಯೇಟರ್)
ಮಂಗಳೂರು,
ಇವರು
ಶ್ರೇಷ್ಠ ತರಗತಿಯ ಫಿಡೆಲಿಟಿ ಸೌಂಡ್ ಸಿಸ್ಟಂ ಯಂತ್ರದಿಂದ ಸದ್ಯದಲ್ಲೇ
ಪ್ರಭಾತ ಸಿನೆಟೋನಿನವರ ಪ್ರಖ್ಯಾತ ಪೌರಾಣಿಕ
"ಚಂದ್ರಸೇನಾ"
ಚಿತ್ರದೊಡನೆ ಪ್ರದರ್ಶನಗಳನ್ನಾರಂಭಿಸುವರು.
ಧ್ವನಿಯು ಅತ್ಯಂತ ಸ್ಪಷ್ಟ!

"ಚೋದ್ಯಪುರದ ಚೋದಿಗರಾಯ"
[ಆತ್ಯುತ್ತಮವಾದ ಪೊಲಿಟಿಕಲ್ ನಾವೆಲ್ಲು. ಡೆಮ್ಮಿ ಪುಟ ೩೫೨.]
ನುಣುಪಾದ ಕಾಗದ. ಬೆಲೆ ೨ ರೂ. ರಫ್ ಕಾಗದ ೧೫೫-ರೂ.
"ಮೋಜಿನ ಜೀವನ"
ಮನೋಹರವಾದ ಪತ್ತೇದಾರಿ ಕಥೆ. ಕ್ರೌನ್ ಪುಟ ೨೨೪.
ನುಣುಪಾದ ಕಾಗದ—ಬೆಲೆ ೧೫ ರೂ. ರಫ್ ಕಾಗದ—೧ ರೂ.
ಶ್ರೀ ಶೇಷಾಚಲ ಗ್ರಂಥಮಾಲೆಯು ಕಾಯಂ ಗ್ರಾಹಕರಿಗೆ ಟಪಾಲು ಖರ್ಚು ಬೀಳುವುದಿಲ್ಲ. ಇವಲ್ಲದೆ ನಮ್ಮಲ್ಲಿ ಐತಿಹಾಸಿಕ-ಸಾಮಾಜಿಕ-ಪತ್ತೇದಾರಿ ನಾವೆಲ್ಲು, ಚರಿತ್ರೆ-ಪೌರಾಣಿಕ-ಪಾರಮಾರ್ಥಿಕ ಮುಂತಾದ ೧೫೦ ಬಗೆಯ ಸುಂದರವಾದ ಪುಸ್ತಕಗಳು ದೊರೆಯುತ್ತವೆ. ಕ್ಯಾಟಲಾಗಿಗೆ ಕೂಡಲೇ ಬರೆಯಿರಿ.
ಶ್ರೀ ಶೇಷಾಚಲ ಪ್ರೆಸ್ಸು,
ಪೋಸ್ಟು ಆನಂದವನ, (ಜಿ. ಧಾರವಾಡ.)

ಪ್ಲೀಹ ಮತ್ತು ಯಕೃತ್ತಿನ ಬೆಳವಣಿಗೆಯಿಂದ

ಮಕ್ಕಳನ್ನು ಕಾಪಾಡಿರಿ.

ಬಾಲಸಂಜೀವಿನಿಯನ್ನು ಉಪಯೋಗಿಸಿರಿ.

(ರಿಜಿಸ್ಟರ್ಡ್)

ಉತ್ತಮ, ಖರೆ ಮತ್ತು ತಾಜಾ ಆದ ಅದೊಂದೇ

ವಿಜಯನಗರಂ ಔಷಧ.

ವಿ. ಸೂ. ಅನೇಕ ಡಾಕ್ಟರರೂ, ಹೆತ್ತವರೂ 'ಬಾಲಸಂಜೀವಿನಿ' ಮಾತ್ರ ಈ ಭಯಂಕರ ರೋಗವನ್ನು ಎಷ್ಟೇ ಕಠಿಣತರ ದ್ದಾಗಿದ್ದರೂ ಫಲಕಾರಿಯಾಗಿ ಗುಣಪಡಿಸಬಲ್ಲುದೆಂದು ಅನುಭವ ಮಾಡಿಕೊಂಡಿರುವರು. ಅನೇಕ ಮಕ್ಕಳು ಇತರ ಎಲ್ಲಾ ಔಷಧಗಳನ್ನು ಉಪಯೋಗಿಸಿ, ಗುಣವನ್ನು ಪಡೆಯದೆ, ಇದನ್ನುಪಯೋಗಿಸಿ ಸಂಪೂರ್ಣ ಗುಣಲಾಭ ಪಡೆದಿರುವರು.

ಪಿಳ್ಳಾ ಪಾಪಯ್ಯ್ಯ ಪಾತ್ರುಡು ಮತ್ತು ಸಹೋದರ,.

(ವಿಜಯನಗರಂ ಸಂಸ್ಥಾನದ ಆಯುರ್ವೇದ ಪಂಡಿತರು),

98—99 ಬ್ರೋಡೀಸ್ ರೋಡ್, ಮೈಳಾಪುರ್, :: ಮದ್ರಾಸು.

(ರಾಮಕೃಷ್ಣ ಮಠದ ಎದುರು).

The Kanara Enterprise Ltd., Puttur.

Estd: 1920] [1920ರಲ್ಲು ಸ್ಥಾಪಿತವಾಗಿದ್ದು.

ದಿ ಕೆನರಾ ಎಂಟರ್‌ಪ್ರೈಸ್ ಲಿಮಿಟೆಡ್, ಪುತ್ತೂರು.

ಠೇವಣಾತಿಗಳ ದರ.

ನಿರಖು ಠೇವಣಾತಿಗಳು. 3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

'ಸೇವಿಂಗ್ಸ್ ಬೇಂಕ್' ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

'ಚಾಲ್ತಿ ಠೇವಣಾತಿಗಳು' ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರಕೊಳ್ಳುವುದು.

ಬೇಂಕಿನ ಆಫೀಸು,
ಪುತ್ತೂರು.
ತಾ. 10—4—1935.

G. N. LAKSHMAN PAI,
ಸೆಕ್ರಟರಿ.

The Reliance Assurance Company Limited, Bangalore City.

ದಿ ರಿಲೈಯನ್ಸ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಹೊಸತರುಗು ಪೇಟೆ, ಬೆಂಗಳೂರು ಸಿಟಿ.

ಈ ವರಿವಿಗೆ ಕೊಟ್ಟಿರುವ ಹಕ್ಕಿನ ಹಣ ರೂ. 2,85,000. ಅಭಿವೃದ್ಧಿ ಹೊಂದುತ್ತಿರುವ ಸಂಪೂರ್ಣ ಸ್ವದೇಶಿ ಕಂಪೆನಿ.

1. ಪಾಲಿಸಿಯು ತಾನಾಗಿಯೇ ಜಾರಿಯಲ್ಲಿರುವ ಕ್ರಮ.
2. ರದ್ದಾದ ಪಾಲಿಸಿಗಳನ್ನು ಪುನಃ ಜಾರಿಗೆ ತರುವುದು.
3. ಸ್ಥಿರವಾದ ಆಶಕ್ತತೆಗೆ ರಿಯಾಯತಿ.
4. ಭರವಸೆಯಾದ ಸರೆಂಡರ್ ವ್ಯಾಲ್ಯು. ಮತ್ತು ಪೈಡಪ್ ಪಾಲಿಸಿಗಳನ್ನು ಪಡೆಯುವಿಕೆ.
5. ಇಮ್ಮಡಿ ಹಣ ಪಡೆಯುವಿಕೆ.
6. ಸರೆಂಡರ್ ವ್ಯಾಲ್ಯುವಿನ ಸೇಕಡ 90ರಷ್ಟು ಸಾಲಗಳನ್ನು ಪಡೆಯುವಿಕೆ.

ಇವು ರಿಲೈಯನ್ಸ್ ಕಂಪೆನಿಯ ವಿಶೇಷತೆಗಳು.

ಸಮರ್ಥರಾದ ಚೀಫ್ ಏಜಂಟರುಗಳೂ ಮತ್ತು ಆರ್ಗನೈಸರುಗಳೂ, ಧಾರವಾಡ, ಬಳ್ಳಾರಿ, ಬೆಳಗಾಂ, ಬಿಜಾಪುರ ಜಿಲ್ಲೆಗಳಿಗೂ ಮತ್ತು ತುಂಗಳೂರು ಪ್ರಾಂತ್ಯಕ್ಕೂ ಬೇಕಾಗಿದ್ದಾರೆ.

ತಿರುಪತಿ ಬಲಿಜಾ ಅಂಡ್ ಕಂಪೆನಿ,
ಮ್ಯಾನೇಜಿಂಗ್ ಏಜಂಟರುಗಳು.

ಹಿಂದೀ ಕೊಂಗ್ರೆಸಿನ ಮತ್ತು ಇತರ ವಸ್ತುಪ್ರದರ್ಶನಗಳಲ್ಲಿ ಬಹುವಾನ ಪದಕಗಳನ್ನೂ ಶಿಫಾರಸುಪತ್ರಗಳನ್ನೂ ಹೊಂದಿದೆ.

ರಿಜಿಸ್ಟರ್ಡ್

ಟ್ರೇಡ್‌ಮಾರ್ಕ್.

ಡಾ. ವಾಮನ್ ಗೋಪಾಲರ

ಸರ್ಸಪರಿಲ್ಲಾ

೬ ವರ್ಷಗಳ ಅನುಭವದಿಂದ ಮಿಲ್ಲಿಯಗಟ್ಟೆ ಜನರು, ರಕ್ತ ಶುದ್ಧಿಕಾರಕ ಔಷಧಿಗಳಲ್ಲಿ ಇದೇ ಉತ್ತಮವೆಂದು ಕಂಠೋಕ್ತವಾಗಿ ಹೊಗಳುತ್ತಿರುವ ಡಾ। ಗೌತಮರಾವ್ ಕೇಶವರಾವ್‌ರವರ ಜೊನಿಕ್ ಫೊಸ್ಫರಸ್ ಮಾತ್ರೆಗಳನ್ನೊಮ್ಮೆ ಸೇವಿಸಿ ನೋಡಿ.

ಡಾ। ಗೌತಮರಾವ್ ಕೇಶವ್ ಎಂಡ್ ಸನ್, ಥಾಕೂರ್‌ದ್ವಾರ್ 2, ಬೊಂಬಾಯಿ.

ಅಶಕ್ತ ಮಕ್ಕಳು

ಡೋಂಗರೆ

ಇವರ

ಬಾಲಾಮೃತ.

ವನ್ನು

ಕೊಡುವುದರಿಂದ

ಸಶಕ್ತರೂ, ಪುಷ್ಟರೂ ಮತ್ತು

ಸಂತೋಷಚಿತ್ತರೂ ಆಗುವರು.

ಕೆ. ಟೀ. ಡೋಂಗರೆ ಕಂಪೆನಿ,
ಗಿರಗಾಂವ, ಮುಂಬಯಿ.

PAINTERS

Do you require the service of a painter
Please call or write to:

THE MANGALORE ART WORKS,
Hampankatta, Mangalore.

K. NAGAPPA RAO,

MANGALORE JEWELLER,
Dadoba Jagannath Trust Building, Gamdevi,
BOMBAY.

High class Jewellery of the latest designs manufactured.

DEALERS IN

All sorts of precious stones, Diamonds, Pearls. Moderate Rate. Ready made ornaments of up-to-date style are always in stock.

Orders—accepted, for all kinds of ornaments, which will be manufactured on short notice—prompt delivery. Reasonable charges.

A trial will ensure satisfaction.

ರುಚಿಯಾದ ತೀನಿ.

ನಿಮ್ಮ ನಿತ್ಯದ ತಿಂಡಿ ಪಲ್ಯಗಳಲ್ಲಿ ಎ. ಕೆ. ಮಾರ್ಕಿನ ಹಿಂಗನ್ನು ಉಪಯೋಗಿಸಿರಿ. ದಬ್ಬಾ 1ಕ್ಕೆ 0-2-6, 0-3-0, 0—4—0, 0—12—0, 1—2—0, 2—0—0.

ವಿಳಾಸ:— ಷಾ ಕಂಪೆನಿ, ಮಂಗಳೂರು.

ಬೆಲೆ ಬಹು ಸುಲಭ! | ಒಂದೇ ದರ!! | ಹೊಸ ಜವ್ವಳಿಗಳು!!!

ಮ್ಹಾಲುಗಳ ಬಣ್ಣ, ಮೊಳ ಮುಂತಾದ ನಿಜಸ್ಥಿತಿಗಳನ್ನು ಹೇಳಿಯೇ ಮಾರಲ್ಪಡುತ್ತದೆ.

ಒಮ್ಮೆ ದಯಮಾಡಿ ಬಂದು ನಮ್ಮ ಮಳಿಗೆಯನ್ನು ಸಂದರ್ಶಿಸಿದ್ದಲ್ಲಿ ಮನಸ್ಸಿಗೆ ಸಮಾಧಾನ ಕಂಡೀತು.

ಈಗಿನ ಹೊಸ ಹೊಸ ಫೇಶನುಗಳಿಗೂ, ಮದುವೆ ಮೊದಲಾದ ಶುಭಕಾರ್ಯಗಳಿಗೂ ಬೇಕಾದ ನಮೂನೆವಾರು ರೇಶ್ಮೆ ಜರಿ ಶೀರೆಗಳೂ, ಬೇರೆ ಬೇರೆ ಪ್ರಾಂತದ ಕೈನುಗ್ಗಗಳಲ್ಲಿ ತಯಾರಾದ ಅನೇಕ ವಿಧದ ಸ್ವದೇಶಿ ಶೀರೆಗಳೂ, ಮಂಗಳೂರು ಉಡ್ಪಿಯಲ್ಲಿ ತಯಾರಾದ ಮಿಶನ್ ಮಗ್ಗದ ಶೀರೆಗಳೂ ರಖಂ ಮತ್ತು ಚಿಲ್ಲರೆಯಾಗಿ ದೊರೆಯುತ್ತವೆ.

ಸಿಲ್ಕು, ಜರಿ ಮತ್ತು ನೂಲಿನ ನಾಜೂಕಾದ ಧೋತ್ರಿಗಳು, ಶಾಲು, ರುಮಾಲುಗಳು, ಮಡಿಗಳು, ಕೋಟಿಂಗ್ ಮತ್ತು ಶರ್ಟಿಂಗ್ ಬಟ್ಟೆಗಳೂ, ಇನ್ನೂ ಅನೇಕಾನೇಕ ನಮೂನೆವಾರು ಜವುಳಿಗಳೂ ಕೂಡಾ ರಖಂ ಮತ್ತು ಚಿಲ್ಲರೆಯಾಗಿ ಮಾರಾಟಕ್ಕಿವೆ.

☞ **ವಿ. ಸೂ:—** ನಮ್ಮಲ್ಲಿ ಕೊಡೆದ ಮ್ಹಾಲು ಬೇರೆ ಕಡೆಗಳಿಗಿಂತ ಬೆಲೆ ಸುಲಭವಲ್ಲವೆಂತ ಕಂಡುಬಂದಲ್ಲಿ ಯಾ ಇತರ ಕಾರಣಗಳಿಂದಾಗಲಿ ಬೇಡವೆಂತ ತೋರಿದ್ದಲ್ಲಿ ಹಾಳು ಮಾಡದೆ **8** ದಿವಸದೊಳಗೆ ವಾಪಾಸು ಮಾಡಬಹುದು.

ಸೇಲಂಕಾರ್ ಎ. ಪರದರಾಜು ಚೆಟ್ಟಿಯಾರ್, ಜವುಳಿ ಅಂಗಡಿ, ಮಾರ್ಕೆಟು ರಸ್ತೆ, ಮಂಗಳೂರು.

ತಾಯಂದಿರ ಕರ್ತವ್ಯ

(ಲೇಖಕಿ:—ಎಚ್. ಕೆ. ಪಾರ್ವತಮ್ಮ, ಮಲ್ಲೇಶ್ವರ, ಬೆಂಗಳೂರು ಸಿಟಿ.)

ಮಕ್ಕಳ ವಿದ್ಯಾಭ್ಯಾಸದಲ್ಲಿ ನಮ್ಮ ಮಹಿಳೆಯರ ಪಾತ್ರವು ಮಹತ್ವವಾದದ್ದಾಗಿದೆ. ವಿದ್ಯಾಭ್ಯಾಸಕ್ಕೆ ಮನೆಯಲ್ಲಿ ತಾಯಿಯೇ ತಳಹದಿ. ಅವರು ಸರಿಯಾದ ರೀತಿಯಲ್ಲಿ ಮಕ್ಕಳನ್ನು ತರಬೇತು ಮಾಡಿದರೆ ಅವರು ಮುಂದೆ ಅಭಿವೃದ್ಧಿಯಾಗುವುದಕ್ಕೆ ಸಹಕಾರಿಯಾಗುವುದು. ಆದರೆ ಮಹಿಳೆಯರು ಮಕ್ಕಳಿಗೆ ಯಾವ ರೀತಿಯ ಶಿಕ್ಷಣವನ್ನು ಕೊಡಬೇಕೆನ್ನುವ ವಿಷಯವನ್ನು ಪರಸ್ಪರ ಸಮ್ಮಿಳನದಿಂದಲೂ ಸಮಾಲೋಚನೆಗಳಿಂದಲೂ ನಿರ್ಧರಿಸಬೇಕಾಗಿದೆ. ಆದರೆ ಈಗಿನ ನಮ್ಮ ಸಮಾಜಪದ್ಧತಿಯಲ್ಲಿ ಈ ಪರಸ್ಪರ ಸಮಾಲೋಚನೆಗೆ ಅವಕಾಶವೇ ಇಲ್ಲ. ನಮ್ಮ ಸಮಾಜದ ಕಟ್ಟಳೆಗಳು ನಮ್ಮನ್ನು ಬಿಗಿದಿವೆ. ಬೇರೆ ಬೇರೆ ಮತಾನುಯಾಯಿಗಳಾದ ಸ್ತ್ರೀಯರು ಪ್ರತ್ಯೇಕಿಸಲ್ಪಟ್ಟಿದ್ದಾರೆ. ಸ್ತ್ರೀಯರೆಂದರೆ ಎಲ್ಲೆಲ್ಲೂ ಸ್ತ್ರೀಯರೇ. ಅವರ ಕರ್ತವ್ಯಪರಿಪಾಲನೆಯಾದರೂ ಒಂದೇ ರೀತಿಯದು. ಹಿಂದೂ ಜನಾಂಗಕ್ಕೆ ಸೇರಿದವರಾಗಲೀ ಮುಸ್ಲಿಂ ಜನಾಂಗಕ್ಕೆ ಸೇರಿದವರಾಗಲೀ ಕ್ರೈಸ್ತ ಜನಾಂಗಕ್ಕೆ ಸೇರಿದವರಾಗಲೀ ಸ್ತ್ರೀಯರು ಒಂದೇ. ಅವರು ತಾಯಿಯರಾಗಿ, ಸಹೋದರಿಯರಾಗಿ, ಪತ್ನಿಯರಾಗಿ ಮಾಡಬೇಕಾದ ಕರ್ತವ್ಯವೆಲ್ಲವೂ ಒಂದೇ. ಅವರೆಲ್ಲರಿಗೂ ಸ್ತ್ರೀ ಸ್ವಭಾವದ ಗುಣಗಳಿದ್ದೇ ಇರುವವು. ಅವರು ನೊಂದವರನ್ನು ಸಂತೈಸುವುದರಲ್ಲಿಯೂ, ಕ್ಷಮಾಗುಣದಲ್ಲಿಯೂ, ತಾಳ್ಮೆಯಲ್ಲಿಯೂ ಮತ್ತು ಇತರ ಗುಣಗಳಲ್ಲಿಯೂ ಒಂದೇ ಆಗಿರುವರು. ಇವೆಲ್ಲ ಸಮಾನ ಗುಣಗಳಿರುವುದರಿಂದ ಸಮಾನವಾದ ಕರ್ತವ್ಯಪರಿಪಾಲನೆಯ ಹಕ್ಕಿರುವುದರಿಂದ ಸ್ತ್ರೀಯರೆಲ್ಲರೂ ಒಂದು ಎಂಬ ಭಾವನೆಯುತ್ಪನ್ನವಾಗುವದು. ಈ ರೀತಿಯ ಏಕಮೇವ ಭಾವನೆಯುಂಟಾಗುವುದರಿಂದ ಸ್ತ್ರೀಯರು ಮಾನವ ಜನಾಂಗದ ಏಳಿಗೆಗೆ ಕಾರಣರಾಗುವರು. ಆದರೆ ಈಗ ಇರುವ ಕೃತ್ರಿಮವಾದ ಮತ್ತು ಅಸಮಂಜಸವಾದ ಪ್ರತ್ಯೇಕತೆಯು ಅನೇಕಾವರ್ತಿ ದ್ವೇಷಾಸೂಯೆಯನ್ನೂ ಪ್ರಗತಿನಿರೋಧತೆಯನ್ನೂ ಉಂಟುಮಾಡುವದು. ಈ ಮನೋಭಾವವೇ ಮುಂದೆ ಒಂದು ಜನಾಂಗವು ಇನ್ನೊಂದು ಜನಾಂಗವನ್ನು ದ್ವೇಷಿಸುವಂತೆಯೂ ತನ್ಮೂಲಕ ಅದರ ಅಧಃಪತನವಾಗುವಂತೆಯೂ ಮಾಡುವದು. ಈ ಮನೋಭಾವವು ಮೊದಲು ಹಿರಿಯರಲ್ಲಿರುವದು. ನಂತರ ಅದು ಕ್ರಮೇಣ ಕಿರಿಯರ ಮನಸ್ಸನ್ನೂ ಆಕ್ರಮಿಸುವದು. ಕಿರಿಯರೇ ಮುಂದಿನ ಪ್ರಜೆಗಳು. ಈಗ ಈ ಮನೋಭಾವವು ಮುಂದಿನ ಈ ಪ್ರಜೆಗಳನ್ನು ಭಿನ್ನತೆಯ ಮಡಲಲ್ಲಿ ಹಾಕಿ ಅಧಃಪತನಕ್ಕೆ ಇಳಿಸುವದು.

ಮಾನವ ಸಮಾಜದಲ್ಲಿ ಪ್ರೇಮವುಳ್ಳವರು ತಮ್ಮದಲ್ಲದೆ ಇತರ ಜನರ ಪದ್ಧತಿ, ನಡತೆ, ಮತ, ಸಂಸ್ಕೃತಿ ಎಲ್ಲವನ್ನೂ ಸಹಾನುಭೂತಿಯಿಂದ ಅರಿಯಬೇಕು. ತಮಗೂ ಅವರಿಗೂ ಇರುವ ಸಮಾನತೆಯನ್ನು ಕಂಡುಹಿಡಿಯಬೇಕು, ಇತರರ ಮನೋಭಾವವನ್ನರಿತು ಅದರ ಮೂಲಕ ಅದರಲ್ಲಿರುವ ಶ್ರೇಷ್ಠವಾದವುಗಳನ್ನೆಲ್ಲಾ ಹೊರತೆಗೆದು ಅವುಗಳನ್ನು ತಮ್ಮವನ್ನಾಗಿ ಮಾಡಿಕೊಳ್ಳಬೇಕು. ಇಷ್ಟೆಲ್ಲವನ್ನೂ ಮಾಡದಿದ್ದಲ್ಲಿ ನಾವು ಪರಸ್ಪರ ಸಹಕಾರದ ಮೂಲ ಮಂತ್ರವನ್ನು ಉಚ್ಚರಿಸಲಾರೆವು. ಮಹಾನುಭಾವರುಗಳು ಹೇಳುವುದೇನೆಂದರೆ ನಮ್ಮ ಈ ಪ್ರಪಂಚವು ಮುಂದಕ್ಕೆ ಬರಬೇಕಾದರೆ ಪರಸ್ಪರ ಸಹಕಾರ ಒಮ್ಮನಬೇಕು. ಪ್ರಪಂಚವು ನಮಗೆ ಬಹಳ ಸಮೀಪವಾಗಿಬಿಟ್ಟಿದೆ. ವಿಜ್ಞಾನಸಂಶೋಧನೆಗಳಿಂದ ಹಲವು ತಾಸುಗಳಲ್ಲಿಯೇ ನಾವು ಸಾವಿರಾರು ಮೈಲಿಗಳ ದೂರವನ್ನು ಕ್ರಮಿಸಲು ಶಕ್ತರಾಗಿದ್ದೇವೆ. ಹಲವು ನಿಮಿಷಗಳಲ್ಲಿಯೇ ಪ್ರಪಂಚದ ಸುದ್ದಿಯೆಲ್ಲವೂ ನಮ್ಮ ಹತ್ತಿರ ಬರುವಂತೆ ಮಾಡಿಕೊಂಡಿದ್ದೇವೆ. ಅಂದಮೇಲೆ ಈಗ ಪ್ರಗತಿಯ ಜೊತೆಗೆ ಮಾನವ ಸಂಸರ್ಗವೂ ಜೀವನದ ರೀತಿಯೂ ಇನ್ನೂ ಹೆಚ್ಚು ಹೆಚ್ಚು ಸಮೀಪವರ್ತಿಯಾಗಿ ನಡೆಯಬೇಕು. ಮತ್ತು ಪ್ರಪಂಚವೇ ಒಂದು ಎಂಬ ಮನೋಭಾವವೇರ್ಪಡಬೇಕು. ಇದಕ್ಕೆ ಸ್ತ್ರೀಯರು ಬಹಳ ಮಟ್ಟಿನ ಕೆಲಸ ಮಾಡಬಹುದು. ಸ್ತ್ರೀಯರು ತಮ್ಮ ಮಕ್ಕಳಿಗೆ ಸಾಮಾಜಿಕ ಸಾಮೀಪ್ಯವನ್ನೂ ತಮ್ಮ ಗಂಡಂದಿರಿಗೆ ಏಕ ಸಮಾನತೆಯ ತತ್ವವನ್ನೂ ಉಪದೇಶಿಸಬಹುದು. ಸ್ತ್ರೀಯರಿಗೆ ತಮ್ಮ ಮಕ್ಕಳ ಮೇಲೆಯೇ ಅಲ್ಲದೆ ತಮ್ಮ ಗಂಡಂದಿರ ಮೇಲೆಯೂ ಒಲವಾದ ಪ್ರಭಾವವಿದ್ದೇ ಇದೆ. ಆ ಪ್ರಭಾವವನ್ನು ಸದುಪಯೋಗಪಡಿಸಿಕೊಂಡು ಸ್ತ್ರೀಯರು ಮಾನವ ಜನಾಂಗವನ್ನು ಉದ್ಧರಿಸಬೇಕು.

ಈಗ ನಮ್ಮ ದೇಶದಲ್ಲಿ ಪ್ರಚಾರದಲ್ಲಿರುವ ವಿದ್ಯಾಭ್ಯಾಸ ಕ್ರಮವು ಸಮರ್ಪಕವಾಗಿಲ್ಲವೆಂಬುದು ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೂ ಕೇಳಿಬರುತ್ತಿರುವ ಕೂಗು. ಈ ವಿದ್ಯಾಭ್ಯಾಸದಲ್ಲಿ ಅದೇನೋ ನ್ಯೂನತೆಯಿದೆ. ಆ ನ್ಯೂನತೆಯೇನು? ಅದನ್ನು ನಿವಾರಿಸುವುದು ಹೇಗೆ ಎಂಬ ಸಮಸ್ಯೆಯನ್ನು ಶಿಕ್ಷಣಪ್ರವೀಣರು ನಿವಾರಿಸಬೇಕು. ವಿದ್ಯಾಭ್ಯಾಸದ ನಿಜವಾದ ತತ್ವವೇನು ಆ ತತ್ವವನ್ನು ನಮ್ಮ ಈಗಿನ ವಿದ್ಯಾ

ಹೆಂಗಸರಿಗಾಗಿ

ಭ್ಯಾಸಕ್ರಮದಲ್ಲಿ ಹೇಗೆ ಆಚರಣೆಗೆ ತರಬೇಕು ಎಂಬಂಶಗಳನ್ನು ಸ್ವಲ್ಪ ಯೋಚಿಸುವ.

ವಿದ್ಯಾಭ್ಯಾಸದ ತತ್ವವು ಹೊಸ ಯೋಚನೆಯನ್ನು ಜನತೆಯಲ್ಲಿ ಮೂಡಿಸುವುದು. ಜ್ಞಾನ ಪ್ರಚಾರಮಾಡುವುದು. ವಿಷಯವಿಮರ್ಶನಾಶಕ್ತಿಯೂ ವಿಷಯವನ್ನು ಪ್ರತಿಪಾದಿಸುವ ಶಕ್ತಿಯೂ ಬೇಕು. ವಿದ್ಯಾಭ್ಯಾಸದ ಅಂಶಗಳಲ್ಲಿ ಈ ಮೇಲಿನವು ಮುಖ್ಯವಾದುವಷ್ಟೇ. ಅವಲ್ಲದೆ ಇನ್ನೂ ಅನೇಕ ಅಂಶಗಳಿವೆ. ಸದ್ಯಕ್ಕೆ ಅವುಗಳ ಗೊಡವೆ ನಮಗೆ ಬೇಡ. ನಮ್ಮ ಈಗಿನ ವಿದ್ಯಾಭ್ಯಾಸಕ್ರಮದಲ್ಲಿ ಈ ತತ್ವಗಳಿಗೆ ಗಮನ ದೊರಿತಿದೆಯೇ? ಇಲ್ಲವೇ ಇಲ್ಲ. ಬರಿಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು ಎಂಬುದೇ ವಿದ್ಯಾಭ್ಯಾಸದ ಮುಖ್ಯ ಗುರಿ. ಈ ಮನೋಭಾವದಿಂದ ವಿದ್ಯಾಭ್ಯಾಸದ ಉಚ್ಚ ಧ್ಯೇಯವೇ ನಾಶವಾಗುತ್ತ ಬಂದಿದೆ.

ಹಾಗಾದರೆ ನಾವು ಆದರ್ಶ ವಿದ್ಯಾಭ್ಯಾಸವನ್ನು ಹೇಗೆ ಹೊಂದುವೆವು? ಅದಕ್ಕೆ ದಾರಿಯೆಲ್ಲಿದೆ? ಎಂದು ಕೇಳಬಹುದು. ಯಾವುದೇ ರಾಷ್ಟ್ರವಾಗಲೀ ಯಾವುದೇ ಜನಾಂಗವಾಗಲೀ ಆಶಿಸುವಂತಹ ರಾಷ್ಟ್ರೀಯ ಶಿಕ್ಷಣವನ್ನು ನಮ್ಮ ದೇಶವೂ ನಮ್ಮ ಜನಾಂಗವೂ ಆಶಿಸುವುದರಲ್ಲಿ ತಪ್ಪೇನಿದೆ? ನಮ್ಮಲ್ಲಿ ರಾಷ್ಟ್ರೀಯತ್ವ ಗಮನ ಬರಬೇಕು. ಮಾನವ ಜನಾಂಗದ ಪ್ರಗತಿಯನ್ನು ಸಾಧಿಸುವುದರಲ್ಲಿ ನಮ್ಮದು ನಿರತ ಪ್ರಯತ್ನ ನಡೆಯಬೇಕು. ನೈತಿಕ ಹಾಗೂ ಮಾನಸಿಕ ಪ್ರಪಂಚಗಳಲ್ಲಿ ನಮ್ಮ ರಾಷ್ಟ್ರ ಜೀವನವು ರೂಪುಗೊಳ್ಳುವಂತೆ ಮಾಡಿ ಒಂದೊಂದು ಹೆಜ್ಜೆ ಮುಂದಕ್ಕೆ ಹೋಗುತ್ತಲೇ ಇರಬೇಕು. ಮಾನವರು ಸುಮ್ಮನೆ ಕುಳಿತಿರುವುದಾಗಲೀ ತಿಳಿಯುವುದಾಗಲೀ ಅಸಾಧ್ಯವಾದ ಮಾತು. ಯಾವಾಗಲೂ ಮುಂದಕ್ಕೆ ಹೋಗುತ್ತಲಿರಬೇಕು. ಇದು ಮಾನವತೆಯ ಧರ್ಮವೇ ಹೌದು. ನಾವು ಈ ಧರ್ಮವನ್ನು ಬಿಡುವುದು ಅಸಾಧ್ಯ. ನಾವು ಸರಿಯಾದ ಕಾಲವು ಬರುವ ವರೆಗೂ ಸುಮ್ಮನಿರೋಣವೆಂದು ಹೇಳುವುದು ನ್ಯಾಯವಲ್ಲ. ಅದು ನಗೆಗೇಡಿನ ಮಾತು. ಈಗಲೇ ಕೆಲಸಕ್ಕೆ ಕೈಹಾಕಿದರೆ ಫಲವು ಈಗಲೇ ಬರಬಹುದು ಅಥವಾ ನಾಳೆ ಬರಬಹುದು. ಆದರೆ ನಾಳೆ ಕೆಲಸವನ್ನು ಪ್ರಾರಂಭಿಸೋಣವೆಂದು ಸುಮ್ಮನಿದ್ದರೆ ಆ ನಾಳೆ ಬರುವುದೇ ಇಲ್ಲ. ಅಲ್ಲದೆ ನಾವು ಬರಿಯ ಮಾತಿನಲ್ಲೇ ಪರ್ಯಟನ ಮಾಡುತ್ತಿರುವುದು ಸರಿಯಲ್ಲ. ಈಗ ಕಾರ್ಯರಂಗಕ್ಕಿಳಿಯಬೇಕಾದ ಕಾಲವು ಸಮೀಪಿಸಿದೆ. ಹಿಂದೊಂದು ಕಾಲದಲ್ಲಿ ನಾವು, ಅಲ್ಲಿ ನಮ್ಮ ಪೂರ್ವಜರು, ನಾಗರಿಕತೆಯ ಶಿಖರವನ್ನೇರಿದ್ದರೆಂದು ಹೇಳಿಕೊಂಡು ಸುಮ್ಮನಿರಲೂ ಆಗುವುದಿಲ್ಲ. ಅವರು ನಾಗರಿಕತೆಯ ಮುಗಿಲನ್ನೇರಿರಬಹುದು. ಆದರೆ ನಾವು? ನಾವು ಕಳೆದು ಹೋದ ಹಿಂದಿನ ಸ್ವಪ್ನವನ್ನೇ ನೆನೆಸುತ್ತಾ ಕುಳಿತರೆ ಭವಿಷ್ಯವೇನಾಗಬೇಕು? ಸ್ತ್ರೀಯರು ಈ ವಿಧವಾಗಿ ಕಳೆದುಹೋದುದನ್ನೇ ನೆನೆಯುತ್ತಾ ಕುಳಿತಿರುವುದನ್ನು ವಯಸ್ಸಾದ ಸ್ತ್ರೀಯರಿಗೆ ಬಿಟ್ಟು ತರುಣಿಯರಾದವರು ಇನ್ನು ಮುಂದೆ ಪ್ರಪಂಚವನ್ನು ಅನುಭವಿಸತಕ್ಕವರು ಜನಾಂಗದ ಸೇವೆಯನ್ನು ಮಾಡಲು ಸಂಪೂರ್ಣ ಅವಕಾಶ ಹೊಂದಿರುವ ಯುವತಿಯರು ಕಾರ್ಯರಂಗಕ್ಕೆ ಇಳಿಯಬಹುದು.

"ಸರಸ್ವತಿ"

WANTED

A private teacher. Apply with particulars, stating the minimum pay required, to Mr. Kanjarpane Gopalkrishnaya.

Sullia Post, S. Kanara.

2, 14-1.

ವಜ್ರಗಳು ವಜ್ರಗಳು ವಜ್ರಗಳು

ನಮ್ಮಲ್ಲಿ ಅಂಟವರ್ಪ ನಿಂದ ಸೀದಾತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದೂ ಕಲೆಗಳಿಲ್ಲದ ಉತ್ತಮ ವರ್ಗದ 'ಬ್ಲೂ ಜಾಗ್ಗರ್' ವಜ್ರಗಳೂ, 'ಎಕ್ಸಟ್ರಾ ವ್ಹಾಯಿಟ್' ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ. ಬೆಲೆಗೆ ತಕ್ಕ ಒಡವೆ ವದಗಿಸಿ ಕೊಡುವವರು—

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್—ರಥಬೀದಿ—ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

"ಗೋನೋಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೆ, ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ, ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬೆಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಖರ್ಚು ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ,
ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI,
GIRGAUM BACK ROAD, BOMBAY 4.

ಕಂಠೀರವ

ಪ್ರತಿ ಮಂಗಳವಾರ ಪ್ರಕಟವಾಗುವ ಶ್ರೇಷ್ಠವರ್ಗದ

ಕನ್ನಡ ವಾರ ಪತ್ರಿಕೆ.

ಚೆಂದಾ ವಿವರ.

	ಸ್ಥಳದವರಿಗೆ	ಪರಸ್ಥಳದವರಿಗೆ
೧ ವರ್ಷಕ್ಕೆ	ರೂ. ೨—೮—೦	ರೂ. ೩— ೫—೦
೬ ತಿಂಗಳುಗಳಿಗೆ	ರೂ. ೧—೪—೦	ರೂ. ೧—೧೧—೦

ಬಿಡಿ ಸಂಚಿಕೆ ಬೆಲೆ ೦—೧—೦.

ಮಾದರಿ ಸಂಚಿಕೆಗಳು ಅಪೇಕ್ಷಕರಿಗೆ ಧರ್ಮಾರ್ಥವಾಗಿ ಕಳುಹಿಸಲ್ಪಡುವವು.

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಬಿಡಿ ಸಂಚಿಕೆಗಳು ವಿಕ್ರಯಕ್ಕೆ ಸಿಗುವವು.

ನಮ್ಮ ಏಜೆಂಟರಿಲ್ಲದ ಸ್ಥಳಗಳಲ್ಲಿ ಏಜೆಂಟರಾಗಲಪೇಕ್ಷಿಸುವವರು ಕೂಡಲೇ ಬರಕೊಳ್ಳಬಹುದು. ಧಾರಾಳವಾದ ಕಮಿಶನ್ ಕೊಡಲಾದೀತು.

Circulation Manager,
THE KANTEERAVA,
MANGALORE.

ಶ್ರೀ ದತ್ತಾತ್ರೇಯ ಕಾಫಿ ಪುಡಿ

ಶ್ರೇಷ್ಠತೆಗೂ, ಪರಿಶುದ್ಧತೆಗೂ ಮೈಸೂರು ಗೌರ್ನಮೆಂಟು ಕೆಮಿಕಲ್ ಎಕ್ಸಾಮಿನರಿಂದ ಪರೀಕ್ಷಿಸಲ್ಪಟ್ಟಿದೆ.

ಇದನ್ನು ಉತ್ತಮವಾದ ಗಿರಿ ಕಾಫಿಯಿಂದ ತಾಕದೆ ಎಲೆಕ್ಟ್ರಿಕ್ ಮಿಷನ್ನುಗಳಿಂದ ತಯಾರಿಸಲ್ಪಟ್ಟಿದೆ. ಬಳ್ಳಾರಿ, ಧಾರವಾಡದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿಯೂ, ಬೆಂಗಳೂರು ಪಾರ್ಕು ಫೇರಿನಲ್ಲಿಯೂ ಬಂಗಾರದ ಪದಕಗಳು ಬಹುಮಾನವಾಗಿ ಬಂದಿವೆ. **ಒಂದು ದಫ ತರಿಸಿನೋಡಿ.**

ಶ್ರೀ ದತ್ತಾತ್ರೇಯ ಕಾಫಿ ವರ್ಕ್ಸ್,
ಮೈಸೂರು ರೋಡು, ಬೆಂಗಳೂರು ಸಿಟಿ.

BLOCKS

Used in this weekly are available at very reasonable rates. For further particulars write to:—

The Kanteerava Office,
(Publication Dept.),
MANGALORE.

ಈ ಪತ್ರಿಕೆಯಲ್ಲಿ ಮುದ್ರಿಸಲ್ಪಡುವ ಪಡಿಯಚ್ಚುಗಳು ಯೋಗ್ಯ ಬೆಲೆಗೆ ಕೊಡಲ್ಪಡುವವು. ಬೇಕಾದವರು ಮಂಗಳೂರು, ಕಂಠೀರವ ಕಾರ್ಯಾಲಯದೊಡನೆ ಪತ್ರವ್ಯವಹಾರ ನಡೆಸಬಹುದು.

ಪದವಿಗಳು! ಔಷಧಗಳು! ಪುಸ್ತಕಗಳು!

ಎಚ್. ಎಲ್. ಎಂ. ಎಸ್. ಎಚ್. ಎಂ. ಬಿ., ಎಚ್. ಯಂ. ಡಿ., ವೈದ್ಯರಾಜ ಮೊದಲಾದ ಹೋಮಿಯೊ-ಆಯುರ್ವೇದ, ಯುನಾನಿಗಳಲ್ಲಿ ಟಪ್ಪಾಲಿನ ಮೂಲಕ ಬೋಧನೆ ಪಡೆಯಬಹುದು. ಡಿಗ್ರಿಗೆ ಪ್ರತಿಫಲ ಕೊಡಬೇಕಾಗಿಲ್ಲ. ಹೋಮಿಯೋ-ಮೆಟೀರಿಯ ಮೆಡಿಕ ಇದರ ಬೆಲೆ ರೂ. 5. ಹೋಮಿಯೋ ಪ್ರಾಕ್ಟಿಸ್ ಓಫ್ ಮೆಡಿಸಿನ್ ಬೆಲೆ ರೂ. 4. ೨ ಆಣೆಯ ಸ್ಟ್ಯಾಂಪುಗಳನ್ನಿಡಿರಿ.

Homœopathic Institute,
MAHUVA (Kathiawar Dt.)

ESTD. 1925.

The Canara Industrial & Banking Syndicate, Ltd.

(INCORPORATED IN BRITISH INDIA.)

Authorised Capital Rs. 5,00,000. Subscribed Capital Rs. 2,84,000.
Paid-up Capital Rs. 2,14,000. Reserve Fund Rs. 45,000.

FIRST & FOREMOST

First & foremost among the ideals of the Syndicate are the ideals of SERVICE to Customers and the SECURITY OF DEPOSITORS' MONEY.

Our last five years' progress is a proof of our growing popularity.

YEAR WORKING CAPITAL.

1930	2,42,095/-
1931	4,95,266/-
1932	9,25,958/-
1933	13,90,798/-
1934	15,93,238/-

It now exceeds **20** lakhs.

FIXED DEPOSITS.

3 to 5 months .	4% p. a.
6 to 11 months .	4½% p. a.
12 to 23 months .	5% p. a.
24 months . .	5½% p. a.
60 months . .	6% p. a.

CURRENT DEPOSITS.
2% p. a. on daily balances.

SAVINGS BANK DEPOSITS.
3½% p. a. on the minimum balance standing between 5th and the last day of every month. Operation by Cheques.

Our Laxmi Cash Certificates, yielding Rs. 6—10—8% p. a. a speciality.

All kinds of Banking business transacted.

Further particulars can be had from the Branch Agent or Head Office, UDIPI.

BRANCHES.

1. Mangalore. 2. Ankola. 3. Honavar. 4. Bellary. 5. Bangalore. 6. Brahmavar. 7. Coondapoor. 8. Karwar. 9. Hubli. 10. Payyanur. 11. Hungarcutta. 12. Cannanore. 13. Belgaum. 14. Kanhangad (Hosdurg.) 15. Sirsi. 16. Udipi. 17. Kumta & 18. Adoni.

P. A. PAI BROS., *Managing Agents.*

ಬೆನ್ನು ನೋವು!

ಕ್ಷೀರಬಲಾ KSHEERABALA

ಸೊಂಟದಲ್ಲಿ ನೋವು!

ವಾತದ ಪ್ರಥಮ ಲಕ್ಷಣಗಳಲ್ಲಿ ಇವೂ ಒಂದು. ಬೆನ್ನಿನಲ್ಲಿ, ಸೊಂಟದಲ್ಲಿ ಸೆಳೆಯುವ, ಕೊರೆಯುವ, ಚುಚ್ಚುವ ನೋವು ಎಷ್ಟೇ ಇದ್ದರೂ, ಪ್ರತಿನಿತ್ಯವೂ ಬೆಳಗ್ಗೆ, ಬರೇ ಹೊಟ್ಟೆಗೆ, ಋಷಿಗಳ 'ಕ್ಷೀರಬಲ'ದ ಕೆಲವು ಬಿಂದುಗಳನ್ನು ಸೇರಿಸಿದ ಒಂದು ಟಂಬ್ಲರು ಬಿಸಿ ನೀರು ಕಡಿಯುವುದರಿಂದಲೇ ವಾಸಿಯಾಗುವುದು. ಈ ಪ್ರಕಾರ ಮಾಡುವುದರಿಂದ, ನರಗಳು ಸರಿಯಾದ ಸ್ಥಿತಿಯಲ್ಲಿರುವುವು; ಶರೀರಗತವಾದ ಅಶುದ್ಧತೆಯನ್ನು ಹೊರತಳ್ಳುವುದು; ನೋವಿರುವಲ್ಲಿ ರಕ್ತಸಂಚಾರವು ಕ್ರಮವಾಗಿ ಆಗುವಂತೆ ಮಾಡುವುದು; ಗೋಳಾಡಿಸುವ ಸ್ಥಿತಿಯನ್ನು ತಪ್ಪಿಸುವುದು.

ಸೊಂಟದಲ್ಲಿ, ಬೆನ್ನಿನಲ್ಲಿ, ಕೈಕಾಲುಗಳಲ್ಲಿ, ಆಥವಾ ಗಂಟುಗಳಲ್ಲಿ ವಿಪರೀತವಾದ ನೋವು ಇದ್ದು ಸರಳುತ್ತಿರುವ ಸಂಧರ್ಭದಲ್ಲಿ—ಬಿಸಿ ನೀರಿನ ಬದಲಿಗೆ—ಸಾವಾನ್ಯ ಜೀರಿಗೆ ಕಷಾಯವನ್ನು ಉಪಯೋಗಿಸಿದರೆ, ನಮ್ಮ ಋಷಿಗಳ 'ಕ್ಷೀರಬಲ'ವು ಎಂತಹ ಆಶ್ಚರ್ಯಕರವಾದ ಪರಿಣಾಮವನ್ನು ಉಂಟುಮಾಡುವುದೆಂದು ನೀವೇ ನೋಡುವಿರಿ! ಈ ಋಷಿಗಳ 'ಕ್ಷೀರಬಲ'ಕ್ಕೆ ಅಪೂರ್ವವಾದ ಗಿಡಮೂಲಿಕೆಗಳೂ, ಬೇರು ನಾರುಗಳೂ, ಧಾರಾಳವಾದ ಅಕಳ ಹಾಲೂ ಬೇಕು; ಮಾತ್ರವಲ್ಲ; ಬಹಳ ತಾಳ್ಮೆಯಿಂದ, ಬಹಳ ಜಾಗರೂಕತೆಯಿಂದ ಅದನ್ನು ಸಿದ್ಧಮಾಡಬೇಕು. ಅದನ್ನು ಪೂರ್ಣವಾಗಿ ತಯಾರಿಸಲು ಸುಮಾರು ನೂರವೊಂದು ದಿನಗಳು ಹಿಡಿಯುವುದಾದರೆ,—ಅದು ಉಪಯೋಗಕ್ಕೆ ಬರುವಂತೆ ಸರಿಯಾಗಿ ಪಾಕವಾಗಲು ಅದಕ್ಕಿಂತಲೂ ಎಷ್ಟೋ ಹೆಚ್ಚಿನ ಸಮಯವೇ ಬೇಕು. ಋಷಿಗಳ 'ಕ್ಷೀರಬಲ'ವು ಡುಬ್ರಲವಾದ, ಹಡಪಟ್ಟು ನರಗಳ ಮೇಲೆ ಅತ್ಯಂತ ತೀವ್ರ ಪರಿಣಾಮಕಾರಿಯಾಗಿರುವುದಲ್ಲದೆ, ಅವುಗಳನ್ನು ಎಷ್ಟು ಚುರುಕಾಗಿಯೂ, ಆರೋಗ್ಯಕಾರಿಯಾಗಿಯೂ ಮಾಡುವುದೆಂದರೆ,—ಅದು ಗೋಳಾಡಿಸುವ ಎಲ್ಲ ಬಗೆಯ ನೋವುಗಳನ್ನೂ 'ಗಡಿಪಾರು' ಮಾಡಿಬಿಡುತ್ತದೆ. ಅದು ತುಪ್ಪದಷ್ಟೇ ದಪ್ಪ. ಒಂದು ಔನ್ಸಿನ ಬಾಟಲಿಯೊಂದರ ಬೆಲೆ ರೂ. 4—0—0. (ಪೋಸ್ಟೇಜ್ ಬೇರೆ.)

ನರಗಳು ಎಳೆಯುವುದು, ಬಿಗಿಹಿಡಿಯುವುದು, ಹೆಚ್ಚುಕಡಿಮೆಯಾಗಿರುವುದು ಇವಕ್ಕೂ,—ಗಂಟುಗಳು, ಮೊಣಕಾಲು ಗಂಟುಗಳು, ಕೈಗಳು ಬಾಯುವುದಕ್ಕೂ, ಕಪ್ಪಡಿಂದ ಉಸಿರಾಡುವುದಕ್ಕೂ, ಕೆಸಕ್ಕೂ, ಬರೆಯುವಾಗ ಕೈ ನಡುಗುವುದಕ್ಕೂ ದೇಹದ ಯಾವ ಭಾಗದಲ್ಲಿಯಾದರೂ ಸೂಜಿಯಿಂದ ಚುಚ್ಚುವಂತೆ ಆಥವಾ ಕಠಾರಿಯಿಂದ ಇರಿದಂತೆ ನೋವಾಗುವುದಕ್ಕೂ, ಪಾದಗಳು ಉರಿಯುವುದಕ್ಕೂ ಟೊಂಕದಿಂದ ತೊಡೆಯ ವರೆಗಿನ ನರಗಳಲ್ಲಿ ವೇದನೆಯಾಗುವುದಕ್ಕೂ, ಎಲ್ಲ ಬಗೆಯ ರಕ್ತವಾತ, ಪಕ್ಷವಾತಗಳಿಗೂ ಋಷಿಗಳ ಈ 'ಕ್ಷೀರಬಲ'ವು ಅತ್ಯುತ್ಕೃಷ್ಟವಾದ ರಾಮಬಾಣದಂತಹ ದಿವ್ಯೌಷಧವಾಗಿದೆ.

ದಿ ಮಲೆಯಾಳ ಔಷಧ ಕಂಪೆನಿ,

ಚಾಲಪುರಂ ಪೋಸ್ಟ್, ಮಲಬಾರ್.

ನಮ್ಮಲ್ಲಿ ಗ್ಯಾರಂಟಿಯುಳ್ಳ ಇನ್ನೂ ಅನೇಕ ಸಿದ್ಧೌಷಧಗಳಿವೆ. ಸಂತಾನೋತ್ಪತ್ತಿಯನ್ನು ಮಿತಪಡಿಸಲಿಕ್ಕೆ; ನವಚೈತನ್ಯವನ್ನು ತುಂಬಿಸಲಿಕ್ಕೆ; ಚಪ್ಪಟೆಯಾದ, ಸಡಿಲವಾದ, ಜೋತುಬಿದ್ದ ಹೆಂಗಸರೆದೆಯನ್ನು ದುಂಡಗಾಗಿ ಮಾಡುವುದಕ್ಕೆ.

ಸೂಜೀರ್ಕಾರ್ ಬ್ರದರ್ಸರಲ್ಲಿಗೇ ಹೋಗುವುದೇತಕ್ಕೆ?

ಯಾತಕ್ಕೆಂದರೆ—ಈಗಿನ ಫ್ಯಾಶನಿಗೆ ತಕ್ಕುದಾದ ನೂತನವಾದ, ನಯ ನಾಜೂಕಾದ, ಬಗೆಬಗೆಯ ಅಂದವಾದ ಬಣ್ಣಗಳ, ಮಾದರಿಗಳ, ಹೊಸ ಹೊಸ ಬಟ್ಟೆಬರೆಗಳನ್ನು ಅಲ್ಲಿ ಚುನಾಯಿಸಿ ಇರಿಸಲಾಗಿದೆ. ಬಾಳಿಕೆಯಲ್ಲಿ ಬಣ್ಣದಲ್ಲಿ ಹಿರಿದು; ಬೆಲೆಯಲ್ಲಿ ಕಿರಿದು; ನಿತ್ಯ ಉಪಯೋಗಕ್ಕೆ, ಶುಭ ಶೋಭನಗಳಿಗೆ, ಕರವಸ್ತ್ರದಿಂದ ಮೊದಲ್ಗೊಂಡು ಜರಿಯ ಪೀತಾಂಬರದ ವರೆಗೆ, ಎಲ್ಲವೂ ದೊರಕುವುದಿಲ್ಲಿಯೇ—ಬಡವರಿಗೆ, ಶ್ರೀಮಂತರಿಗೆ, ಗಂಡಸರಿಗೆ, ಹೆಂಗಸರಿಗೆ, ಎಲ್ಲರಿಗೂ! ಸೊಗಸಾದ ತೀರೆಗಳು ನಮ್ಮಲ್ಲಿಂದು "ಸ್ಪೆಶಾಲಿಟಿ!" ನಂಬಿಕೆಯ ಸನಗು; ಪ್ರಮಾಣಿಕತೆಯ ವ್ಯವಹಾರ; ಹಲವು ವರ್ಷಗಳ ಅನುಭವಸಿದ್ಧವಾದ ವ್ಯಾಪಾರ. ಸಂದರ್ಶಿಸದವರೊಮ್ಮೆ ದಯವಿಟ್ಟು ಪರೀಕ್ಷಿಸಿರಿ!

ಮೆಸರ್ಸ್ ಸೂಜೀಕಾರ್ ಬ್ರದರ್ಸ್,

ಮಾರ್ಕೆಟ್ ರೋಡ್, ಮಂಗಳೂರು, ದ. ಕ.

ಚಲನ ಚಿತ್ರಗಳ ತಯಾರಿ.

ಚಲನ ಚಿತ್ರಗಳನ್ನು ನೋಡಿದವರು ಆ ಚಿತ್ರಗಳು ನಿಜವಾಗಿಯೂ ಚಲಿಸುತ್ತಿವೆ ಎಂದು ತಿಳಿದಿರುವರು. ಇದು ನಿಜವಲ್ಲ. ಚಿತ್ರಗಳು ಒಂದಾದ ಮೇಲೊಂದು ಬಹು ವೇಗವಾಗಿ ಬರುವುದರಿಂದ, ಒಂದೊಂದು ಚಿತ್ರದಲ್ಲಿಯೂ ಕಂಡುಬರುವ ಕೆಲಸವು ನಿಲ್ಲದೆ ನಡೆಯುತ್ತಾ ಬರುವುದೆಂದು ಕಣ್ಣಿಗೆ ಬೋಧೆಯಾಗುವುದು. ಈ ಚಿತ್ರಗಳು ಅಡಿ ಉದಕ್ಕೆ ೧೬ರಂತೆ ಇರುವವು. ಒಂದೊಂದು ಚಿತ್ರವೂ ಒಂದು ಅಂಗುಲ ಉದ್ದ ಮುಕ್ಕಾಲು ಅಂಗಲ ಅಗಲವಿರುವುದು. ಪೈರಾಡ್ಸಿಲಿನ್ ಪ್ಲಾಸ್ಟಿನ್ ಅಥವಾ ಸೈಟ್ರೊಸೆಲ್ಯುಲೋಸ್ ಎಂಬ ವಸ್ತುವಿನಿಂದ ತಯಾರಾದ ಉದ್ದನಾದ ಪಟ್ಟಿಯ ಮೇಲೆ ಈ ಚಿತ್ರಗಳು ತಸ್ವೀರು ಮೂಲಕ ನಿಂತಿರುವವು. ಪಟ್ಟಿಯು ತೆಳುವಾಗಿಯೂ ಬೆಳಕು ತ್ಯೂರಿಹೋಗಲು ಯೋಗ್ಯವಾದುದಾಗಿಯೂ ಇರುವುದು. ಸ್ವಲ್ಪ ಹೆಚ್ಚಿನ ಶಾಖ ತಗಲಿದರೂ ಈ ಪಟ್ಟಿಯು ಕ್ಷಣ ಮಾತ್ರದಲ್ಲಿ ಹತ್ತಿಕೊಂಡು ಸುಟ್ಟು ಹೋಗುವುದು. ಪಟ್ಟಿಯ ಎರಡು ಕಡೆಯೂ ಸೂಕ್ಷ್ಮ ರಂದ್ರಗಳು ಇದ್ದು, ಯಂತ್ರದಲ್ಲಿ ಚಕ್ರಗಳ ಸಹಾಯದಿಂದ ಪಟ್ಟಿಯು ವೇಗವಾಗಿ ಓಡಲು ಸಹಾಯ ಮಾಡುತ್ತದೆ.

ಇಂಥ ಪಟ್ಟಿಗಳ ಸಹಾಯದಿಂದ ತಸ್ವೀರನ್ನು ತೆಗೆದು, ಆ ಪಟ್ಟಿಯನ್ನು ಯಂತ್ರದಲ್ಲಿ ಮೇಲಿನಿಂದ ಕೆಳಕ್ಕೆ ಚಲಿಸುವಂತೆ ಮಾಡಿದರೆ, ಯಂತ್ರದಲ್ಲಿರುವ ಬಲವಾದ ಬೆಳಕು ಆ ಚಿತ್ರಗಳ ಮೂಲಕ ತೂರಿ ಎದುರಿಗಿರುವ ದೊಡ್ಡ ಬಟ್ಟೆಯ ಮೇಲೆ ಬೀಳುವುದು. ಚಿತ್ರಗಳು ಒಂದಾದ ಮೇಲೊಂದು ತ್ವರೆಯಾಗಿ ಬರುವುದರಿಂದ, ಅವುಗಳಲ್ಲಿ ಕಂಡುಬರುವ ಕೆಲಸವು ಮಧ್ಯೆ ವಿಚ್ಛಿತ್ತಿಯಿಲ್ಲದೆ ನಡೆಯುವಂತೆ ನೋಟಕರಿಗೆ ಕಂಡುಬರುವುದು. ಇಂಥ ಪಟ್ಟಿಗಳು ಸಾವಿರಾರು ಅಡಿಗಳ ಉದ್ದವಾಗಿರುತ್ತವೆ.

ಶ್ರೀ। ಎಮ್. ಆರ್. ಸಂತಾನಲಕ್ಷ್ಮಿ.

ಪಟ್ಟಿಗಳೇನೋ ಚಿತ್ರಗಳನ್ನು ಪ್ರದರ್ಶಿಸುತ್ತವೆ. ಅವುಗಳ ಜತೆಯಲ್ಲಿಯೇ ಕಾರ್ಯಕ್ಕೆ ತಕ್ಕಂತೆ ಶಬ್ದವೂ ಹೊರಡುವುದು ಹೇಗೆಂದು ತಿಳಿಯುವುದು ಕಷ್ಟ. ಇದು ಎರಡು ವಿಧವಾಗಿದೆ. ವಿದ್ಯುತ್ ಶಕ್ತಿಯ ಸಹಾಯದಿಂದ ಈ ಕೆಲಸವು ಸುಲಭವಾಯಿತು. ತಸ್ವೀರು ತೆಗೆಯುವಾಗಲೇ, ಮಾತುಕತೆಗಳ ಶಬ್ದಗಳನ್ನು ಗ್ರಾಮಫೋನ್ ಪ್ಲೇಟುಗಳಂತೆ ಮೇಣದ ತಟ್ಟೆಗಳಲ್ಲಿ ಮೊದಲು ರಿಕಾರ್ಡು ಮಾಡುತ್ತ ಬಂದರು. ತಸ್ವೀರು ತೆಗೆಯುವುದೂ ರಿಕಾರ್ಡ್ ಮಾಡುವುದೂ ಏಕಕಾಲದಲ್ಲಿ ನಡೆಯುತ್ತಾ ಬಂದುದರಿಂದ, ಮಾತುಕತೆಗಳಿಗೂ ಕೆಲಸಕ್ಕೂ ಸಂಬಂಧವು ಕಲ್ಪನೆಯಾಯಿತು. ಈ ಪದ್ಧತಿಯಲ್ಲಿ ತಸ್ವೀರು ಪಟ್ಟಿಯ ಜತೆಗೆ ನೂರಾರು ರಿಕಾರ್ಡುಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವ ಕೆಲಸ ಹೆಚ್ಚಿತು. ಅಲ್ಲದೆ ಎರಡಕ್ಕೂ ಬೇರೆ ಬೇರೆ ಯಂತ್ರಗಳನ್ನಿಟ್ಟುಕೊಂಡು, ಎರಡೂ ಒಂದೇ ವೇಗದಲ್ಲಿ ಚಲಿಸುವಂತೆ ಸಂಬಂಧವನ್ನೆ ನಿರ್ಮಿಸಬೇಕಾಯಿತು. ಹೆಚ್ಚಿಗೆ ಬಳಕೆಯಲ್ಲಿರುವ ಮತ್ತೊಂದು ವಿಧಾನವು ಬಹು ಕಷ್ಟಪಟ್ಟು ತಯಾರಿಸಿದುದು. ಆದರೆ ಪ್ರದರ್ಶಕರಿಗೆ ಅದು ಬಹಳ ಸುಲಭ. ತಸ್ವೀರು ಪಟ್ಟಿಯ ಎಡಪಾರ್ಶ್ವವನ್ನು ನೋಡಿದರೆ ಅಡ್ಡಡ್ಡಲಾಗಿ ರೇಗಳು ಕಪ್ಪಗೆ ಬೆಳ್ಳಗೆ ಕಂಡುಬರುವವು. ಚಿತ್ರಗಳ ಪಟ್ಟಿಯು ಓಡುವಾಗ, ಈ ಗೀರುಗಳ ಮೇಲೆ ಬೆಳಕು ಬಿದ್ದು, ಅವುಗಳ ಅಣ್ಣಕ್ಕನುಸಾರವಾಗಿ ಹೆಚ್ಚು ಕಡಿಮೆ ಬೆಳಕು ಹೊರಗೆ ಬರುವುದು. ಈ ವ್ಯತ್ಯಾಸಕ್ಕನುಸಾರವಾಗಿ ಬೆಳಕಿನಿಂದ ಶಬ್ದ ಹುಟ್ಟುವಂತೆ ಪ್ರತ್ಯೇಕ ಸಂಧಾನವು ಯಂತ್ರಕ್ಕೆ ಜೋಡಿಸಲ್ಪಟ್ಟಿದೆ. ಗ್ರಾಮಫೋನ್ ರಿಕಾರ್ಡಿನಲ್ಲಿ ಕಂಡುಬರುವ ಗೀರಿನಿಂದ ಶಬ್ದವು ಹೆಚ್ಚುಕಡಿಮೆಯಾಗಿ ಹೇಗೆ ಹೊರಬೀಳುವುದೋ ಹಾಗೆಯೇ ಬೆಳಕಿನ ವ್ಯತ್ಯಾಸದಿಂದಲೂ ಶಬ್ದ ವ್ಯತ್ಯಾಸವಾಗಿ, ಮಾತುಗಳು ಕೇಳಬರುತ್ತವೆ.

ಮಾತನಾಡುವ ಚಿತ್ರಗಳನ್ನು ತಯಾರಿಸುವಾಗ ನಟರೂ ತಯಾರಿಸುವವರೂ ಶಬ್ದಂದಿಯೂ ಬಹುವಾಗಿ ಮೌನವನ್ನು ಅನುಸರಿಸಬೇಕು. ಅನಾವಶ್ಯಕವಾದ ಶಬ್ದವು ಲೇಶಮಾತ್ರವೂ ಕೂಡದು. ಎಷ್ಟೇ ಸೂಕ್ಷ್ಮ ಶಬ್ದವನ್ನಾದರೂ ಗ್ರಹಿಸತಕ್ಕ

ಸಿನೆಮಾ ಪುಟ

ಯಂತ್ರವನ್ನಿಟ್ಟುಕೊಂಡಿರುವುದರಿಂದ ಅದು ಅಲ್ಪ ಶಬ್ದವನ್ನು ಅಗಾಧವಾಗಿ ಮಾಡಿ ಚಿತ್ರಗಳನ್ನೇ ಕೆಡಿಸಿಬಿಡುತ್ತಾರೆ. ಚಿತ್ರಗಳನ್ನು ಒಂದೇ ಒಂದು ಕ್ಯಾಮರಾದಲ್ಲಿ ತೆಗೆಯುವುದಿಲ್ಲ. ಕೆಟ್ಟುಹೋದೀತೆಂಬ ಭಯದಿಂದ, ಸಾಮಾನ್ಯವಾಗಿ ಎರಡು ಮೂರು ಕ್ಯಾಮರಾಗಳನ್ನು ಉಪಯೋಗಿಸುತ್ತಾರೆ. ನಟರ ಕೆಲಸದಿಂದಲೂ, ಇತರ ಕಾರಣಗಳಿಂದಲೂ ಚಿತ್ರಗಳು ಕೆಡುವ ಸಂಭವ ಹೆಚ್ಚು ಕೆಟ್ಟ ಭಾಗಗಳನ್ನೆಲ್ಲಾ ತೆಗೆದುಹಾಕಿ ಅಗತ್ಯ ಕಂಡು ಬಂದರೆ ಪುನಹ ಅವುಗಳನ್ನು ತಯಾರಿಸಿ, ಕಡೆಯಲ್ಲಿ ತೃಪ್ತಿಕರವಾದ ಸಂಪೂರ್ಣವಾದ ಚಿತ್ರಗಳ ಪಟ್ಟಿಯನ್ನು ಜೋಡಿಸಿಕೊಳ್ಳುವರು. ಮೇಲೆ ಹೇಳಿದಂತೆ ಬೆಂಕಿಯ ಭಯವಿರುವುದರಿಂದ ಸಾಮಾನ್ಯವಾಗಿ ಇಂತಹ ಚಿತ್ರಗಳ ಪಟ್ಟಿಗಳನ್ನು ಅವುಗಳಿಗಿರುವ ಗಿರಾಕಿಗಳನ್ನು ನೋಡಿಕೊಂಡು ಆರು ಅಥವಾ ೧೨ ಕಾಪಿಗಳನ್ನು ತಯಾರಿಸುತ್ತಾರೆ.

ಚಲನ ಚಿತ್ರಗಳ ತಯಾರಿಗೆ ಖರ್ಚುವೆಚ್ಚಗಳು ಬಹಳ, ಸಿಬ್ಬಂದಿ ಎಲ್ಲವೂ ಪರಸ್ಥಳ ಪ್ರಯಾಣಮಾಡಬೇಕಾಗುವುದು. ಕಾಡು ಮೇಡುಗಳನ್ನು ಅಲೆಯಬೇಕಾಗುವುದು. ಪುರಾತನ ಜನರ ನಡೆನುಡಿಗಳನ್ನೂ ವಾಸಸ್ಥಳಗಳನ್ನೂ ಅನುಸರಿಸಲು ಬೇಕಾದಷ್ಟು ವಸ್ತುಗಳನ್ನು ನಿರ್ಮಿಸಿಕೊಳ್ಳಬೇಕು. ಎಷ್ಟು ನಷ್ಟವಾಗುವುದಾದರೂ ನಡೆದಂತೆ ಮಾಡಿ ತೋರಿಸಬೇಕು. ಈ ಕಾರಣಗಳಿಂದ ಅನೇಕ ಚಿತ್ರಗಳು ತುಂಬಾ ಖರ್ಚಿನಿಂದ ತಯಾರಾಗುವವು. ಇವುಗಳ ಜತೆಗೆ ಪ್ರಾಣಾಪಾಯಕ್ಕೂ ಲಕ್ಷಿಸದ

ಜೋನ್ ಕ್ರಾಫೊರ್ಡ್.

ಶೂರರಿಗೂ ಸುಂದರಿಯರಿಗೂ ಸಂಗೀತಗಾರರಿಗೂ ಸುಪ್ರಸಿದ್ಧ ನಟನಟಿಯರಿಗೂ ಅನರು ಕೇಳಿದ ಸಂಬಳ ಕೊಡಬೇಕು. ಹಣವ ಅಭಾವ, ವಿಳಂಬನೆಯು, ಇವುಗಳ ಯೋಚನೆಯು ಪ್ರಸಿದ್ಧ ಚಿತ್ರಗಳ ತಯಾರಿಗೆ ಸಹಕಾರಿಗಳಲ್ಲ. ಆದರೂ ಬುದ್ಧಿವಂತರಾದವರು ಉಪಾಯಾಂತರಗಳನ್ನು ಹುಡುಕಿ—ಬಹುದ್ರವ್ಯ ಸಾಧ್ಯವಾದ ಚಿತ್ರಗಳ ಖರ್ಚುವೆಚ್ಚಗಳನ್ನು ಕಡಿಮೆ ಮಾಡುತ್ತಿದ್ದಾರೆ. ಅಗತ್ಯವಾದ ತಸ್ವೀರುಗಳನ್ನು ಒಬ್ಬಿಬ್ಬರು ದೂರ ದೇಶಗಳಿಗೆ ಹೋಗಿ ತೆಗೆದುಕೊಂಡು ಬರುವರು. ಇಲ್ಲವೇ ಚಿತ್ರಕಾರರ ಸಹಾಯದಿಂದ ಚಿತ್ರಮಂದಿರದಲಿಯೇ ತಯಾರಿಸುವರು. ಇವುಗಳ ಮುಂದೆ ನಟರನ್ನು ಚಲಿಸುವಂತೆ ಮಾಡಿ, ಎರಡನ್ನೂ ಸೇರಿಸಿ ಒಂದೇ ಚಿತ್ರವನ್ನು ಮಾಡಿಕೊಳ್ಳುವರು. ಅಂತಹ ಚಲನಚಿತ್ರಗಳಲ್ಲಿ ಯಾವುದು ನಿಜ, ಯಾವುದು ಕೃತ್ರಿಮ ವೆಂಬುದನ್ನು ಕಂಡುಹಿಡಿಯುವುದು ಕಷ್ಟವಾಗುತ್ತದೆ.

ಚಲನ ಚಿತ್ರಗಳು ಜಾರಿಯಲ್ಲಿ ಬಂದಮೇಲೆ ನಿರುದ್ಯೋಗವು ಬಹುಮಟ್ಟಿಗೆ ಕೊನೆಗಾಣುತ್ತ ಇದೆ. ಮತ್ತು ಜೀವನೋಪಾಯಕ್ಕೆ ಅನರ್ಹರಾದ ಅನೇಕರು ಈ ಉದ್ಯೋಗದಲ್ಲಿ ಹೆಚ್ಚಿನ ಸಂಪಾದನೆಯನ್ನು ಪಡೆಯುತ್ತಿದ್ದಾರೆ. ಮುಕ್ಕಳೂ ಪ್ರಾಣಿಗಳೂ ಭಾರಿ ಸಂಬಳವನ್ನು ಪಡೆಯುವರು. ಬುದ್ಧಿವಂತರೂ ಚಟುವಟಿಕೆಯುಳ್ಳವರೂ ಆದ ಸ್ತ್ರೀಯರು ಸ್ವತಂತ್ರ ಜೀವನವನ್ನು ಮಾಡಲು ಈ ಉದ್ಯೋಗದಲ್ಲಿ ಅವಕಾಶ ಹೆಚ್ಚು. ಮುಖ್ಯವಾಗಿ ಇಂಡಿಯಾ ದೇಶದಲ್ಲಿ ವಿದ್ಯಾವಂತರಿನ್ನೂ ಈ ಉದ್ಯೋಗದಲ್ಲಿ ಸಾಕಷ್ಟುಮಟ್ಟಿಗೆ ಪ್ರವೇಶಿಸಿರುವುದಿಲ್ಲ. ಈಗೀಗ ಉತ್ತಮವಾದ ದೇಶೀಯ ಚಿತ್ರಗಳು ತಯಾರಾಗುತ್ತ ಬಂದು ವಿದ್ಯಾವಂತರನ್ನು ನಟರ ಪಾತ್ರಕ್ಕೆ ಆಕರ್ಷಿಸತೊಡಗಿವೆ. ಈ ಚಿತ್ರಗಳ ತಯಾರಿಯಿಂದ ಸಂಬಂಧಪಟ್ಟ ಹಲಕೆಲವು ಕೈಗಾರಿಕೆಗಳು ದೇಶದ ಮೇಲೆ ಅಭಿವೃದ್ಧಿಗೆ ಬಂದು ಜನಸಾಮಾನ್ಯದಲ್ಲಿ ಸಹಸ್ರಾರು ಜನರಿಗೆ ಸುಖಜೀವನವನ್ನು ಉಂಟುಮಾಡಿಕೊಡಬೇಕಾಗಿದೆ.

'ಅರ್ಥಸಾಧಕ ಪತ್ರಿಕೆ'

ದಸರಾ ಮತ್ತೂ ದೀಪಾವಳಿ ಮಹೋತ್ಸವ

ಹತ್ತರ ಬಂತು. ಅಂತಹ ಶುಭಸಂತೋಷ ಸಮಯದಲ್ಲಿ ಹಿಂದಿನ ಕಾಲದಲ್ಲಿ, ಸುಜ್ಞರಾದ ಗೃಹಸ್ಥರೂ, ಮಹಿಳೆಯರೂ ತಮ್ಮ ತಲೆಗಳು ಶುಭ್ರವಾಗಿಯೂ ತಂಪಾಗಿಯೂ ಇರುವಂತೆ, ಮಧುರವಿದ್ದು ಮನೋಹರವಾಗಿ ಪರಿಮಳಿಸುತ್ತಿರುವ ಶುದ್ಧ ಸುಗಂಧ ತೈಲವನ್ನು ಲೇಪಿಸಿಕೊಳ್ಳುವ ಪದ್ಧತಿ ಇದ್ದಿತೆಂದು ಚರಿತ್ರೆಯು ನಮಗೆ ಸ್ಮರಣೆಗೆ ತಂದುಕೊಡುತ್ತಿದೆ. ಕಾರಣವಿಷ್ಟೆ;—ಆ ತೈಲದ ಮಧುರ ಮನೋಹರ ಸುವಾಸನೆಯು, ಆವರ ಸುತ್ತುಮುತ್ತಲಿನ ಪ್ರದೇಶವನ್ನೆಲ್ಲ,—ಆವರು ಹೋದಲ್ಲೆಲ್ಲ,—ಪರಿಶುದ್ಧವಾಗಿಯೂ, ಆನಂದಮಯವಾಗಿಯೂ ಮಾಪರ್ಡಿಸುತ್ತಿತ್ತು. ಇದರಿಂದ ಮನಸ್ಸಿನ ಮೇಲಿನ ನೇರವಾದ ಪರಿಣಾಮವೂ ಸುಸ್ಪಷ್ಟವೂ, ಉತ್ಸಾಹದಾಯಕವೂ, ಶಾಂತಿದಾಯಕವೂ ಆಗಿರುತ್ತಿತ್ತು. ಈ ರೀತಿ ಪರಿಶುದ್ಧವಾದ ಮನಸ್ಸು, ಅಂಥ ಮಂಗಲೋತ್ಸವದ ಶುಭಮುಹೂರ್ತಕ್ಕೆ ಹಿತಾವಹವೆಂದು ಆ ಗೃಹಸ್ಥ ಗೃಹಿಣಿಯರಿಗೆ ಜೆನ್ನಾಗಿ ಗೊತ್ತಿತ್ತು. ಹಿಂದಿನ ಕಾಲದ ಈ ಸುಜ್ಞರಾದ ಸ್ತ್ರೀ ಪುರುಷರ ಹಾದಿಯನ್ನು ಅನುಸರಿಸುವುದೇ, ನಿಮ್ಮ ಹಿತಾಭಿವೃದ್ಧಿಯ ಮಾರ್ಗವೂ ಆಹುದೆಂದು ನೀವು ತಿಳಿದುಕೊಳ್ಳುವುದಾದರೆ, ಯಾವುವುಗಳ ಉಪಯೋಗದಿಂದ ನಿಮಗೆ ತಲೆಶೂಲೆಯುಂಟಾಗಲು ಕಾರಣವಾಗಬಹುದೋ, ಅಂಥ ಅಗ್ಗವಾದ, ಗುಣದಲ್ಲಿ ಕನಿಷ್ಟವಾದ, ನಿಮ್ಮಿಂದ ಪರೀಕ್ಷಿಸಲ್ಪಡದ, ಆದರೆ ಮಾರ್ಕೆಟುಗಳಲ್ಲೆಲ್ಲ ತುಂಬಿ ಉಕ್ಕುತ್ತಿರುವ ಕೇಶ 'ತೈಲ'ಗಳನ್ನು ಕೊಳ್ಳುವಲ್ಲಿ, ನೀವು ಕಪ್ಪಹಟ್ಟು ಸಂಪಾದಿಸಿದ ಹಣವನ್ನೆಂದಿಗೂ ಹಾಳು ಮಾಡಬೇಡಿ, ಕಂಡಿರಾ?

ಚುನಾಯಿಸಿ ಮಾಡಿದ ಸುಪ್ರಸಿದ್ಧವಾದ

ಕಾಮಿನಿಯಾ ಲಿಮಿಟೆಡ್
ಯನ್ನೇ (ರಿಜಿಸ್ಟರ್ಡ್)
ಉಪಯೋಗಿಸಿರಿ.

'ಕಾಮಿನಿಯಾ ತೈಲ'ದ ಪರಿಚಯವಿಲ್ಲದ ಕುಗ್ರಾಮವಾಸಿಯಾದ ಹಳ್ಳಿಯವನಲ್ಲಿ ಕೂಡ ಅದು ದೊರಕುವುದು.

ಒಂದಾಣೆಯ ಪೋಸ್ಟಲ್ ಸ್ಟ್ಯಾಂಪನ್ನು ಕಳುಹಿಸಿ, ಮಾದರಿಗಳನ್ನು ಉಚಿತವಾಗಿ ಪಡೆಯಿರಿ. ಬೆಲೆ ಬಾಟಲಿ 1ಕ್ಕೆ ರೂ. 1—0—0. ಬಾಟಲಿಗಳಿಗೆ ರೂ. 2—10—0. ವಿ. ಪಿ. ಚಾರ್ಜು ಬೇರೆ.

ಹೂವುಗಳ ಒಂದು ಇಡೀ ತೋಟವನ್ನೇ—

ಒಟ್ಟೋ ದಿಲ್‌ಬಹಾರ್ (ರಿಜಿಸ್ಟರ್ಡ್)ನ
ಒಂದು ಬಾಟಲಿಯಲ್ಲಿ ಹಿಂಡಿದಂತೆ ಕಂಡುಬರುವುದು.

ಇದು ಹೂವುಗಳ ಶುದ್ಧವಾದ ಸಾರ; ಇದರ ಯಾವ ಬಾಟಲಿಯಲ್ಲಿಯಾದರೂ ಅಲ್ಪಹೋಲಿನ ಒಂದು ಬಿಂದುವಾದರೂ ಇಲ್ಲವೆಂದು ನಮ್ಮಿಂದ ನಿಮಗೆ ಗ್ಯಾರಂಟಿ ಇದೆ. ಒಮ್ಮೆ ಕೆಲವು ಬಿಂದುಗಳನ್ನು ಮಾತ್ರವೇ ಚುಮುಕಿಸಿರಿ—ಸಾಕು! ಬೆಲೆ ½ ಔನ್ಸು ಬಾಟಲಿಗೆ ರೂ. 1—4—0. ಒಂದು ಡ್ರಾಮಿನ ಬಾಟಲಿಗೆ ಆಣೆ 12 ವಿ. ಪಿ. ಚಾರ್ಜು ಪ್ರತ್ಯೇಕ. 2 ಆಣೆ ಪೋಸ್ಟೇಜ್ ಸ್ಟ್ಯಾಂಪು ಕಳುಹಿಸಿಕೊಟ್ಟಲ್ಲಿ ಇದರ ಮಾದರಿ ನಿಮಗೆ ಉಚಿತ.

ಈಗ ತಾನೇ ಸಿದ್ಧವಾದ ನವೀನ ಸುಗಂಧ ದ್ರವ್ಯ.

ಒಟ್ಟೋ ಮಸ್ಕ್ ಬಹಾರ್ (ರಿಜಿಸ್ಟರ್ಡ್)

ತಾಜಾ ಕಸ್ತೂರಿ ಸುಗಂಧದ್ರವ್ಯಗಳಲ್ಲಿ ಇದಕ್ಕೆ ಸರಿಯಾದದ್ದು ಇನ್ನೊಂದಿಲ್ಲ ಇದೇ ಆದ್ವಿತೀಯ. ಇದರ ಅತ್ಯಂತ ಸೂಕ್ಷ್ಮವಾದ, ಮೋಹಗೊಳಿಸುವ ಸುವಾಸನೆಯು ನಿಜವಾದ ಸ್ವರ್ಗ ಸುಖಾನುಭವವನ್ನು ನಿಮ್ಮಲ್ಲಿ ಉಂಟುಮಾಡುವುದು. ಬೆಲೆ ಬಾಟ್ಲಿ 1ಕ್ಕೆ ರೂ. 1—4—0;(½ ಔನ್ಸಿನದು) 1 ಡ್ರಾಮಿನ ಒಂದು ಬಾಟಲಿಗೆ ಆಣೆ 0—12—0; ವಿ. ಪಿ. ಚಾರ್ಜು ಪ್ರತ್ಯೇಕ. ಉಚಿತವಾಗಿ ಮಾದರಿಗೆ 2 ಆಣೆಯ ಪೋಸ್ಟೇಜು ಸ್ಟ್ಯಾಂಪು ಕಳುಹಿಸಬೇಕು.

ಆರೋಗ್ಯಕ್ಕೂ ಬಣ್ಣಕ್ಕೂ,

ಆಧುನಿಕ ಶಕದಲ್ಲಿ, ಕಾಮಿನಿಯಾ ಟ್ಯಾಲೆಟ್ ಸೋಪು ಅಲಂಕಾರ ಸಾಮುಗ್ರಿಗಳ ರಾಜರುಗಳಲ್ಲಿ ಅತ್ಯದ್ಭುತ ಸಾಧನವಾದ 'ಕಾಮಿನಿಯಾ ವ್ಹೈಟ್ ರೋಸ್ ಸೋಪು' (ರಿಜಿಸ್ಟರ್ಡ್) ಮಧುರವಾದ ಗುಲಾಬೀ ಹೂವುಗಳ ಅತ್ಯಂತ ಸೂಕ್ಷ್ಮವಾದ ಪುಷ್ಪಸೌರಭವನ್ನು ಬೀರುತ್ತದೆ.

ಕಾಮಿನಿಯಾ ಗಂಧದ ಸಾಬೂನು
(ರಿಜಿಸ್ಟರ್ಡ್).

ಇದೀಗ ಹಿಂದೀಯರಿಗೆ ಅದರ್ಶಪ್ರಾಯವಾದ ಸಾಬೂನು. ಉಷ್ಣ ಹವೆಯ ಎಲ್ಲ ಬಾಧಕಗಳಿಂದ, ಇದು ಅತ್ಯಂತ ಸೂಕ್ಷ್ಮವಾದ ಚರ್ಮವನ್ನು ರಕ್ಷಿಸುತ್ತದೆ. ಚರ್ಮವನ್ನು ನಯಗೊಳಿಸಿ, ಅದನ್ನು ಸಂಪೂರ್ಣವಾಗಿ ನಿರ್ಮಲಗೊಳಿಸುತ್ತದೆ; ಗಂಧದ ಸೂಕ್ಷ್ಮವಾದ ಮತ್ತೂ ಆಹ್ಲಾದಕರವಾದ ಪರಿಮಳವನ್ನು ಹೊರಸೂಸುತ್ತದೆ.

ದಿಲ್‌ಬಹಾರ್ ಸೋಪ್ (ರಿಜಿಸ್ಟರ್ಡ್)

ಚರ್ಮಕ್ಕೆದು ಅತ್ಯುತ್ಕೃಷ್ಟವಾದ ಸಾಬೂನು; ಇದರ ಚಿತ್ತಾಕರ್ಷಕವಾದ ಪರಿಮಳದ ವಿಚಾರದಲ್ಲಿ ಇದು ನಿಜವಾಗಿಯೂ ಅಪ್ರತಿಮ. ಬೆಲೆ ಮೇಲೆ ಕಾಣಿಸಿದ 3 ತರಹದ ಸಾಬೂನಿಗೂ 3 ತುಂಡುಗಳ ಒಂದು ಪೆಟ್ಟಿಗೆಗೆ 0—14—0 ಆಣೆ; ವಿ. ಪಿ. ಚಾರ್ಜು ಪ್ರತ್ಯೇಕ.

ದೊರಕುವ ಸ್ಥಳ:—ಮೆಸರ್ಸ್ ಷಾ ಎಂಡ್ ಕೊ., ಮಂಗಳೂರು, ಮತ್ತೂ ಇಂಡಿಯದ ಯಾವತ್ತು ಮುಖ್ಯ ಸ್ಟೋರುಗಳಲ್ಲಿ.

ಸೋಲ್ ಏಜೆಂಟರು:—

ದಿ ಆಂಗ್ಲೋ—ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂಪೆನಿ, 285, ಜುಮ್ಮಾ ಮಸೀದಿ, ಬೊಂಬಾಯಿ 2.

ದಾಸಯ್ಯನ ಜೋಳಿಗೆ

ಕಂಠೀರವಾ! ಹೊಸ ವರುಷದ ಹೊಸ ನಮೂನೆಯ ಸಲಾಮುಗಳು ಬಂದವಪ್ಪಾ, ಹೊಸ ಹೊಸ ವರುಷಗಳು ಬರುತ್ತಿರುವಾಗ ಹೊಸ ನಮೂನೆಯ ಸಲಾಮುಗಳೂ ಎಷ್ಟೊಂದು ಬರಬೇಕಪ್ಪಾ! ಮೊದಲು ನಮ್ಮ ಮಹಾಮದೀಯ ಸಹೋದರರು ಬಂದಾಗ ಹಣೆ ತಗುಲಿಸಿ ಅಂಗೈನಿಂದ ಪ್ರಾರಂಭಿಸಿದರು. ಅವರೂ ನಾವೂ ಬೆರಕೆಯಾದಾಗ ಆ ಸಲಾಮು ಕೈಯನ್ನು ಹಣೆಗೆ ಅಡ್ಡ ಹಿಡಿದು ಮಾಡುವ ರೂಢಿ ಬಂತು. ಅದಾದ ಮೇಲೆ ಎರಡು ಕೈಯಲ್ಲಿಯೂ ಹಣೆ ಮುಟ್ಟದ ಸಲಾಮು ಮಾಡುವುದು ಬಂತು. ಆ ಮೇಲೆ ನೆಲಕ್ಕೆ ಬಗ್ಗಿ ಕೈಯಾಡಿಸಿ ಮಾಡುವುದು ಬಂತು.

ಶೀಮೆ ಜೊರೆಗಳು ಬಂದಾಗ ಆ ಸಲಾಮು ಕಿವಿ ಕಡೆ ಕೆನ್ನೆ ಮೇಲೆ ಕೊಡುವ ಹಾಗೆ ಸರಿಯಿತು! ಹಾಗೇ ಮುಂದೆ ಬರುತ್ತಾ ತಲೆ ಮೇಲಿನ ಹ್ಯಾಟನ್ನೊ, ಟೋಪಿಯನ್ನೊ, ಅಥವಾ ರುಮಾಲನ್ನೊ ತೆಗೆದು ಆಡಿಸುವ ಸಲಾಮು ಬಂತು. ಸ್ಕೌಟುಗಳು ಬಂದಾಗ 'ತ್ರಿಮೂರ್ತಿ'ಗಳನ್ನು ತೋರಿಸುವ ಮೂರು ಬೆರಳಿನ ಆಕಾರಕ್ಕೆ ಬಂತು. ಸ್ಕಾರ್ತರು ಮೂರು ಬೆರಳಲ್ಲಿ ವಿಭೂತಿ ಧರಿಸುವ ರೀತಿಯೇ ತಲಕೆಳಗಾಗಿ ಸ್ಕೌಟು ಸಲಾಮೆಂದು ವಾಡಿಕೆ ಬಂತು. ಇಷ್ಟೂ ಸಲಾಮುಗಳು ಹಿಂದಿನಿಂದ ಮಾರ್ಪಟ್ಟ ರೀತಿಯಾದರೆ ಈಗಿನ ವಿದ್ಯಾರ್ಥಿಗಳು ಒಂದೇ ಬೆರಳಲ್ಲಿ ಸಲಾಮು ಮಾಡುವುದು ಈಚಿಗೆ ಬಂದಿದೆ.

ಕಂಠೀರವಾ! ನಿನ್ನ ಹೊಸ ನಮೂನೆ ಸಲಾಮು ಎಂತಹದೂ ಅಂತ! ಪೋಲೀಸರ ಸಲಾಂನಂತೆ ಎಡಗಡೆಗೆ ಎಡಗೈ ಸಲಾಂ; ಬಲಗಡೆಗೆ ಬಲಗೈ ಸಲಾಮೇ? ಹಳ್ಳಿಯವನಂತೆ ಕೈನಿಂದ ಎದೆ ಮುಟ್ಟಿಕೊಳ್ಳುವ ಸಲಾಮೇ? ಇಲ್ಲ, ದೇವದಾಸಿಯು ಸಭೆಯಲ್ಲಿ ಬಿನ್ನಾಣದಿಂದ ಕೊಡುವ ಸಲಾಮೇ? ಹಣೆ ಮುಟ್ಟದ ದೊಣ್ಣೆ ಹಿಡಿದು ದಾರಿಯಲ್ಲಿ ಕಾದು ಕೊಡುವ ಸಲಾಮೊ? ಬಹುಶಃ ನಿನ್ನ ಸಲಾಮು ಕ್ಯಾಪ್ಟನ್ ಸಾಬರಿಗೆ ಸೋಲ್ಜರು ಭೂಪನು ಕೊಡುವ ಸಲಾಮಾಗಿರಬಹುದು. ನಿನ್ನಿಂದ ನಿನಗೆ 'ನೇವಿಕ್ಯಾಡೆಟ್ಟು' 'ಸ್ಟೀಮರ್ ಕ್ಯಾಪ್ಟೆನ್'ಗೆ ಕೊಡುವಂತ ಸಲಾಮುಗಳು! ಹೊಸ ವರುಷದಲ್ಲಿ ಸುಖವಾಗಿ ನಿನ್ನ ಹಡಗು ನಡೆಯಲಿ! ದಾಸಯ್ಯನ ವೇಷವೂ ಕುಣಿದಾಡಲಿ!!

* * * * *

ಮೈಸೂರಲ್ಲಿ 'ಎಂದರೋ ಮಹಾನುಭಾವಲು' ಇದ್ದಾರೆ. ಪೂರ್ವದಲ್ಲಿ ಜನಗಳ ಹೆಸರನ್ನು ಅನ್ವರ್ಥವಾಗಿಡುತ್ತಿದ್ದರಂತೆ. ಧರ್ಮರಾಯನೆಂದರೆ ಧರ್ಮರಾಯನೇ. ಭೀಮನೆಂದರೆ ಬಲ ಪರಾಕ್ರಮಿ ಭಯಂಕರನೇ. ಜರಾಸಂಧನೆಂದರೆ ಜರೆಯೆಂಬ ರಾಕ್ಷಸಿಯಿಂದ ಕೊಡಲ್ಪಟ್ಟವನೇ. ಆಂಜನೇಯನೆಂದರೆ ಅಂಜನಾ ಸುತನೆಂದೇ. ಹೀಗೆ ಹೆಸರುಗಳಿದ್ದವಂತೆ. ಕಲಿಯುಗದಲ್ಲಿ ಹಾಗೆ ಇಲ್ಲ. ಏಕೆಂದರೆ ಹೆಸರಿಗೆ ತಕ್ಕ ಗುಣಗಳಿಲ್ಲ. ಕರ್ಣನೆಂದಿದ್ದರೆ ಜಿಪುಣಾಗ್ರೇಸರ! ಭೀಮರಾಯರೆಂದರೆ ಒಣಗಿದ ಕಟ್ಟಿಗೆ! ವಾಮನರಾಯರು ಉದ್ದದವರು! ಸೈಂಧವಪ್ಪನವರು ಅತಿ ಕುಳ್ಳರು! ಹೀಗೆ ಅಸಂಬದ್ಧ.

ಮೈಸೂರು ಮಾದರಿಯಲ್ಲವೆ? ಆಡಳಿತಕ್ಕೆ— ಮರ್ಯಾದೆಗೆ— ಉಡುಗೆತೊಡುಗೆಗಳಿಗೆ— ಒಟ್ಟಿನಲ್ಲಿ ದಾನಧರ್ಮಕ್ಕೂ— ಬಡತನಕ್ಕೂ ಹಾಗೇ ಮಾದರಿ. ಬೆಂಗಳೂರು ಮಾ। ಸಜ್ಜನರಾಯರ ಧಾನ ಧರ್ಮ ನೋಡಿದಿರಾ? ಅವರು ಹೆಸರಲ್ಲಿ ಹೇಗೆ ಸಜ್ಜನರೋ— ಗುಣದಲ್ಲಿಯೂ ಸಜ್ಜನರೇ. ಲಕ್ಷಾಂತರ ರೂಪಾಯಿಗಳ ಧರ್ಮ— ಜೆನೋಪಕಾರ— ಸದ್ಗುಣಗಳ ಗಣಿಯಾದ ಇವರಿಗೆ ಬೆಂಗಳೂರವರು ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿ ಬಹುಮಾನ ಮಾಡಿದರು. ಅವರೂ ಪ್ರಜೆಗಳ ವಾತ್ಸಲ್ಯಕ್ಕೂ, ದಿವಾನ್‌ರಾದಿಯಾಗಿ ಸರಕಾರದವರು ಮಾಡಿದ ಸಹಾಯಕ್ಕೂ, ರಾಜಕುಟುಂಬದವರ ಅಭಿಮಾನಕ್ಕೂ ಬಹಳವಾಗಿ ಕೃತಜ್ಞತೆಗಳನ್ನು ತೋರಿಸಿದರು. ಅಷ್ಟೇ ಅಲ್ಲ. ತಾವು ಅಭಿವೃದ್ಧಿಗೆ ಬಂದ ಬಿನ್ನಾ ಕಂಪನಿಯನ್ನು ಮರೆಯಲಿಲ್ಲ. ಅದಲ್ಲವೇ ಸಜ್ಜನರಾಯರ ಸದ್ಗುಣ?

* * * * *

ನಮ್ಮ ದೇಶದಲ್ಲಿ 'ಕಾಂಗ್ರೆಸ್ ಜ್ಯೂಬಿಲಿ'ಯನ್ನು ನಾನಾ ವಿಧದಲ್ಲಿ ಆಚರಿಸಿ, ಮೈಸೂರಿನವರು ಕಾಂಗ್ರೆಸ್ ಭಕ್ತರೆಂಬ ಬಿರುದನ್ನು ಸಾರ್ಥಕಪಡಿಸಿದರು. ಪತ್ರಿಕೆಗಳಲ್ಲಿ ಬಂದದ್ದು ಸ್ವಲ್ಪವಾದರೂ ನಡೆದದ್ದು ವಿಶಾಲೋತ್ಸವಗಳು. ದೀಪಾವಳಿಗಳಂತೂ ಮೈಸೂರನ್ನು ನೋಡಿದವರಿಗೆ ಹೊಸದೇನೂ ಅಲ್ಲ. ಆ ದಿವಸ ಆಟಪಾಟವಿನೋದಗಳಲ್ಲದೆ— ಉಪನ್ಯಾಸಾದಿ ವಿಹಾರಗಳಲ್ಲದೆ— ಪ್ರತಿ ಮನೆಯಲ್ಲಿಯೂ ಪರಮಾನ್ನ ಭೋಜನವು ನಡೆಸಲ್ಪಟ್ಟಿದೆ ಎಂಬುದನ್ನೂ ಧಾರಾಳವಾಗಿ ಬರೆಯಬಹುದಾಗಿದೆ.

ಇದೇ ಸಮಯದಲ್ಲಿ ನಮ್ಮೂರಲ್ಲಿ ಓರಿಯಂಟಲ್ ಕಾನ್‌ಫರೆನ್ಸಿನ ಶುಭಸಮಯ. ಅನೇಕ ವಿದ್ಯಾವಂತ ಪಂಡಿತರುಗಳು ನೆರೆದು ಸಭೆಯನ್ನು ನಡೆಸಿದ ಸಂತೋಷ ಸಮಯ. ನಮ್ಮ ಚಿಕ್ಕ ಮಹಾಸ್ವಾಮಿಗಳವರು ದಯಮಾಡಿ ಸಭೆಯನ್ನು ಪ್ರಾರಂಭಿಸಿದ ನೇತ್ರೋತ್ಸವದ ಸಮಯ. ನಯಮಾಡಿಸಿದ್ದ ಅತಿಥಿಗಳು ಮೈಸೂರಿನ ಸೊಬಗು— ಕಾವೇರೀ ಜಲಾಶಯದ ಬೆಡಗು— ಚಾಮುಂಡಿ ಬೆಟ್ಟದ ಮೇಲಿಂದ ಮೈಸೂರಿನ ದೀಪಾವಳಿಗಳ ಸೌಂದರ್ಯ— ಉದ್ಯಾನ ವನಗಳ, ಪ್ರಾಣಿ ಪ್ರದರ್ಶನಾಲಯದ, ಸಂಗೀತ ಬ್ಯಾಂಡುಗಳ ಸೊಗಸುಗಳನ್ನೂ ಅನುಭವಿಸಿದರು. ಮೈಸೂರಿನ ಭಾಗ್ಯವೆಂದರೆ ಈಗಿನ ಸಮಯವೇ.

ಅಷ್ಟೇ ಅಲ್ಲ. ನಮ್ಮ ದೇಶೀಯರಾದ ಮಾ। ಸುಬ್ಬರಾಯರವರು ಬೊಂಬೈ ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ದಯಮಾಡಿ ಅಗ್ರಾಸೀನರಾದದ್ದು ಮತ್ತೊಂದು ಸಂತೋಷದ ಸುದ್ದಿ. ಅವರು ಮೈಸೂರವರಾದರೂ ಅವರ ಭಾಷಣದಲ್ಲಿ ಮಂಗಳೂರು ಕನ್ನಡ ಶಬ್ದಗಳು ಬಂದಿರುವವೆಂಬ ಅಪವಾದಕ್ಕೊಳಗಾದರೂ ನುಂಗಲೂರವರಿಗೊಂದು ಸಂತೋಷ ಸಮಾಚಾರ. ಏಕೆಂದರೆ ಅವರ ಭಾಷಣದಲ್ಲಿ ಮಂಗಳೂರು ಕನ್ನಡ-ಧಾರ್ವಾಡದ ಕನ್ನಡ-ಮೈಸೂರ ಕನ್ನಡಗಳನ್ನೂ ಬೆರೆಸಿ ಸರ್ವಸಮದೃಷ್ಟಿಯನ್ನು ಬೀರಿದರಿಂದು ದಾಸಯ್ಯನ ಅಭಿನಂದನೆ. ಅವರ ಭಾಷಣವು ಅಮೋಘವಾದದ್ದು. ಮೈಸೂರಿನ ಮಾತ್ರವೇ ಅಲ್ಲ. ಕನ್ನಡ ನಾಡಿಗೇ ಅದೊಂದು ಭೂಷಣ.

ಇನ್ನೂ ಇದೆ ಸ್ವಾಮಿ. ನಮ್ಮ ದಿವಾನ್‌ರಿಗೆ ಹೊಸ ಬಿರುದು ಕೆ. ಸಿ. ಐ. ಇ. ಬಂತು. ನನ್ನ ಮತ್ತು ಕಂಠೀರವನ ಧನ್ಯವಾದಗಳು. ಇವರು ಬರೋಡೆಯ ಮಹಾರಾಜರವರ ಜ್ಯುಬಿಲಿಗೆ ದಯಮಾಡಿಸಿದ್ದಾರೆ. ಖಿಲ್ಲತ್ತುಗಳೂ ಹೋಗಿವೆ. ಅವರು ನಮ್ಮ ಖಾವಂದರವರ ಜನಕರಿಗೆ ಸ್ನೇಹಿತರು. ಮೈಸೂರು ದೇಶದ ಹಿತೈಷಿಗಳು, ನಮ್ಮ ಖಾವಂದರವರಿಗೆ ಪರಮ ಬಂಧುಗಳ ಹಾಗೆ. ಅಂತವರ ಜ್ಯುಬಿಲಿಗೆ ದಿವಾನ್‌ರೇ ದಯಮಾಡಿಸಿ ನಮ್ಮ ಖಾವಂದರವರ— ಮೈಸೂರು ಪ್ರಜೆಗಳ ಧನ್ಯವಾದಗಳು· ಮತ್ತು ಹಾರೈಕೆಗಳನ್ನೂ ಸಲ್ಲಿಸುವುದು ಮೈಸೂರಿಗೆ ಕೀರ್ತಿಪ್ರದವಾದದ್ದು. ಶ್ರೀ ಸಯಾಜಿ ರಾವ್ ಮಹಾರಾಜ್‌ಕೀ ಜೈ.

[ದಾಸಯ್ಯ ಮಿಸ್ಟರು ೧೯೩೫ರಲ್ಲಿ ನಿದ್ದೆ ಹೋಗಿದ್ದವನು ೧೯೩೬ನೇ ಇಸ್ವಿಯಲ್ಲಿ ಎಚ್ಚೆತ್ತ. ಆಗಲೇ ಅವನಿಗೆ ಹೊಸ ವರ್ಷವೂ ಬಂದು, 'ತುಲಾಭಾರ ಹರಿಕಥೆ'ಯೊಡನೆ ಹೊಸ ವರ್ಷದ ಸಲಾಮಿನ ಮೂಟೆಯನ್ನು ಕಳುಹಿಸಿರುತ್ತಾನೆ.]

ಮಿ॥ ದಾಸಯ್ಯ.

ಬೀಡಿ ಬೀಡಾ ಬೇಡಾ? ಸೋಡಾ 'ಬೋಡಾ'?

(ಭಾಮಿನಿ ಷಟ್ಪದಿ.)

ಬೀಡಿ ಬೀಡವು ಒಡನೆ ಸೋಡವು ।
ಕೂಡಿ ನಡೆದವು ಕೋಳಿ ಪಡೆಯನು ।
ನೋಡಿ ಜನರನು ಬೇಡುತಿರ್ದವು ಹಲವು ಪರಿಯಿಂದಾ ॥
ಸೋಡವೆಂಬುದು ನನ್ನ ಹೆಸರದು ।
ಬೀಡ ಎಂದೇ ಇವನ ಕರೆವರು ।
ನೋಡಿ ಈತನು ಕಡು ಬಲಾಢ್ಯನು ಬೀಡಿ ಎಂಬವನೂ ॥ ೧ ॥

ಬೀಡಿ ಬೀಡಾ ಸೋಡ ಬೋಡಾ ।
ನೋಡ ಬನ್ನಿರಿ ಬೀಡ ತಿನ್ನಿರಿ ।
ಸೋಡ ಕುಡಿಯಿರಿ, ಬೀಡಿ ಸೇದಿರಿ ಕೆಡುವ ಜನರೆಲ್ಲಾ ॥
ಸೋಡ ಎಂದೇ ಹೇಳಿ ಜನರಿಗೆ ।
ಗೂಢದಿಂದೆ ಸರಾಯಿ ಕುಡಿಯಿರಿ ।
ಬೀಡದೊಂದಿಗೆ ಹೊಗೆಯಸೊಪ್ಪನು ತಿನ್ನಿ ನೀವೆಲ್ಲಾ ॥ ೨ ॥

ಮೂರು ಕಾಸಿಗೆ ಮೂರು ಬೀಡವು ।
ಆರು ಕಾಸಿಗೆ ಮೂರು ಸೋಡವು ।
ಮೂರು ಕಾಸಿಗೆ ಆರು ಬೀಡಿಯು ಹೀಗೆ ಮಾರಾಟಾ ॥
ಬರಿಯ ಬೀಡವು ಬೇಡವಾದರೆ ।
ಮರೆಯಬೇಡಿರಿ ಹೊಗೆಯಸೊಪ್ಪನು ।
ಬೆರಸಿ ತಿನ್ನಿರಿ ಆಗ ಬೀಡಿಗೆ ಇದುವೆ ಸರಿ ಜೋಡೂ ॥ ೩ ॥

ಮೂರು ಮೂರ್ತಿಗಳಾಗಿ ರಂಜಿಸಿ ।
ನೂರು ಗುಣಗಳನಿಲ್ಲಿ ತೋರಿಸಿ ।
ಭೂರಿ ಜನರಿಗೆ ದಾರಿ ತೋರುತ ಹರುಷಗೊಳಿಸುವೆವೂ ॥
ಹರನು ಬೀಡಿಯು, ಹರಿಯು ಬೀಡವು ।
ಧರೆಗೆ ಸೋಡವು ನಾನೆ ಬೊಮ್ಮನು ।
ಬರಿಯೆ ತಂಬಕು ಇನಿತೆ ನಮ್ಮಯ ಗೂಢಸಂಗತಿಯೂ ॥ ೪ ॥

ಪರಮ ಭೂಸುರ ಸಹಿತ ಎಲ್ಲರು ।
ಹರುಷದಿಂದಲಿ ನಮ್ಮ ಭಜಿಪರು ।
ಸರಿಯು ಬೆಲೆಯನು ಕೊಟ್ಟು ಪಡೆವರು ನಮ್ಮ ಮುದ್ದಿಪರೂ ॥
ಮರೆಯಲಾಪರೆ ನಮ್ಮ ಗುಣಗಳ ।
ನರಿತುಕೊಂಡೇ ನಮ್ಮ ಭಕುತರು ।
ಸರಸದಿಂದಲಿ ಪೊಗಳುತಿರುವರು ನಮ್ಮ ಸೇವಿಪರೂ ॥ ೫ ॥

ಹರಣ ಹೋಗುವ ತನಕ ನಮ್ಮನು ।
ಮರೆಯಲಾವರೆ ನಮ್ಮ ದಾಸರು ।
ಸರಿಯು ಅವರಿಗೆ ಉಂಟೆ ನೋಡಲು ಮೂರು ಲೋಕದಲೀ ॥
ಪರಮ ಚರಿತೆಯು ನಮ್ಮ ಕಥೆಯಿದು ।
ಹರುಷದಿಂದಲಿ ಹೇಳಿ ಕೇಳುವ ।
ಬರೆವ ಬರೆಸುವರೆಲ್ಲ ಜನರನು ನಾವು ಬಾಧಿಸೆವೂ ॥ ೬ ॥

ಮುದ್ರಾಡಿ ಕೃಷ್ಣಯ್ಯ ಸೆಟ್ಟಿ.

'ರಾಮುದಾಸ' ವಜ್ರಕಾಯ ಗುಟಿಕಾ
(STERN-VIGOUR)

ಈ ಔಷಧದಲ್ಲಿ ಭಂಗಾರ, ಕಸ್ತೂರಿ, ಕೇಸರಿ ಮುಂತಾದ ಅಮೂಲ್ಯ ಜೀನಸುಗಳಿದ್ದು ಇದು ಮುಖ್ಯವಾಗಿ ಧಾತುವನ್ನು ಗಟ್ಟಿಮಾಡಿ ಧಾತು ಕ್ಷೀಣತೆ ಮೂಲಕ ಉದ್ಭವಿಸುವ ಸ್ವಪ್ನೇಂದ್ರಿಯ ಮೊಹಲಾದ ಕೊರತೆಗಳನ್ನು ದೂರಪಡಿಸಿ, ಧಾತುಸ್ತಂಭನ ಶಕ್ತಿಯನ್ನು ಹೆಚ್ಚಿಸಿ ರತಿಕ್ರೀಡೆಯಲ್ಲಿ ಹೆಚ್ಚಿನ ಅಹ್ಲಾದವನ್ನು ಕೊಡುವುದು. ಹಾಗೂ ಅತ್ಯಾಚಾರದಿಂದ ಉಂಟಾದ ನಪುಂಸಕತ್ವವನ್ನು ಸಹಾ ಹೋಗಲಾಡಿಸುವುದು. ೩೨ ಗುಳಿಗೆಗಳ ಬಾಟ್ಲಿ ೧ಕ್ಕೆ ರೂ. ೧—೪—೦; ೫ಂಕ್ಕೆ ೪—೮—೦.

ಪ್ರತಿ ದಿನ ಒಂದೇ ಗುಳಿಗೆಯಂತೆ ಸೇವಿಸುವುದು.

ನಮ್ಮ ಇತರ ಅನುಭವಸಿದ್ಧ, ವನಸ್ಪತಿಜನ್ಯ ಔಷಧಗಳ ಮಾಹಿತೀ ಪತ್ರಿಕೆಯನ್ನು ನಮ್ಮ ಏಜಂಟರಿಂದಾಗಲೀ ವ್ಯಾಪಾರಸ್ಥರಿಂದಾಗಲೀ ಪಡೆಕೊಳ್ಳಿರಿ. ನಮ್ಮ ಔಷಧಗಳು ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿ ಒಂದು ಊರಲ್ಲಿ ಪ್ರಮುಖ ವ್ಯಾಪಾರಸ್ಥರಲ್ಲಿ ದೊರಕುವವು.

ತಯಾರಿಸುವವರು:—
ರಾಮುದಾಸ ಕೆಮಿಕಲ್ ವರ್ಕ್ಸ್, ಹುಬ್ಬಳ್ಳಿ.

ಜಿಲ್ಲಾ ಏಜಂಟರು:—
ಮುಲ್ಲಾಪುರ ಕಂಪೆನಿ, ಲಿಮಿಟೆಡ್, ಹೊಸಗದ್ದೆಕೇರಿ, ಮಂಗಳೂರು.

ಸಬ್ ಏಜಂಟರು:—
ಕೆ. ರಾಮ ನಾಯಕ, ಕಾಸರಗೋಡು.
ಎವಿ. ಮುಕುಂದ ಕೃಷ್ಣ ನಾಯಕ, ಮಂಜೇಶ್ವರ.
ಡಾ। ಕೆ. ಶ್ರೀನಿವಾಸ ಪೈ, L. M. P., ಪುತ್ತೂರು.
ವಿಕ್ಟೋರಿಯಾ ಪ್ರೆಸ್, ಬಂಟ್ವಾಳ.
ಡಾ। ರಾಯಪ್ಪ ಕಾಮತ್, ಎಲ್. ಎಂ. ಪಿ., ಮೂಲ್ಕಿ.
ವಿ. ವಿ. ಶೆಣೈ, ಕಾರ್ಕಳ.
ಮೆ। ಸಜ್ಲೈ ಏಜನ್ಸಿ ಲಿಮಿಟೆಡ್, ಉಡುಪಿ.
ದಿ ಮೊಡರ್ನ್ ಫಾರ್ಮಸಿ, ರಾಮಚಂದ್ರ ಹೆಬ್ಬಾರ, ಕೋಣೆ } ಕುಂದಾಪುರ.

ಉಚಿತ! ಉಚಿತ!!

ಕಾಂಗ್ರೆಸ್ ಸುವರ್ಣಮಹೋತ್ಸವ ಸಂಚಿಕೆ.

'ವಿಶ್ವಕರ್ಣಾಟಕ' ದಿನಪತ್ರಿಕೆ ಅಥವಾ ವಾರಪತ್ರಿಕೆಗೆ ಈ ತಿಂಗಳಲ್ಲಿ ಚಂದಾದಾರರಾಗುವವರಿಗೆ ಈ ಸಂಚಿಕೆಯು ಉಚಿತವಾಗಿ ಕಳುಹಿಸಲಾಗುವುದು. ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ!

'ವಿಶ್ವಕರ್ಣಾಟಕ', ಬೆಂಗಳೂರು ನಗರ.

2, 14-1.

ಕೊಮನ್‌ವೆಲ್ತ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ—ಪೂನಾ.

ತನ್ನ ಮೊದಲನೆಯ ತ್ರೈವಾರ್ಷಿಕ ಸಾಂಪತ್ತಿಕ ಪರಿಶೋಧನೆಯಿಂದಲೇ ತ್ರೈವಾರ್ಷಿಕ ಬೋನಸ್ಸು (ಲಾಭಾಂಶ) ರೂ. 30 ಮತ್ತು ರೂ. 36 ಕೊಟ್ಟು ಪ್ರಥಮ ಸ್ಥಾನವನ್ನು ಹೊಂದಿದ ದೇಶೀಯ ಕಂಪೆನಿ.

ದಕ್ಷಿಣ ಕನ್ನಡಾ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಏಜಂಟರಾಗಲು ಬಯಸುವ ಸದ್ಗೃಹಸ್ಥರೂ ಮಹಿಳೆಯರೂ ಬೇಕಾಗಿದ್ದಾರೆ.

ವಿಶೇಷ ಔದಾರ್ಯದ ಕಮಿಶನ್ ಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವುದು:—

ಎಮ್. ಯೆಸ್. ರಂಗನಾಥ ರಾವ್,
ನಂ. 2, ಕೊಯಿಲೋ ರಸ್ತೆ,
ಕೊಡಿಯಾಲಬೈಲು, ಮಂಗಳೂರು.

4, 14-1.

ಮಂಗಳೂರು ಪೇಟೆಯ ಚಾಲತಿ ಧಾರಣೆ.

ಹೊಸ ರಾಶಿ	...	3—6	3—12
ಮುಸ್ಕತಿ ಅಕ್ಕಿ ಮುಡಿ ೧ಕ್ಕೆ	...	3—10	4— 2
ಗುಡು	...	3— 8	3—14
ಹೊಸ ರಾಶಿ	...	3— 6	3—12
ಆವ್ವಲ್‌ಬಿ ಬೆಳ್ತಿಗೆ ,, ೧,,	...	4— 0	4— 8
ಗುಡ್ಡು ಬೆಳ್ತಿಗೆ ,, ,,	...	3—10	—
ರಂಗೂನ ಬೆಳ್ತಿಗೆ ಗೋಣಿ ೧ಕ್ಕೆ	...	6— 4	7— 0
ಗೋದಿ ಗೋಣಿ ೧ಕ್ಕೆ	...	8— 8	10— 4
ಹುರುಳಿ ,, ,,	...	5— 4	5—12
ಕಡಲೆ ,, ,,	...	7— 4	9— 8
ತೊಗರಿ ,, ,,	...	9— 0	9— 8
ತೊಗರಿಬೇಳೆ ಗೋಣಿ ೧ಕ್ಕೆ	...	11— 0	15— 8
ಉದ್ದು ಮುಡಿ ೧ಕ್ಕೆ	...	4— 6	4—10
ಹೆಸರು ,, ,,	...	4—10	5— 0
ರಾಗಿ ಗೋಣಿ ೧ಕ್ಕೆ	...	5— 0	6— 4
ಈರುಬೆಲ್ಲ ಖಂಡಿ ೧ಕ್ಕೆ	...	32— 8	40— 8
ಉಪ್ಪು ಗೋಣಿ ,,	...	4— 8	—
ಹೊಬ್ರಿ ಖಂಡಿ ,,	...	60—	70— 0
ಹೊಬ್ರಿ ಹಿಂಡಿ ಖಂಡಿ ೧ಕ್ಕೆ	...	28— 0	29 - 0
ಎಳ್ಳಿಂಡಿ ಖಂಡಿ ೧ಕ್ಕೆ	...	33—12	35— 0
ಹೊಬ್ರಿ ಎಣ್ಣೆ ಮಣ ೧ಕ್ಕೆ	...	5— 0	6— 0
ಎಳ್ಳೆಣ್ಣೆ ಡಬ್ಬಿಗೆ	...	—	7— 0
ಚಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	...	—	6— 5
ಮೋರಿಸ್ ಸಕ್ಕರೆ ಮಣ ೧ಕ್ಕೆ	...	3— 9	—
ಮೆಣಸಿನ ಕಾಯಿ ಮಣ ೧ಕ್ಕೆ	...	2— 8	4—
ಸಾಸಿವೆ ಮುಡಿ ೧ಕ್ಕೆ	...	5— 8	6— 0
ಕೊತ್ತಂಬರಿ ಮುಡಿ ೧ಕ್ಕೆ	...	2— 8	3— 0
ನೇಟಿವ ಕಾಫಿ ಖಂಡಿ ೧ಕ್ಕೆ	...	145— 0	150— 0
ನೇಟಿವ ಪೀಬರಿ ಕಾಫಿ ಖಂಡಿ ೧ಕ್ಕೆ	...	185— 0	190— 8
ಮೂನ್‌ಸೂನ್ ಏ ಏ ಕಾಫಿ ಖಂಡಿ ೧ಕ್ಕೆ	...	190— 0	195— 0
ಬಿಳಿ ಗೋಟು ಅಡಿಕೆ ಖಂಡಿ ೧ಕ್ಕೆ (ಹಳ್ಳಿ	...	100— 0	115— 0
ಕಾಳುಮೆಣಸು ಖಂಡಿ ೧ಕ್ಕೆ	...	102— 8	105— 0
ಯಾಲಕ್ಕಿ ಮಣ ೧ಕ್ಕೆ ಕೊಡಗು	...	24— 0	26— 4
,, ,, ,, ಸಕಲೇಶಪುರ	...	26— 0	30— 0
,, ,, ,, ಬೀಜ	...	38— 0	40— 0
ಗೇರುಬೀಜ ಮುಡಿ ೧ಕ್ಕೆ	...	4— 6	4— 8
ಬತ್ತ ಮುಡಿ ೧ಕ್ಕೆ	...	1— 8	1—10
ಎಳ್ಳು ಮುಡಿ ೧ಕ್ಕೆ	...	6— 4	6— 8
ತುಪ್ಪ ಮಣ ೧ಕ್ಕೆ	...	18— 0	19— 0
ಕಬ್ಬಿಣ ಖಂಡಿ ೧ಕ್ಕೆ	...	35— 0	37— 8
ತಾಂಬ್ರ ತಗಡು ಮಣ ೧ಕ್ಕೆ	...	9—12	9—14
ಪವನು ೧ಕ್ಕೆ	...	22— 8	—
ತಾಂಬ್ರ ಪಾತ್ರೆಗಳು ಮಣ ೧ಕ್ಕೆ	...	12— 8	14— 0
ಚೀನಿ ಬೆಳ್ಳಿ ಸೇರು ೧ಕ್ಕೆ	...	17— 8	18 - 0
ಹಿತ್ತಾಳೆ ತಗಡು ಮಣ ೧ಕ್ಕೆ	...	10— 0	10— 0
ಹೊಸತ್ತು ಬಿಳಿಗೋಟು ಖಂಡಿ ೧ಕ್ಕೆ	...	75— 0	85— 0
ಮಂಗಳೂರು ಹಂಚು I ಕ್ಲಾಸ್—1000ಕ್ಕೆ		ರೂ. 26ರಿಂದ	30
,, ದಂಬೆಗಳು ,, ,,		ರೂ. 70ರಿಂದ	80
ನೆಲಕ್ಕೆ ಹಾಸುವ ಇಟ್ಟಿಗೆಗಳು ,, ,,		ರೂ. 35ರಿಂದ	40

ಮಂಗಳೂರಿನಲ್ಲಿ ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ	ಘಂಟೆ	ತಲಪುವ	ಘಂಟೆ
ಮಿಕ್ಸೆಡ್	ಬೆಳಿಗ್ಗೆ	5—55	ರಾತ್ರಿ	9—0
ಕಾಂಜಂಗಾಡ್ ಪ್ಯಾಸಂಜರ್	ಬೆಳಿಗ್ಗೆ	8—25	ಮಧ್ಯಾಹ್ನ	1—55
ಮೂಲಬಾರ್ ಎಕ್ಸ್‌ಪ್ರೆಸ್	ಬೆಳಿಗ್ಗೆ	9—50	ಸಂಜೆ	4—25
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ	1—0	ಮಧ್ಯಾಹ್ನ	2—45
ಕಾಸರಗೋಡ್ ಪ್ಯಾಸಂಜರ್	ಮಧ್ಯಾಹ್ನ	3—25	ಸಂಜೆ	6—25
ಶಟಲ್	ಸಂಜೆ	5—30	ಬೆಳಿಗ್ಗೆ	9—26

ಕಸಬರಿಗೆಯ ಸಂಸಾರ

ಕಳೆದ ಜನವರಿ ತಾ. ೯ರ "ನವಯುಗ"ದಲ್ಲಿ "ಕಂಠೀರವನ ಕಂಠಶೋಷಣೆ" ಎಂಬ ಈ ಉಗ್ರ ಅಗ್ರಲೇಖನಲ್ಲಿ,—

"ಬೈಗಳ ಸಂತೆ ಯಾರದು ಎಂಬುದನ್ನು ನಿಶ್ಚೈಸುವ ಜವಾಬ್ದಾರಿಯು ವಾಚಕರಿಗಿರಲಿ" ಎಂದು "ನವಯುಗ"ವು ಅಪ್ಪಣೆ ಕೊಡಿಸುತ್ತಾ, (ಕಂಠೀರವ) "ಬೈಗಳಿಗಾಗಿಯೇ ಜನ್ಮ ತಾಳಿದೆ, ಪರನಿಂದೆಯ ಕ್ಷುದ್ರಜೀವನದಿಂದಲೇ ವಿಕಟ ಸಂತೋಷ ಪಡುತ್ತಿದೆ; ತನ್ನ ಕೊಳಕು ಮೋರೆಗೆ ಅರದಾಳ ಹಚ್ಚಿದೆ; ಕೋಲ ಕಟ್ಟಿದೆ;....ಅಬ್ಬರ ತಾಳಕ್ಕೆ ತಕ್ಕಂತೆ ಆರ್ಭಟಿಸಿ ತಾಂಡವನೃತ್ಯ ಕ್ಕಾರಂಭಿಸಿದೆ" ಎಂದು ಮುಂತಾಗಿ ಆರಂಭಿಸಿ, ಆ ಸಹಸ್ರ ನಾಮಜಪದಿಂದಲೇ ತನ್ನ "ಗೌರವಪೂರ್ಣವಾದ ಅಗ್ರಲೇಖ"ನನ್ನು ಮುಗಿಸಿದೆ. ನಿಜವಾಗಿಯೂ ಒಣ ಬೈಗುಳಿನ ಚರಂಡೀ ಪತ್ರಿಕಾ ಉದ್ಯೋಗದಲ್ಲಿ ಇದನ್ನು ಯಾರೂ ವಿೂರಿಸಿದವರಿಲ್ಲ. ಆದರೆ ಆ ಬೈಗುಳಿನ ಮಾಲೆಯಲ್ಲಿ ಹೊಸದೇನೂ ಇಲ್ಲದೆ, ಈ ಬಯ್ಗುಳಿದ ಐಗಳು, ಪುನಃ ಪುನಃ ಬಯ್ಗುಳಿನ ಆ ೨೦—೨೫ ಶಬ್ದಗಳನ್ನೇ ಪದೇ ಪದೇ ಮಗ್ಗೀ ಪಾಠದಂತೆ ಉಪ ಯೋಗಿಸುತ್ತಿರುವುದು, ಆಚೆ ಈಚೆ ಎತ್ತಿ ಇಡುತ್ತಿರುವುದೂ ಇದ್ದುದರಲ್ಲಿ ವಿನೋದಾಸ್ಪದವಾಗಿದೆ.

"ಯಾರನ್ನಾದರೂ ಹಿಡಿಸಿ ಹಾಕುವ" ಕೆಲಸ "ನವ ಯುಗ"ದ್ದೇ ಎಂಬುದಕ್ಕೆ-"ಸಂತೇ ಶಕ"ನೆಂದು "ಕಂಠೀರವ" ನನ್ನು ಕರೆಯಿಸಿದುದೇ ಸಾಕಾಗಿದೆ. ಮೆಡಲಿನ ಮಟ್ಟಿಗೆ ಕೈಸರ್-ಈ-ಹಿಂದ್ ಮೆಡಲು, ಜುಬಿಲಿ ಮೆಡಲುಗಳು ದೊರಕಿ ದುದು "ಕಂಠೀರವ"ನಿಗೆ ಅಲ್ಲವಷ್ಟೆ! ಮತ್ತೆ ಗರ್ಭಸ್ರಾವದ ಕುರಿತು, "ಬಟಾಟೆ ಕೊಳೆಯದ ಹಾಗೆ" ಒಂದು ಮಿತ ಸಂತಾ ನದ ಪುಸ್ತಕವನ್ನೋ ಅಥವಾ "ನವಯುಗ"ದಲ್ಲಿ ಆ ಕುರಿತು ಕೆಲವು ಲೇಖಗಳನ್ನೋ ಬರೆಸಿಬಿಟ್ಟರಾಯಿತಲ್ಲ!

ಇಲ್ಲಿಯ ಚುನಾವಣೆಯ ಕತೆಯನ್ನು ಕಾಂಗ್ರೆಸ್ ಮೆಂಬರರೆಂಬವರ ಸಾಹಸಾದಿಗಳನ್ನೂ, ಲೋಕೋದ್ಧಾರಬುದ್ಧಿ ಯನ್ನೂ, ರಾಷ್ಟ್ರಸೇವಾಸಕ್ತಿಯನ್ನೂ ವರ್ಣಿಸಲು—ಒಂದು ಪ್ರತ್ಯೇಕ ಸಂಚಿಕೆಯೇ ಬೇಕಿದ್ದಿತು; ನಿಜ. ಆದರೆ ಆ ಸಂಚಿಕೆ ಯನ್ನು ಪೂರ್ತಿ ಮಾಡುವಷ್ಟು ಸೌಕರ್ಯವು "ಉಡುಪಿಯ ಕೆಲವು ಪ್ರೆಸ್ಸುಗಳಿಗೆ ಕೆಲಸ ಹಂಚಿ ಕೊಡುವ" ಈ ಮುದ್ರಾ ಲಯಕ್ಕೆಲ್ಲಿಂದ ಬರಬೇಕು? "ಸ್ಪೆಶಲ್" ಸಂಚಿಕೆ ಎಂದ ಕೂಡಲೇ, ದೊಡ್ಡ ಮುದ್ರಾಲಯಗಳೂ ತಮ್ಮಲ್ಲಿ ಅಚ್ಚಾಗುವ ವಾರ ಪತ್ರಿಕೆಗಳ ಪುಟಗಳನ್ನು "೬ ಪುಟ"ಗಳೆಂದು ಕತ್ತರಿ ಪ್ರಯೋಗ ಮಾಡುವುದು 'ನವಯುಗ'ಕ್ಕೇ ಸ್ವತಃ ಗೊತ್ತಿರುವಾಗ, ಇತರರಿಗೆ ಈ ಮಾತೇ! "ಸಾಸಿವೆಕಾಳು, ಕುಂಬಳಕಾಯಿಯ" ಮಾತು ಇಷ್ಟು ಬೇಗ ಮರೆತು ಹೋಯಿತೇ?

"ಕಂಠೀರವ" ನದು "……ಮೂವತ್ತು ಮೊಳ"ದ ಉತ್ತರ—'ಹರಕು ಬಾಯಿಯ ಒರಟು ತರ್ಕ'! "ನವಯುಗ" ಯಾವುದಕ್ಕೆ ಎಷ್ಟು ಉತ್ತರಗಳನ್ನು ಬರೆದಿದೆ? ಅದರ ತರ್ಕ ಸರಣಿ ಯಾವುದು? "ನವಯುಗ"ವು ಉತ್ತರ ಕೊಡದ ಸೇಕಡಾ ೯೯ರ ಭಾಗವು "ನಿಜವಾದ ಸಂಗತಿ"ಗಳೆಂದು ತಿಳಿಯಲು ಅಡ್ಡಿ ಏನು? "ಸಂಭಾವಿತತನ"ದ "ದೂರದಲ್ಲೇ ಬೆಟ್ಟು ತೋರಿಸಿ ಗುರುತಿಸುವ" ಅನೇಕ ಸಂಗತಿಗಳು ಆ ಉತ್ತರ ಕೊಡದ ಭಾಗ ದಲ್ಲಿ ಜೆನ್ನಾಗಿ ತೋರಿಬರುತ್ತವೆ. "ನವಯುಗ" ಉತ್ತರ ಕೊಡದೆ ಪಡೆದ ಈ ದಿಗ್ವಿಜಯಕ್ಕೆ ಯಾರೂ ಶಹಬಾಸ್ ಎನ್ನಲೇ ಬೇಕಯ್ಯ! ಏಕೆ? "ನವಯುಗ"ಕ್ಕೆ ಬರುವ ಆ ಎರಡು ಡಜನ್ ಓಣಿ ಬೈಗಳು ಬೀದೀ ಬಸವಿಗೆ ಅಲ್ಲದೆ ಇನ್ಯಾರಿಗೆ ಬಂದೀತು?

ಮಾಜಿ ಡಿ॥ ಬೋರ್ಡ್ ಪ್ರೆಸಿಡೆಂಟರ ಕಾಲದಲ್ಲಿ ಸಿಬಂದಿ ಅವರ ಕೈಕೆಳಗಿನದು; ಕಂಟ್ರಾಕ್ಟರರೇ, ಮೆಂಬರರೇ, ಆದಿ ಯಾಗಿ ಅನೇಕರು ಅವರ ಪಾರ್ಟಿಯವರು; ಹಂಗಿಕರು; ಆಪ್ತರು. ಅವರ ಕಾಲದ "ಅಫೀಶಿಯಲ್ ರಹಸ್ಯ"ವೇನಿದ್ದರೂ, ಅದು ಪ್ರೆಸಿಡೆಂಟರ ಆಪ್ತೇಷ್ಟವರ್ಗದವರಿಂದ ಬಹು ಭದ್ರವಾಗಿ ಸಂರ ಕ್ಷಿಸಲ್ಪಡುತ್ತಿದ್ದಿತು. ಈ ಆಪ್ತೇಷ್ಟರ ಸಿಬಂದಿಯ ಏಳು ಸುತ್ತಿನ ಕೋಟೆಯನ್ನು ದಾಟಿ ಯಾವುದೂ ಹೊರಬರಲು ಕಷ್ಟವಾಗಿ ದ್ದಿತು. ಎಲ್ಲವೂ "ಸುವ್ಯವಸ್ಥೆ" ಎಂದು ಹೊರಗೆ ಪ್ರಕಟವಾಗು ತ್ತಿದ್ದಿತು. ಆದರೆ ಆ ಪ್ರೆಸಿಡೆಂಟರ ಆಡಳಿತವು ಒಮ್ಮೆಗೆ ಸದ್ಯ ಮುಗಿಯುತ್ತಲೇ ಹುಟ್ಟಿದ ಈ ಸುವಾಸನೆಯು ಸುತ್ತಲೂ ಹರಡಿ, ಆಡಳಿತದ ಲಘುಬಿಗುಗಳ ಸನ್ನಾಹಾರವು ಒಂದೊಂದಾಗಿ ಹೊರಗೆ ಬರಲು ಆರಂಭವಾಯಿತು.

"ವೃತ್ತಿ ತೆರಿಗೆಯ ನೋಟೀಸೇ ಹೊರಟಿಲ್ಲ." ಎಂಬಿತ್ಯಾದಿ ಹಲವು ಹುಳುಕುಗಳಿಂದ ಕೂಡಿರುವ ನಮ್ಮ ಹಿಂದಿನ ದರ್ಬಾರು ಸಾಗಬೇಕೇ? ಚುನಾವಣೆಯಾಗಿಯೂ ಕೈಗೆ ಜಾರದ ತುತ್ತು ಯಾರ ದುರದೃಷ್ಟ? ಎಂದು ಮುಂತಾಗಿ ಟೀಕಿಸುವಾಗ, ಸೆಟ್ಟರ ಪತ್ರಿಕೆಯಾದ 'ನವಯುಗ'ಕ್ಕೆ ಸಿಟ್ಟು ಬರುವುದು ಸಹಜ! ಆ ಸಿಟ್ಟಿನಿಂದ ಕಿತಿಕಿತಿಯಾಗಿ 'ನವಯುಗ'ವು ಬಾಯಿಗೆ ಬಂದಂತೆ ಆಡಿದರೆ ಅದನ್ನು ವಿವೇಕಬುದ್ಧಿಯುಳ್ಳವರು ವಿಮರ್ಶಿಸದಿರಲಾರರು.

ಆಸ್ಪತ್ರೆ ಯಾರಿಗೆ? ಬೇರೆ ಪ್ರೆಸಿಡೆಂಟರು ಬಂದರೆ ಎಲ್ಲಿ ಕೆಲಸ ಕೈ ಬಿಟ್ಟು ಹೋದೀತೋ ಎಂದು ಹಗಲಿರುಳು ಚಿಂತಿಸಿ ತಲೆ ಕರಡಾಗಿರುವನರಿಗಲ್ಲವೇ? 'ಬೋರ್ಡಿನ ಆಡಳಿತದ ಹುಳುಕು ಹೊರಗೆ ಬಿದ್ದು 'ಹೇಸಿಗೆ'ಯಾಯಿತಲ್ಲ ಎನ್ನುವವರಿಗಲ್ಲವೇ?

"ಸೆಟ್ರನ್ನು" "ನವಯುಗ"ವು ಸಿಕ್ಕಂತೆ ಹೊಗಳಿದೆಯೇ,-ಇಲ್ಲವೇ "ದಸ್ತಗಿರಿಯ ಪ್ರತಿಪಾದನೆ"ಯನ್ನು "ನವಯುಗ" ಮಾಡಿದೆಯೇ ಇಲ್ಲವೇ ಇದನ್ನು "ನವಯುಗ"ದ ಸಂಚಿಕೆಗಳಲ್ಲೇ ಕಾಣಬಹುದು. "ನವಯುಗ" ತನ್ನ ದಶಂಬರ ತಾ. ೨೬ (೧೯೫೫)ರ ಸಂಚಿಕೆಯಲ್ಲಿ ಹೀಗೆ ಸ್ಪಷ್ಟವಾಗಿ ಹೇಳಿದೆ:—"....ಶ್ರೀ ಉಳ್ಳಾಲ **ನಂಬಿಯಾರರ ದಸ್ತಗಿರಿಯ ವಿಷಯವನ್ನೂ, 'ಕಂಠೀರವ'ವು ಪ್ರತಿಪಾದಿಸಹೋಗಿರುವುದೆಂದರೆ** ಏನೆನ್ನ ಬೇಕು ಅವರ ಮನೋವೃತ್ತಿಗೆ?"

"ನವಯುಗ"ವು "ದಸ್ತಗಿರಿಯ ಪ್ರತಿಪಾದನೆ" ಎಂದು ಮೊದಲು ತಾನು ಬರಹ ಮೂಲಕ ಟೀಕಿಸಿ, ಅನಂತರ ಅದನ್ನೇ ಅಲ್ಲಗಳೆಯುವ ಭರದಲ್ಲಿ "ಕಂಠೀರವ"ನಿಗೆ ಬಯ್ದ ಬಯುಳಿವು:—

"ಕಂಠೀರವವು ಯಾವುದಾದರೂ ದಸ್ತಗಿರಿಯ ಪ್ರತಿ ಪಾದನೆ ಮಾಡಿರುವುದೆಂದು ಹೇಳಿದವರಾರು? ಎಲ್ಲಿ?

ಇದೇನು ನನ್ನ ಬಂಧುವು ಕನವರಿಸುತ್ತಿರುವುದೇ? ಸರಿಯಾಗಿ ಓದದೆ ಏನೇನೆಲ್ಲಾ ತಲೆಗೆ ಹಚ್ಚಿಕೊಂಡು ಮನಬಂದಂತೆ ಬರೆಯು ವುದಕ್ಕಿಂತಲೂ ದೊಡ್ಡ ಬೇಜವಾಬ್ದಾರಿತನವು ಮತ್ತೊಂದಿದೆಯೇ? ಈ ಆರೋಪದ ಶೋಧನನ್ನು ಕಂಠೀರವವು ಎಲ್ಲಿಂದ ಮಾಡಿ ಕೊಂಡುದು? ಬಿಸಿಯೇರಿ ವಿಚಾರವಿವೇಕಗೆಟ್ಟಿರುವ ತನ್ನ ಮೆದುಳಿನಿಂದಲೇ?"

"ನವಯುಗ"ಕ್ಕೆ ಪ್ರತ್ಯಕ್ಷ ಸುಳ್ಳು ಹೇಳುವ ಸಂಕ್ರಾಂತಿ ಹಿಡಿದಿದೆಯೇನು!

ಶ್ರೀ. ಸೆಟ್ಟರ ಕಾಲದಲ್ಲಿ ಅವರ ಸಮಾಜದಿಂದ ಉದ್ಯೋಗ ಸ್ಥಾನಗಳಿಗಾಗಿ ಬಂದ ಅರ್ಜಿ ಎಷ್ಟು? ಕಂಟ್ರಾಕ್ಟರುಗಳ ಮನವಿ ಎಷ್ಟು? ಸೆಟ್ಟರು ಅವರ ಸಮಾಜದವರಿಗೆ ಕೊಟ್ಟ ಉದ್ಯೋಗ ಗಳು, ಕಂಟ್ರಾಕ್ಟುಗಳು ಎಷ್ಟು? ಅವರ ಕಾಲದಲ್ಲಿ ಖಾಲಿ ಬಿದ್ದ ಸ್ಥಾನಗಳೆಷ್ಟು?—ಇವೆಲ್ಲಾ ವಿವರ ಕೊಡದೆ "ಕ್ಷುದ್ರ ಜಾತಿಯ ಕೂಗೆ"ಂದು ಬಾಯಿ ಹಾರಿಸುವಲ್ಲಿ ತಿರುಳಿಲ್ಲ.

ಕಡಿಮೆ ಟೆಂಡರುಗಳನ್ನು ತಯಾರು ಮಾಡುವ ಕ್ರಮ "ಕೆನರಾ ಪ್ರೆಸ್ಸಿ"ಗೆ ಜೆನ್ನಾಗಿ ತಿಳಿಯದೇನೋ! ಪಾಪ! ಡಿ॥ ಬೋ॥ ಪ್ರೆಸಿಡೆಂಟರು ಯಾರು? ಡಿ॥ ಬೋರ್ಡ್ ಸಿಬಂದಿ ಯಾರದು? ಬಾಯಿ ಬುರುಡೆ ಬಿಟ್ಟರೆ ನಂಬುವರೆಷ್ಟು ಮಂದಿ?

ಸಾವಿರಾರು ಪುಟದ ವೋಟರರ ಪಟ್ಟಿ ಅಲ್ಪಾವಧಿಯೊಳಗೇ ಪ್ರಕಟವಾಗಬೇಕೆಂದರೆ, ಯಾವ ಒಂದು ದೊಡ್ಡ ಪ್ರೆಸ್ಸಿನಿಂದಾ ದರೂ ಸಾಧ್ಯವಲ್ಲ. ಕಾರಿನ ತಿರುಗಾಟನೆಂದರೆ ಕೆಲಸವೆಷ್ಟು ಜಾಸ್ತಿ ಎಂದು ವ್ಯಕ್ತ. ಆದರೆ ಆ ಕಾರಿನಲ್ಲಿ....ಕಾನ್ಸರೆನ್ಸಿಗೆ ಬಂದ ಉಸಾಧ್ಯಾಯಿನಿಯರ್ಯಾರೂ ಇರಲಿಲ್ಲ. ದೇವರ ದಯೆ.

ಬೋರ್ಡಿನ ಅಧ್ಯಕ್ಷಸ್ಥಾನದಲ್ಲೇ ಇದ್ದು "ಸಾರ್ವಜನಿಕ ಹಿತಚಿಂತನೆ"ಯನ್ನು ಮೆರೆಯಿಸಬೇಕೆಂದಿಲ್ಲ. ಅಂತಹ ಸಾರ್ವ ಜನಿಕ ಸೇವಕರು ಬೋರ್ಡಿನ ಹೊರಗಿದ್ದೂ ಊರಿಗೆ ಹಲವು ಉಪಕಾರ ಮಾಡಬಹುದಾಗಿದೆ. ಅಧಿಕಾರವೂ "ಸೇವೆ"ಯೂ ಬೇರೆ ಬೇರೆ.

ಕಾಂಗ್ರೆಸ್‌ವಾಲರು ಮಾಡಬೇಕಾದುದು "ರಾಷ್ಟ್ರಸೇವೆ." ರಾಷ್ಟ್ರಸೇವೆಯನ್ನು ಮಾಡಲು ಮುಂದಾದ ಡಿ॥ ಬೋ॥ ಮೆಂಬರರೆಷ್ಟು ಮಂದಿ? ನಾಳೆ ಕಾಂಗ್ರೆಸಿನಲ್ಲಿ ೧ಳಳನೇ ಪ್ರಕ ರಣವನ್ನು ಎಲ್ಲಿಯಾದರೂ ಎಚ್ಚರಗೊಳಿಸುವ ಕೆಲವೊಂದು ಚುರುಕಾದ ರಾಷ್ಟ್ರೀಯ ಕಾರ್ಯಕ್ರಮಗಳು ರೂಪಿತವಾದು ವೆಂದರೆ ಸಾಕು; ನಮ್ಮ ಡಿ॥ ಬೋರ್ಡ್ ಕಾಂಗ್ರೆಸ್ ಮೆಂಬ ರರು ಸೇ॥ 99⅓ ಮಂದಿ "ನಾವಲ್ಲ ವೋಯ್! ಕಾಂಗ್ರೆಸ್ ಮೆಂಬರರು; ಆಗಲೇ ರಾಜಿನಾಮೆ ಬರೆದು ಹಾಕಿದ್ದೇವೆ" ಎನ್ನ ಲಿಕ್ಕಿದ್ದಾರೆ. ಆಗ "ಗೋಮುಖ ವ್ಯಾಘ್ರ"ರ ಸ್ವರೂಪವ ನ್ನು "ನವ ಯುಗ"ಕ್ಕೆ ಜೆನ್ನಾಗಿ ತಿಳಿದೀತು. ಅಷ್ಟೇಕೆ? ಕಾಂಗ್ರೆಸ್ ಜುಬಿಲಿ ಕಾಲದಲ್ಲಿಯೇ ಈ ಮೆಂಬರರ ನಿಸ್ಸೀಮ ರಾಷ್ಟ್ರಭಕ್ತಿಗೆ ಉಜ್ವಲ ನಿದರ್ಶನಗಳು ಸಿಕ್ಕಿಲ್ಲವೇ?

("ನವಯುಗ"ದ ಇದುವರೆಗಿನ ಎಲ್ಲಾ ಕಂತುಗಳು ಈ ಲೇಖದೊಡನೆ ಮರುಪಾವತಿಯಾಗಿದೆ.)

ಶಕ ೧೮೭೭ನೆ ಯುವ ಸಂ ೧೯೫೬ನೇ ಇಸವಿ ಜನವರಿ ಮಾಹೆ ಪಂಚಾಂಗ

ತಾರೀಖು	ವಾರಗಳ ಹೆಸರು	ಚಾಂದ್ರಮಾನ ಮಾಸ	ತಿಥಿ	ಕಾಲ	ಸೌರಮಾನ ಮಾಸ	ತೇದಿ	ನಕ್ಷತ್ರಗಳು ಹೆಸರು	ಕಾಲ	ಸೂರ್ಯ ಉದಯ	ಅಸ್ತ
1	2	3	4	5	6	7	8	9	10	11
				ಘ. ವಿ				ಘ. ವಿ.	ಗಂ. ನಿ.	ಗಂ. ನಿ
22	ಬುಧವಾರ	ಪುಷ್ಯ	13	19 46	ಧನುರ್ಮಾಸ	9	ಮೂಲ	15 57	6 48	6 21
23	ಗುರುವಾರ		14	17 56		10	ಪೂಷಾ.	15 32	6 48	6 21
24	ಶುಕ್ರವಾರ		30	15 59		11	ಉಷಾ.	14 22	6 48	6 22
25	ಶನಿವಾರ		1	11 7	ಪುಷ್ಯ ಶುದ್ಧ ಪಾ	12	ಶ್ರವಣ	12 8	6 48	6 22
26	ಆದಿತ್ಯವಾರ		2	6 41		13	ಧನಿಷ್ಠ	9 8	6 48	6 23
27	ಸೋಮವಾರ		3	1 13		14	ಶತಭಿಷ	5 34	6 48	6 23
28	ಮಂಗಳವಾರ		5	49 40	ನೆಕರ ಶುದ್ಧ ಪಾ	15	ಪೂಭಾ.	1 36	6 48	6 24

ರಾಹುಕಾಲ.

ವಾರ		ಗಂಟೆಯಿಂದ	ಗಂಟೆ ವರೆಗೆ
ಭಾನು	ಸಾಯಂಕಾಲ	4½	6
ಸೋಮ	ಬೆಳಿಗ್ಗೆ	7½	9
ಮಂಗಳ	ಸಾಯಂಕಾಲ	3	4½
ಬುಧ	ಬೆಳಿಗ್ಗೆ	12	1½
ಗುರು	ಸಾಯಂಕಾಲ	1½	3
ಶುಕ್ರ	ಬೆಳಿಗ್ಗೆ	10½	12
ಶನಿ	ಬೆಳಿಗ್ಗೆ	9	10½

ಗುಳಿಕಕಾಲ.

ವಾರ		ಗಂಟೆಯಿಂದ	ಗಂಟೆ ವರೆಗೆ.
ಭಾನು	ಸಾಯಂಕಾಲ	3	4½
ಸೋಮ	,,	1½	3
ಮಂಗಳ	ಬೆಳಿಗ್ಗೆ	12	1½
ಬುಧ	,,	10½	12
ಗುರು	,,	9	10½
ಶುಕ್ರ	,,	7½	9
ಶನಿ	,,	6	7½

REGISTERED NO. M. 1393. ವಾರ್ಷಿಕ ಚಂದಾ ರೂ. 2-8-0. SINGLE COPY ONE ANNA.

ಕಂತೀರವ

KANTEERAVA MANGALORE

THE MOST WIDELY CIRCULATED KANARESE WEEKLY

VOL. XVII MANGALORE, TUESDAY, JANUARY 21, 1936. NO. 42.

ನಮ್ಮ ಬ್ಯಾಲೆನ್ಸ್ ಷೀಟುಗಳೇ ಇರುವ ವಿದ್ಯಮಾನಗಳನ್ನು ಪ್ರಕಟಿಸುತ್ತವೆ.

"ಸ್ವದೇಶಿ"ಯ ಜಾಗ್ರತಿಯ ಕಾಲದಲ್ಲಿ ಸ್ಥಾಪನೆಗೊಂಡ, ಕಲ್ಕತ್ತೆಯ "ನ್ಯಾಶನಲ್" ದಿನದಿನಕ್ಕೂ ಬಲಗೊಂಡು ಪುಷ್ಟಿಯಾಗಿ, ಪರಿಣಾಮದಲ್ಲಿ, ಅದು ಇಂದು ಪೂರ್ವದೇಶಗಳ ಜೀವವಿಮಾ ಕಾರ್ಯಾಲಯಗಳಲ್ಲಿ ಪ್ರಮುಖವೆನ್ನಿಸಿದೆ. ಈ ಸಂಸ್ಥೆಯು, ಈ ವ್ಯಾಪಿಹಾರ ನಡೆಸಿರುವ ಸುಮಾರು 30 ವರ್ಷಗಳ ಕಾಲದಲ್ಲಿ, ಪಾಲಿಸಿದಾರರಿಗೂ, ಅವರ ಹಕ್ಕುದಾರರಿಗೂ ಇಷ್ಟೊಂದು ಅಲ್ಪಾವಧಿಯಲ್ಲಿಯೇ "ಕ್ಲೈಮುಗಳ" ಪಾವತಿಗಾಗಿ 1,30,00,000 ರೂಪಾಯಿಗಳಿಗೂ ಮಿಕ್ಕು ಸಲ್ಲಿಸಿರುವ ದಷ್ಟೇ ಅಲ್ಲದೆ, ಕಂಪೆನಿಯ ಆಸ್ತಿಯ ರೂಪದಲ್ಲಿ ರೂಪಾಯಿ 2,50,00,000ಗಳಿಗೂ ಹೆಚ್ಚಾಗಿ ಸಂಗ್ರಹಿಸಿಡಲೂ ಸಮರ್ಥವಾಗಿದೆ. ಜೀವನದಲ್ಲಿ ಉಳಿಸಲಾದ ಗಂಟಿನೊಡನೆ ಜೂಜಾಡಲು ಬಯಸದವರ ಆತುರಪೂರ್ವಕವಾದ ಆಲೋಚನೆಗೆ ಒಳಗಾಗಲು ಈ ನಿಜ ವಿದ್ಯಮಾನಗಳೇ ಸಾಕೆನ್ನಬಹುದಾಗಿದೆ. ಇದು ನಿಮ್ಮ ಪರ್ಯಾಲೋಚನೆಗೂ ಏತಕ್ಕೆ ಒಳಗಾಗಬಾರದು?

ನಿಮಗೆ ಬೇಕಾದುದೇನೆಂದು ನೀವು ನಮಗೆ ತಿಳಿಸಿದರೇ ಸಾಕು; ಮಿಕ್ಕ ವಿಚಾರಗಳನ್ನೆಲ್ಲ ನಾವೇ ನೋಡಿಕೊಳ್ಳುವೆವು.

ನ್ಯಾಶನಲ್ ಇನ್ಶುರೆನ್ಸ್ ಕಂಪೆನಿ, ಲಿಮಿಟೆಡ್,
ಹೆಡ್ ಆಫೀಸು, ಕಲ್ಕತ್ತ.

ಏಜನ್ಸಿಯ ಶರ್ತಗಳಿಗೆ ಬರೆದುಕೊಳ್ಳಿ:—
ಬ್ರಾಂಚ್ ಸೆಕ್ರಟರಿ, ನ್ಯಾಶನಲ್ ಇನ್ಶೂರೆನ್ಸ್ ಕೊ., ಲಿಮಿಟೆಡ್,
— 362, ಚೈನಾ ಬಜಾರ್ ರೋಡ್, ಎಸ್ಪ್ಲನೇಡ್, ಮದ್ರಾಸ್.

ಅಥವಾ

ದಿ ಆರ್ಗನೈಜಿಂಗ್ ಸೆಕ್ರಟರಿ,
ಸಬ್ ಆಫೀಸ್,
171, ನ್ಯೂ ಸ್ಟ್ರೀಟ್, ಮಧುರೆ.

ದಿ ಚೀಫ್ ಏಜೆನ್ಸಿ,
ಆರ್ಕಾಟ್ ಶ್ರೀನಿವಾಸಾಚಾರಿ ಸ್ಟ್ರೀಟ್,
ಬೆಂಗಳೂರು ಸಿಟಿ.

ಬೆಂಕಿ ಮತ್ತೂ ಮೋಟರ್ ಅವಗಡಗಳ ಇನ್ಶೂರೆನ್ಸಿಗಾಗಿ
ದಿ ಅಸೋಸಿಯೇಟೆಡ್ ನ್ಯಾಶನಲ್ ಫಯರ್ ಮತ್ತೂ ಜನರಲ್ ಇನ್ಶುರೆನ್ಸ್ ಕೋ., ಲಿಮಿಟೆಡ್,
ಎಂಬೀ ಸಂಸ್ಥೆಯೊಡನೆ ವಿಚಾರಿಸಿರಿ.

S. K. M.

ಸಿದ್ಧ ಕಲ್ಪ ಮಕರಧ್ವಜ

(ರಿಜಿಸ್ಟರ್ಡ್)

ನಿಶ್ಶಕ್ತಿ, ನರಗಳ ಬಲಹೀನತೆ, ಅಜೀರ್ಣ, ಉಬ್ಬುಸ, ಮೇಹವ್ಯಾಧಿ, ಮೇಹ ವ್ರಣಗಳು, ಸ್ತ್ರೀ ಸಂಬಂಧದಿಂದುಂಟಾಗುವ ವ್ಯಾಧಿಗಳು, ಸ್ತ್ರೀಯರ ಗರ್ಭಾಶಯ ಮತ್ತು ಸೂತಿಕಾ ಸಂಬಂಧವಾದ ಎಲ್ಲಾ ವ್ಯಾಧಿಗಳು, ಚಿಕ್ಕಂದಿನ ದುರ್ನಡತೆಯ ಪರಿಣಾಮವಾಗಿ ಉಂಟಾಗುವ ವೀರ್ಯಕ್ಷಯ ಮತ್ತು ಬಲಹೀನತೆ ಇವುಗಳಿಗೆಲ್ಲಾ ಮಹಾಮಹಿಮೆಯುಳ್ಳ ದಿವ್ಯೌಷಧ ಇದು ಒಂದೇ. ೨೦ ವರ್ಷಗಳಿಂದ ಪ್ರಖ್ಯಾತಿಹೊಂದಿ ಅನೇಕ ಸುವರ್ಣ ಪದಕಗಳನ್ನೂ ಮತ್ತು ಯೋಗ್ಯತಾಪತ್ರಗಳನ್ನೂ ಹೊಂದಿರುತ್ತದೆ.

ಕ್ರಯ ೬೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ರೂ. ೧೦.

THE MADRAS
AYURVEDIC PHARMACY (LTD.),
Madras—P. O. Box 151, 289 Esplanade,
180, Mount Rd., MADRAS.

THE BANK OF MANGALORE, LTD.,

Head Office:—SRI LAXMINARAYAN BLDGS., CAR ST: MANGALORE. Branch:—MOODABIDRI.

ದಿ ಬೇಂಕ್ ಆಫ್ ಮಂಗಳೂರು, ಲಿಮಿಟೆಡ್, ಮಂಗಳೂರು.

Authorised Capital ಅಧಿಕೃತ ಮೂಲಧನ	Rs. 2,00,000.	Subscribed Capital ಚಂದಾ ಅರ್ಪಿಸಿದ್ದು	Rs. 28,325.	Paid-up Capital ತೆತ್ತು ಬಂದದ್ದು	Rs. 6,025.

STATEMENT OF AFFAIRS AS ON 30TH JUNE 1935.

Capital ಪಾಲು ಹ್ಣೂಲಿಕರಿಂದ ವಸೂಲಾದ ಧನ	ರೂ.	6,025— 0— 0	Furniture and Safe ಟ್ರೆಜರಿ ವಗೈರೆ	ರೂ. 1,050— 0— 0
Reserve Fund ಕ್ಷೇಮ ನಿಧಿ	ರೂ.	500— 0— 0	Authorised Investments ಜಿನ್ನಾಭರಣ, ವ ಇತರ ಜವಾಬ್ದಾರಿಯ ಮೇಲೆ	ರೂ. 94,325—14— 6
Deposits, Fixed, Current, etc. ನಿರಖು, ಚಾಲ್ತಿ ಇತ್ಯಾದಿ ಠೇವಣಾತಿಗಳು	ರೂ.	74,707— 0— 9	Bills per contra ಬಿಲ್ಸ್ ಜಮಾ ಇರುವಂತೆ ಬಹಾ	ರೂ. 16,037— 9— 5
Due to Bankers ಬೇಂಕರರಿಗೆ ಸಲ್ಲುತಕ್ಕದ್ದು	ರೂ.	16,582— 1—10	Sundries ಸಾದಿಲವಾರು	ರೂ. 1,827— 6— 7
Bills for Collection ಜಮಾ ಮಾಡುವರೆ ಇರುವ ಬೀಲುಗಳು	ರೂ.	16,037— 9— 2	Cash in hand and with Bankers at call ಕೈಯಲ್ಲಿ ಇರತಕ್ಕ ವ, ಬೇಂಕರರಲ್ಲಿರತಕ್ಕ ನಗದಿ ತಿಲ್ಕು	ರೂ. 4,130— 1— 2
Sundries ಸಾದಿಲವಾರು	ರೂ.	3,519— 3—11		
	ರೂ.	117,370—15— 8		ರೂ. 117,370—15— 8

Fixed Deposits ನಿರಖು ಠೇವಣಾತಿ.

For 2 years 6½% ಎರಡು ವರ್ಷ ವ್ಯಾಧೆಯವುಗಳಿಗೆ. For 6 months 5% ಆರು ತಿಂಗಳ ವ್ಯಾದೆಯವುಗಳಿಗೆ.
For 1 year 6% ಒಂದು ವರ್ಷ ,, For 3 months 4½% ಮೂರು ತಿಂಗಳ ,,

Current, Savings Bank, Cumulative Deposits are accepted at most favourable rates. ಚಾಲ್ತಿ, ಸೇವಿಂಗ್ಸ್ ಬ್ಯಾಂಕ್, ಕ್ಯುಮುಲೇಟಿವ್ ಎಂಬ ಸಂಚಯದ ಠೇವಣಾತಿಗಳು ಸ್ವೀಕರಿಸೋಣಾಗುವುವು. Drafts on Madras, Bombay, Calicut and Bangalore issued. Bills for collections received. ಮಧ್ರಾಸು, ಮುಂಬಯಿ, ಕಲ್ಲಿಕೋಟೆ, ಮತ್ತು ಬೆಂಗಳೂರುಗಳಿಗೆ ಡ್ರಿಫ್ಟ್‌ಗಳು ಕೊಡಲಾಗುವುವು. ಚಕ್ಸ್ ಮತ್ತು ಬಿಲ್ಸ್ ಒಫ್ ಎಕ್ಸ್‌ಚೆಂಜ್ ಹಿಂದೂಸ್ಥಾನದಲ್ಲೆಲ್ಲಾ ಕಡೆಗಳದ್ದು ವಸೂಲು ಮಾಡಿ ಯಾ, ವಟಾಯಿಸಿಕೊಡಲಾಗುವುವು. Savings Bank Deposits-Interest allowed on daily balances at 4—6—0% ಸೇವಿಂಗ್ಸ್ ಬ್ಯಾಂಕ್ ಡಿಪೊಜಿಟಿನ ದಿವಸಂಪ್ರತಿ ತಿಲ್ಕಿನ ಮೇಲೆ 4—6—0% ಬಡ್ಡಿ ಕೊಡಲ್ಪಡುವುದು.

ALL KINDS OF BANKING BUSINESS UNDERTAKEN.
A FEW SHARES ARE STILL AVAILABLE AT PAR.
APPLY FOR PARTICULARS.

ಸಾಮಾನ್ಯ ಬೇಂಕಿನ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವುವು.
ಮೂಲಬೆಲೆಗೇ ಕೆಲವು ಪಾಲುಗಳೂ ಮಾರಾಟಕ್ಕಿವೆ.
ವಿಶೇಷ ಮಾಹಿತಿ ಬಗ್ಗೆ ಆಫೀಸಿಗೆ ಬರಕೊಳ್ಳುವುದು.